ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಏಪ್ರಿಲ್ 28 ಭಾನುವಾರ 2024

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

45

ಸಂಪುಟ: 45 | ಸಂಚಿಕೆ: 13 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಏಪ್ರಿಲ್ 28 ಭಾನುವಾರ 2024

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 13 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, *website: www.mysurumithra.com*

₹4

ರಿಲ್ಯಾಕ್ಸ್ ಮೂಡ್‌ನಲ್ಲಿ ಶಾಸಕರು



ಕೆ.ಆರ್. ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ, ಶುಕ್ರವಾರ ತಮ್ಮ ಕ್ಷೇತ್ರ ವ್ಯಾಪ್ತಿಯಲ್ಲಿ ನಡೆದ ಲೋಕಸಭಾ ಚುನಾವಣೆಯ ಶೇಕಡಾವಾರು ಮತದಾನದ ಬಗ್ಗೆ ತಮ್ಮ ಕಚೇರಿಯಲ್ಲಿ ಪಕ್ಷದ ಅಧ್ಯಕ್ಷ ಗೋಪಾಲ್‌ರಾಜೇ ಅರಸ್, ಪ್ರಧಾನ ಕಾರ್ಯದರ್ಶಿ ಜೈಶಂಕರ್, ಮುಖಂಡರಾದ ಸೋಮಸುಂದರ, ಪ್ರದೀಪ್‌ಕುಮಾರ್, ಚಂದ್ರಶೇಖರ, ಕೀರ್ತಿ ಅವರೊಂದಿಗೆ ಲೋಕಾಭಿರಾಮವಾಗಿ ಚರ್ಚಿಸಿದರು.

ಪ್ರಚಾರದ ವೇಳೆ ಸಿಹಿ-ಕಹಿ ಅನುಭವಗಳಾಗಿವೆ!

ಅಂತೂ ಇದರಿಂದ ಒಂದು ಹೊಸ ಪಾಠ ಕಲಿತಿದ್ದೇನೆ: ಯದುವೀರ್ ಬಿಚ್ಚು ನುಡಿ

ಮೈಸೂರು,ಏ.27(ಬಿಎಲ್‌ಯು)– ಚುನಾವಣೆ ಪ್ರಚಾರದ ವೇಳೆ ನನಗೆ ಸಿಹಿ–ಕಹಿ ಎರಡೂ ಅನುಭವಗಳಾಗಿವೆ ಎಂದು ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಹೇಳಿದ್ದಾರೆ.

ಕುವೆಂಪುನಗರದ ತಮ್ಮ ಕಚೇರಿಯಲ್ಲಿ ಪತ್ರಕರ್ತರ ಜೊತೆ ಮಾತನಾಡಿದ ಅವರು, ಕಹಿ ಅನುಭವಗಳಿಂದ ನಾನು ಹೊಸ ಪಾಠ ಕಲಿತಿದ್ದೇನೆ ಎಂದರೆ ಹೊರತು, ಯಾವ ರೀತಿಯ ಕಹಿ ಅನುಭವ ಎಂದು ಹೇಳಲಿಲ್ಲ.

ಚುನಾವಣೆ ಮುಗಿಯಿತು ಎಂದು ವಿಶ್ರಾಂತಿ ಬಯಸುವುದಿಲ್ಲ. ಎಂದಿನಂತೆ ನಾನು ಕಾರ್ಯೋನ್ಮುಖನಾಗಿದ್ದೇನೆ. ನಿನ್ನೆಯ ಕೆಲಸ ಕಾರ್ಯಗಳು ಹೇಗಿತ್ತೊ ಇವತ್ತು ಹಾಗೆ ಇರುತ್ತದೆ. ನಿನ್ನೆ ಹಾಗೂ ಇವತ್ತಿಗೆ ಯಾವುದೇ ವ್ಯತ್ಯಾಸವಿಲ್ಲ. ಉಳಿದ ಕೆಲಸಗಳನ್ನು ಇವತ್ತು ಮಾಡುತ್ತಿದ್ದೇನೆ.

ಬೆಂಗಳೂರು ಸೇರಿದಂತೆ ಕೆಲವು ಸ್ಥಳಗಳಿಗೆ ಹೋಗಬೇಕಿದೆ. ಕೆಲವರನ್ನು ಭೇಟಿ ಮಾಡಿ ಕೃತಜ್ಞತೆ ಸಲ್ಲಿಸಬೇಕಿದೆ ಎಂದರು.

ಗೋರಖ್‌ಪುರ್ ಹಾಗೂ ಅಯೋಧ್ಯೆ ಕ್ಷೇತ್ರಗಳಿಗೆ ಭೇಟಿ ನೀಡಿ ಅಲ್ಲಿ ಪ್ರಚಾರದಲ್ಲಿ ಪಾಲ್ಗೊಳ್ಳುವೆ. ಉತ್ತರ ಕರ್ನಾಟಕದಲ್ಲಿ ಬಿಜೆಪಿ ಪ್ರಚಾರಕ್ಕೆ ಪಕ್ಷದ ನಾಯಕರು ಆಹ್ವಾನಿಸಿದರೆ ಹೋಗಲು ಸಿದ್ಧವಿರುವುದಾಗಿ ಹೇಳಿದರು. ಚುನಾವಣೆಯಲ್ಲಿ ನಾನು ಗೆದ್ದೆ ಗೆಲ್ಲುತ್ತೇನೆ ಎಂದು ವಿಶ್ವಾಸದಿಂದ ಹೇಳುತ್ತೇನೆ. ಆದರೆ ಇಂತಿಷ್ಟೆ ಮತಗಳ ಅಂತರದಿಂದ ಗೆಲ್ಲುತ್ತೇನೆ ಎಂದು ಲೆಕ್ಕಾಚಾರ ಹಾಕಿ ಹೇಳಲು ಆಗುವುದಿಲ್ಲ ಎಂದರು.

ರಾಜ್ಯ ಮಾತ್ರವಲ್ಲದೆ ದೇಶದಲ್ಲಿ ಬಿಜೆಪಿ ಜಯಭೇರಿ ಬಾರಿಸಲಿದೆ. ನಾವು ನಿರೀಕ್ಷೆ ಮಾಡಿದಷ್ಟು ಸ್ಥಾನಗಳು ಬಿಜೆಪಿಗೆ ಬರಲಿದೆ ಎಂದು ಯದುವೀರ್ ವಿಶ್ವಾಸ ವ್ಯಕ್ತಪಡಿಸಿದರು.



ಮೈಸೂರಿನ ಕುವೆಂಪುನಗರದ ತಮ್ಮ ಕಚೇರಿಯಲ್ಲಿ ಶನಿವಾರ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ 'ಮೈಸೂರು ಮಿತ್ರ'ನ ತದೇಕಚಿತ್ತದಿಂದ ಓದುತ್ತಿರುವುದು.

ಮಗ ಆದ್ಯವೀರ್‌ನನ್ನು ತುಂಬಾ ಮಿಸ್ ಮಾಡಿಕೊಂಡಿದ್ದೆ

ಕಳೆದ ಒಂದು ತಿಂಗಳಿಂದ ನಿರಂತರ ಪ್ರಚಾರದಲ್ಲಿ ತೊಡಗಿದ್ದೆ. ಆ ಸಂದರ್ಭದಲ್ಲಿ ಮಗ ಆದ್ಯವೀರ್‌ನನ್ನು ತುಂಬಾ ಮಿಸ್ ಮಾಡಿಕೊಂಡಿದ್ದೆ ಎಂದು ಯದುವೀರ್ ಹೇಳಿದರು. ನನ್ನ ಮಗನಿಗೆ ಸಮಯ ಕೊಡಲು ಸಾಧ್ಯವೇ ಆಗಿರಲಿಲ್ಲ. ಕೆಲವು ಕ್ಷಣ ಸಿಕ್ಕಾಗ ಆತನೊಂದಿಗೆ ಇರುತ್ತಿದ್ದೆ. ಆ ಸಂದರ್ಭದಲ್ಲಿ ನನ್ನ ಜೊತೆಯಲ್ಲಿ ಇಲ್ಲವಲ್ಲ ಎಂದು ಮಗ ಕೇಳುತ್ತಿದ್ದಾಗ ನನಗೆ ನೋವಾಗುತ್ತಿತ್ತು. ಆದರೆ ಈಗ ಚುನಾವಣೆ ಮುಗಿದಿದೆ. ಮಗ ಹಾಗೂ ಕುಟುಂಬದವರ ಜೊತೆ ಸಮಯ ಕಳೆಯಲು ಸಮಯಾವಕಾಶ ಸಿಕ್ಕಿದೆ ಎಂದರು. ಚುನಾವಣೆ ಸಂದರ್ಭದಲ್ಲಿ ನನ್ನ ಪತ್ನಿ ಹಾಗೂ ತಾಯಿ ತುಂಬಾ ಸಹಕಾರ ನೀಡಿದರು. ಅದನ್ನು ಎಂದೂ ಮರೆಯುವುದಿಲ್ಲ, ಅವರಿಗೆ ಆಭಾರಿಯಾಗಿದ್ದೇನೆ ಎಂದು ಹೇಳಿದರು.

ಮೈಸೂರು ಕೊಡಗು ಲೋಕಸಭಾ ಕ್ಷೇತ್ರದಲ್ಲಿ ನನಗೆ ಜನರು ಸಂಪೂರ್ಣ ಸಹಕಾರ ನೀಡಿದ್ದಾರೆ. ಜನರ ಜೊತೆ ಬೆರೆಯುವುದು ಒಳ್ಳೆಯ ಕ್ಷಣ ಅನಿಸಿತು. ಎಲ್ಲೆಡೆ ಜನರು ತುಂಬು ಹೃದಯದ ಪ್ರೀತಿ ತೋರಿಸಿದರು. ಜನರ ಪ್ರೀತಿ ನೋಡಿ ನನಗೆ ಬಹಳ ಸಂತೋಷವಾಯಿತು ಎಂದು ಯದುವೀರ್ ತಿಳಿಸಿದರು.

'ಮೈಸೂರು ಮಿತ್ರ' ಓದಿ ಚುನಾವಣೆ ಮಾಹಿತಿ ಪಡೆದ ಯದುವೀರ್

ಮೈಸೂರಿನ ಕುವೆಂಪುನಗರದ ತಮ್ಮ ಕಚೇರಿಗೆ ಆಗಮಿಸಿದ ವೇಳೆ ಯದುವೀರ್ 'ಮೈಸೂರು ಮಿತ್ರ' ಪತ್ರಿಕೆಯನ್ನು ಓದಿದರು. ನಿನ್ನೆ ನಡೆದ ಚುನಾವಣೆಯಲ್ಲಿ ಶೇಕಡವಾರು ಎಷ್ಟು ಮತದಾನವಾಗಿದೆ, ಯಾರ್‍ಯಾರು ಮತದಾನ ಮಾಡಿದ್ದಾರೆ ಸೇರಿದಂತೆ ಚುನಾವಣೆಗೆ ಸಂಬಂಧಿಸಿದಂತೆ ಬಹಳಷ್ಟು ವಿಚಾರಗಳನ್ನು 'ಮೈಸೂರು ಮಿತ್ರ' ಓದಿ ಯದುವೀರ್ ಮಾಹಿತಿ ಪಡೆದುಕೊಂಡರು. ಕಳೆದ ಒಂದು ತಿಂಗಳ ಅವಧಿಯಲ್ಲಿ ಬಿಡುವಿಲ್ಲದ ಪ್ರಚಾರದಲ್ಲಿ ತೊಡಗಿದ್ದ ಯದುವೀರ್ ಇಂದು ಪತ್ರಿಕೆಗಳ ತಿರುವಿ ಹಾಕಲು ಕೆಲವು ಸಮಯ ಮೀಸಲಿಟ್ಟರು.

ದಿನ ಪೂರ್ತಿ ಚಟುವಟಿಕೆಯಲ್ಲಿದ್ದ ಯದುವೀರ್ ಒಡೆಯರ್!

ಚುನಾವಣೆ ಮುಗಿಯಿತೆಂದು ಕೆಲವು ಅಭ್ಯರ್ಥಿಗಳು ನಾಟ್ ರೀಚಬಲ್ ಆಗುತ್ತಾರೆ. ಕೆಲವರು ರೆಸಾರ್ಟ್‌ಗೆ ತೆರಳಿದರೆ, ಮತ್ತೆ ಕೆಲವರು ಫೋನ್ ಸ್ವಿಚ್‌ಆಫ್ ಮಾಡಿ ದಿನ ಪೂರ್ತಿ ವಿಶ್ರಾಂತಿಗೆ ಜಾರುತ್ತಾರೆ. ಆದರೆ ಕಳೆದ ಒಂದು ತಿಂಗಳಿಂದ ಬೆಳಿಗ್ಗೆಯಿಂದ ರಾತ್ರಿ ತನಕ ಪ್ರಚಾರದಲ್ಲಿ ತೊಡಗಿದ್ದ ಯದುವೀರ್ ಇಂದು ವಿಶ್ರಾಂತಿ ಪಡೆಯದೆ ದಿನ ಪೂರ್ತಿ ಚಟುವಟಿಕೆಯಿಂದಿದ್ದರು. ಸಾಮಾನ್ಯವಾಗಿ ಪ್ರತಿನಿತ್ಯ ಬೆಳಿಗ್ಗೆ 6 ರಿಂದ 7 ಗಂಟೆವರೆಗೆ ಯದುವೀರ್ ಅರಮನೆ ಆವರಣದಲ್ಲಿ ವಾಕ್ ಮಾಡುತ್ತಾರೆ. ಆದರೆ ಚುನಾವಣೆ ಹಿನ್ನೆಲೆಯಲ್ಲಿ ಕಳೆದ ಒಂದು ತಿಂಗಳಿನಿಂದ ವಾಕ್ ಮಾಡಿರಲಿಲ್ಲ. ಆದರೆ ಇಂದು ಬೆಳಿಗ್ಗೆ ಎಂದಿನಂತೆ 6 ರಿಂದ 7 ಗಂಟೆ ತನಕ ವಾಕ್ ಮಾಡಿದರು. ತರುವಾಯ ಲಕ್ಷ್ಮಿಪುರಂನಲ್ಲಿರುವ ತಮ್ಮ ತಂದೆ ಮನೆ ಕಲ್ಪನಾಗೆ ಭೇಟಿ ನೀಡಿ ಸ್ವಲ್ಪ ಸಮಯ ಕುಟುಂಬ ಸದಸ್ಯರೊಡನೆ ಕಾಲ ಕಳೆದು ಉಪಹಾರ ಸ್ವೀಕರಿಸಿದರು.

ನಂತರ ಕುವೆಂಪುನಗರದ ತಮ್ಮ ಕಚೇರಿಗೆ ಭೇಟಿ ನೀಡಿದ ಯದುವೀರ್, ಮೈಸೂರು–ಕೊಡಗು ಲೋಕಸಭಾ ಕ್ಷೇತ್ರ ವ್ಯಾಪ್ತಿಯ 8 ವಿಧಾನಸಭಾ ಕ್ಷೇತ್ರಗಳಲ್ಲಿ ಬಿಜೆಪಿ ಪರವಾಗಿ ಎಷ್ಟು ಮತ ಬಂದಿರಬಹುದು ಎಂದು ಕ್ಷೇತ್ರದ ಹಿರಿಯ ನಾಯಕರಿಂದ ದೂರವಾಣಿ ಕರೆ ಮೂಲಕ ಮಾಹಿತಿ ಪಡೆದರು.

ಇದೇ ವೇಳೆ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಜೊತೆ ಕೂಡ ದೂರವಾಣಿಯಲ್ಲಿ ಚರ್ಚೆ ನಡೆಸಿದರು. ನೀವು ಗೆದ್ದೆ ಗೆಲ್ಲುತ್ತೀರಾ, ನೀವು ಸೇಫರ್ ಜೋನ್‌ನಲ್ಲಿದ್ದೀರಾ ಎಂದು ವಿಜಯೇಂದ್ರ ಯದುವೀರ್‌ಗೆ ವಿಶ್ವಾಸದ ನುಡಿಗಳನ್ನಾಡಿದರು ಎನ್ನಲಾಗಿದೆ. ಇದೇ ಸಂದರ್ಭದಲ್ಲಿ ತಮ್ಮ ಸ್ನೇಹಿತ ನಿಖಿಲೇಶ್ ಜೊತೆ ಯದುವೀರ್ ಲೋಕಾಭಿರಾಮವಾಗಿ ಮಾತನಾಡುತ್ತಾ ಸಮಯ ಕಳೆದರು.

ವಿಶೇಷ ಶಸ್ತ್ರ ಚಿಕಿತ್ಸೆ; ಮಹಿಳಾ ಪೊಲೀಸ್ ಅಧಿಕಾರಿ ಚೇತರಿಕೆ

ನಡೆಯಲಾಗದ ಮಹಿಳೆ ಚೇತರಿಕೆ, ಎಂದಿನಂತೆ ಓಡಾಟ

ಮೈಸೂರು,ಏ.27(ಜಿಎ)–ಮೈಸೂರಿನ ನಾರಾಯಣ ಆಸ್ಪತ್ರೆಯಲ್ಲಿ ಅರ್ತ್ರೋಸ್ಕೋಪಿಕ್ ಟಿಬಿಯಲ್ ಆಸ್ಟಿಯೊ ಕಾಂಡ್ರಲ್ ಟ್ರಾನ್ಸ್‌ಪ್ಲಾಂಟೇಶನ್ ಎಂಬ ವಿಶೇಷ ವಿಧಾನದ ಮೂಲಕ ಮೊಣಕಾಲಿಗೆ ಶಸ್ತ್ರಚಿಕಿತ್ಸೆ ನಡೆಸಿ 46 ವರ್ಷದ ಮಹಿಳಾ ಪೊಲೀಸ್ ಅಧಿಕಾರಿಯ ಚಲನಶೀಲತೆಯನ್ನೂ ಮರುಸ್ಥಾಪನೆ ಮಾಡಲಾಗಿದೆ ಎಂದು ಆಸ್ಪತ್ರೆಯ ಕನ್ಸಲ್ಟೆಂಟ್ ಆರ್ಥೋಪೆಡಿಕ್ ಸರ್ಜನ್ ಡಾ.ಉಮೇಶ್ ಚೌಡಯ್ಯ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು. ಅಪಘಾತದ ವೇಳೆ ಮೊಣಕಾಲಿನ ಮೂಳೆಯಿಂದ ಮೂಳೆಗೆ ಸಂಬಂಧ ಕಲ್ಪಿಸುವ ಭಾಗದ ಅಂಗಾಂಶಕ್ಕೆ ಹಾನಿಯಾಗಿ ನಡೆಯಲೂ ಸಾಧ್ಯವಾಗದ ಪರಿಸ್ಥಿತಿ ತಲುಪಿದ್ದ ಸುಮಾರು 46 ವರ್ಷದ ಮಹಿಳಾ ಪೊಲೀಸ್ ಅಧಿಕಾರಿಗೆ ಅರ್ತ್ರೋಸ್ಕೋಪಿಕ್ ಟಿಬಿಯಲ್ ಆಸ್ಟಿಯೊ ಕಾಂಡ್ರಲ್ ಟ್ರಾನ್ಸ್ ಪ್ಲಾಂಟೇಶನ್ ಎಂಬ ಅತ್ಯಾಧುನಿಕ ಶಸ್ತ್ರಚಿಕಿತ್ಸೆ ನಡೆಸಿ ಸಾಮಾನ್ಯ ಪರಿಸ್ಥಿತಿಗೆ ತರಲಾಗಿದೆ ಎಂದು ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದ ಆಸ್ಪತ್ರೆ ವೈದ್ಯಕೀಯ ನಿರ್ದೇಶಕ ಡಾ.ಎಂ.ಎನ್.ರವಿ ತಿಳಿಸಿದರು.

ಈ ತಂತ್ರಜ್ಞಾನದಿಂದ ಅಪಘಾತದ ವೇಳೆ ರೋಗಿಗೆ ಅಸ್ಥಿರಜ್ಜುಗಳು ಹರಿದು ಹೋಗಿದ್ದವು. ಹೀಗಾಗಿ ಅವರದೇ ದೇಹದ ಇತರೆ ಭಾಗದಿಂದ ಅಸ್ಥಿರಜ್ಜುಗಳನ್ನು ತೆಗೆದು ಹಾನಿಗೊಂಡ ಭಾಗಕ್ಕೆ ಅಳವಡಿಸಲಾಗಿದೆ. ಇದು ಶಾಶ್ವತವಾದ ಚೇತರಿಕೆಗೆ ಕಾರಣವಾಗುತ್ತದೆ. ಈ ಶಸ್ತ್ರಚಿಕಿತ್ಸೆ ನಂತರ ರೋಗಿಯೂ ಸಾಮಾನ್ಯರಂತೆ ಜೀವನ ನಡೆಸುತ್ತಿದ್ದಾರೆ. ಸಾಮಾನ್ಯವಾಗಿ ಈ ರೀತಿಯ ಅಪಘಾತಗಳು ಕ್ರೀಡಾ ಪಟುಗಳಲ್ಲಿ ಕಾಣಿಸಿಕೊಳ್ಳುತ್ತದೆ. ಅವರಿಗೆ ಅರ್ತ್ರೋಸ್ಕೋಪಿಕ್ ಟಿಬಿಯಲ್ ಆಸ್ಟಿಯೊ ಕಾಂಡ್ರಲ್ ಟ್ರಾನ್ಸ್ ಪ್ಲಾಂಟೇಶನ್ ವಿಧಾನ ಉಪಯುಕ್ತವಾಗಿದೆ ಎಂದರು. ಗೋಷ್ಠಿಯಲ್ಲಿ ಆಸ್ಪತ್ರೆಯ ಕ್ಲಿನಿಕಲ್ ಡೈರೆಕ್ಟರ್ ಡಾ.ಎಂ.ಎನ್.ರವಿ ಉಪಸ್ಥಿತರಿದ್ದರು.

ಸಿಇಟಿ ವಿದ್ಯಾರ್ಥಿಗಳಿಗೆ ಓಪನ್ ಡೇ ಕಾರ್ಯಕ್ರಮ

ಪರೀಕ್ಷೆ ಬರೆದಿರುವ ವಿದ್ಯಾರ್ಥಿಗಳಿಗೆ ಮುಂದಿನ ಆಯ್ಕೆ ಬಗ್ಗೆ ಮಾಹಿತಿ

ಮೈಸೂರು,ಏ.27(ಜಿಎ)–ಸಿಇಟಿ ಪರೀಕ್ಷೆ ಬರೆದಿರುವ ವಿದ್ಯಾರ್ಥಿಗಳ ಮುಂದಿನ ಆಯ್ಕೆಗಳ ಬಗ್ಗೆ ತಿಳಿದುಕೊಳ್ಳಲು ಮೈಸೂರಿನ ಗೋಕುಲಂ 3ನೇ ಹಂತದಲ್ಲಿರುವ ವಿದ್ಯಾವರ್ಧಕ ಎಂಜಿನಿಯರಿಂಗ್ ಕಾಲೇಜಿನಲ್ಲಿ ಏ.28ರಂದು ಬೆಳಗ್ಗೆ 10.30ಕ್ಕೆ ಓಪನ್ ಡೇ ಎಂಬ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಪ್ರಾಂಶುಪಾಲ ಡಾ.ಬಿ. ಸದಾಶಿವೇಗೌಡ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಸಿಇಟಿ ಬರೆದಿರುವ ಎಲ್ಲಾ ಪಿಯುಸಿ ವಿದ್ಯಾರ್ಥಿಗಳಿಗಾಗಿ ಯಾವ ವಿಭಾಗದ ವಿದ್ಯಾಭ್ಯಾಸ ಮುಂದುವರಿಸಬೇಕು, ಯಾವ ವಿಭಾಗಕ್ಕೆ ಹೆಚ್ಚಿನ ಆದ್ಯತೆ ಇದೆ ಎಂಬ ಬಗ್ಗೆ ಮಾಹಿತಿ ನೀಡಲು ಈ ಓಪನ್ ಡೇ ಎಂಬ ಕಾರ್ಯಕ್ರಮ ಏರ್ಪಡಿಸಿದ್ದು, ನುರಿತ ತಜ್ಞರಾದ ಇನ್ಫೋಸಿಸ್‌ನ ಅಸೋಸಿಯೇಟ್ ಉಪಾಧ್ಯಕ್ಷ ಕೆ.ಎಸ್.ಸುಂದರ್, ಬೆಂಗಳೂರಿನ ಇಂಟೆಲ್ ಕಾರ್ಪೊರೇಷನ್ ಸಿಸ್ಟಮ್ ಆನ್ ಚಿಪ್ (SOC) ಡಿಸೈನ್ ಎಂಜಿನಿಯರ್ ರವೀಂದ್ರ ವೆಂಕಟೇಶ್ ಮತ್ತು ಸಿಇಟಿ ನೋಡಲ್ ಅಧಿಕಾರಿ ಉದಯ ಶಂಕರ್ ಸಲಹೆ ನೀಡಲಿದ್ದಾರೆ ಎಂದರು.

ಈ ವೇಳೆ ವಸ್ತುಪ್ರದರ್ಶನ ಸಹಾ ಇರಲಿದ್ದು, ಹೊಸ ಹೊಸ ಆವಿಷ್ಕಾರ ವಿವರಿಸಲಾಗುವುದು, ಸಿಇಟಿ ಆಪ್ಶನ್ ಎಂಟ್ರಿ ಎಂಬ ಪ್ರಾತ್ಯಕ್ಷಿಕೆ ಸಹಾ ಇರಲಿದೆ. ವಿದ್ಯಾರ್ಥಿಗಳು, ಪೋಷಕರು ಪಾಲ್ಗೊಳ್ಳಬಹುದಾಗಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಸಹ ಪ್ರಾಧ್ಯಾಪಕರಾದ ಡಾ. ಮಧುಸೂದನ್, ಡಾ.ಅರುಣ್ ದೀಕ್ಷಿತ್ ಇದ್ದರು.

ಕೆಎಂಪಿಕೆ ಟ್ರಸ್ಟ್ ವಿವಿಧೆಡೆ ಪಕ್ಷಿಗಳಿಗೆ ನೀರಿನ ವ್ಯವಸ್ಥೆ



ಮೈಸೂರು ಲಕ್ಷ್ಮಿಪುರಂನಲ್ಲಿರುವ ಮರಗಳಿಗೆ ಕೆಎಂಪಿಕೆ ಟ್ರಸ್ಟ್ ಹಾಗೂ ಅರಿವು ಸಂಸ್ಥೆ ವತಿಯಿಂದ 30ರಿಂದ 40ಕ್ಕೂ ಹೆಚ್ಚು ಕಡೆಗಳಲ್ಲಿ ಸಣ್ಣ ಪ್ರಾಣಿಗಳು–ಪಕ್ಷಿಗಳ ದಾಹ ನೀಗಲು ನೀರಿನ ಅರವಟ್ಟಿಗೆ ಅಳವಡಿಸಲಾಯಿತು. ಕೆಎಂಪಿಕೆ ಟ್ರಸ್ಟ್ ಅಧ್ಯಕ್ಷ ವಿಕ್ರಂ ಅಯ್ಯಂಗಾರ್, ಕೆ.ಆರ್.ಬ್ಯಾಂಕ್ ಉಪಾಧ್ಯಕ್ಷ ಬಸವರಾಜ್ ಬಸಪ್ಪ, ಗಿರೀಶ್ ರಾಮ್ ಮೂರ್ತಿ, ಎಸ್.ಎನ್.ರಾಜೇಶ್, ಶ್ರೀಕಾಂತ್ ಕಶ್ಯಪ್, ಭೈರತಿ ಲಿಂಗರಾಜು, ಚಕ್ರಪಾಣಿ, ಮಹೇಶ್ ಕುಮಾರ್, ಭಂಡಾರಿ, ದಯಾನಂದ್ ಇನ್ನಿತರರು ಹಾಜರಿದ್ದರು.



ವರುಣ ಕ್ಷೇತ್ರದ ವ್ಯಾಪ್ತಿಯ ಹೆಜ್ಜಿಗೆ ಗ್ರಾಮದಲ್ಲಿ ಮಾಜಿ ಶಾಸಕ ಶ್ರೀನಿವಾಸಯ್ಯ ಮತದಾನ ಮಾಡಿದರು. ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ದಯಾನಂದ, ಗಿರೀಶ್, ಹೆಜ್ಜಿಗೆ ಭಾಸ್ಕರ್, ಪ್ರಸನ್ನಕುಮಾರ, ಗ್ರಾಮ ಪಂಚಾಯಿತಿ ಸದಸ್ಯ ರಮೇಶ್, ಪುಟ್ಟಣ್ಣ, ಗ್ರಾಮದ ಮುಖಂಡರು ಹಾಜರಿದ್ದರು.

ನಾಳೆಯಿಂದ ಪ್ರೊಸ್ಟೇಟ್ ಗ್ರಂಥಿ ತಪಾಸಣಾ ಶಿಬಿರ

ಮೈಸೂರು,ಏ.27–ಸುಯೋಗ್ ಆಸ್ಪತ್ರೆ ವತಿಯಿಂದ ಏ.29ರಿಂದ ಮೇ 5ರವರೆಗೆ ಬೆಳಗ್ಗೆ 10ಗಂಟೆಯಿಂದ ಸಂಜೆ 6ರವರೆಗೆ ಪ್ರೊಸ್ಟೇಟ್ ಗ್ರಂಥಿಯ ಉಚಿತ ತಪಾಸಣಾ ಶಿಬಿರವನ್ನು ಏರ್ಪಡಿಸಲಾಗಿದೆ. ಶಿಬಿರದಲ್ಲಿ ಮೂತ್ರ ವಿಸರ್ಜನೆಯ ತೊಂದರೆಗಳು, ಮೂತ್ರ ಹಿಡಿದಂತಾಗುವುದು, ಮೂತ್ರ ಕಟ್ಟಿಕೊಳ್ಳುವುದು, ಮೂತ್ರದಲ್ಲಿ ರಕ್ತ ವಿಸರ್ಜನೆ ಮುಂತಾದ ಸಮಸ್ಯೆಗಳಿರುವ ರೋಗಿಗಳು ಶಿಬಿರದಲ್ಲಿ ಪಾಲ್ಗೊಂಡು ಈ ಶಿಬಿರದ ಉಪಯೋಗವನ್ನು ಪಡೆಯಬೇಕೆಂದು ಕೋರಲಾಗಿದೆ. ಮಾಹಿತಿಗೆ ಆಸಕ್ತರು 0821–2566966, 9986399862 ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬಹುದಾಗಿದೆ.

ಸಪ್ತರ್ಷಿ ಗುರುಕುಲ ಸೇವಾ ಆಶ್ರಮಕ್ಕೆ ಅರ್ಜಿ ಆಹ್ವಾನ

ಮೈಸೂರು, ಏ.27–ನಗರದ ಕೆಆರ್‌ಎಸ್ ರಸ್ತೆಯ ಮಂಟಿಯ ಸಮೀಪವಿರುವ ಸಾದನಹಳ್ಳಿ ಸಪ್ತರ್ಷಿ ಗುರುಕುಲ ಆಶ್ರಮಕ್ಕೆ ಉಚಿತ ವಿದ್ಯಾರ್ಥಿನಿಲಯಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ಆಶ್ರಮದಲ್ಲಿ ಓದ ಬಯಸುವವರಿಗೆ ವೇದ, ಸಂಸ್ಕೃತ, ಪ್ರಾಚೀನ ಗುರುಕುಲ ಪದ್ಧತಿಯಂತೆ ಶಿಕ್ಷಣ ಅಭ್ಯಾಸ ಹಾಗೂ ಪ್ರಾಥಮಿಕ, ಪ್ರೌಢಶಾಲೆ, ಕಾಲೇಜು ಹಂತದಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ಉಚಿತವಾಗಿ ಊಟ, ವಸತಿಯನ್ನು ಕಲ್ಪಿಸಲಾಗುವುದು. ಆಸಕ್ತರು ಹೆಚ್ಚಿನ ಮಾಹಿತಿಗಾಗಿ ಸೇವಾಶ್ರಮದ ಪೀಠಾಧ್ಯಕ್ಷರಾದ ಡಾ.ಅಭಿನವ ರಾಮಾನುಜರನ್ನು ಸಂಪರ್ಕಿಸಬಹುದು. ಹೆಚ್ಚಿನ ಮಾಹಿತಿಗಾಗಿ ಮೊ. 9481319111 ಅಥವಾ 8861573934 ಸಂಪರ್ಕಿಸಬಹುದು.

ಭ್ರೂಣಲಿಂಗ ಪತ್ತೆ ಪ್ರಕರಣದ ಕಮಿಷನ್ ಗಿರಾಕಿಗಳ ವಿರುದ್ಧ ಉದಯಗಿರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲು

ಮೈಸೂರು,ಏ.27– ಮಂಡ್ಯದಲ್ಲಿ ನಡೆದಿದ್ದ ಭ್ರೂಣಲಿಂಗ ಪತ್ತೆ ಹಾಗೂ ಹತ್ಯೆ ಪ್ರಕರಣದಲ್ಲಿ ಕಮಿಷನ್ ಹಣ ಹಂಚಿಕೊಂಡಿದ್ದ 17 ಮಂದಿ ವಿರುದ್ಧ ಮೈಸೂರಿನ ಉದಯಗಿರಿ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಮೈಸೂರು ಜಿಲ್ಲಾ ಕುಟುಂಬ ಕಲ್ಯಾಣಾಧಿಕಾರಿ ನೀಡಿದ ದೂರಿನ ಮೇರೆಗೆ ಶಿವನಂಜೇಗೌಡ, ನಯನ್ ಕುಮಾರ್, ಸುನಂದಾ ಸೇರಿದಂತೆ ಒಟ್ಟು 17 ಮಂದಿ ವಿರುದ್ಧ ಐಪಿಸಿ–1860(ಯು/ಎಸ್ 312, 314, 315, 316) ದಿ ಮೆಡಿಕಲ್ ಟರ್ಮಿನೇಷನ್ ಆಫ್ ಪ್ರೆಗ್ನೆನ್ಸಿ ಆಕ್ಟ್ 1971(ಯು/ಎಸ್–4) ಅಡಿಯಲ್ಲಿ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಶಿವನಂಜೇಗೌಡ, ನಯನ್‌ಕುಮಾರ್ ಹಾಗೂ ಸುನಂದ ಅಕ್ರಮವಾಗಿ ಹಣ ಸಂಪಾದಿಸುವ ಉದ್ದೇಶದಿಂದ ಅವರು ನಡೆಸುತ್ತಿದ್ದ ಲ್ಯಾಬ್‌ಗಳಿಗೆ ಪರೀಕ್ಷೆಗೆಂದು ಬರುತ್ತಿದ್ದ ಗರ್ಭಿಣಿಯರು ಹಾಗೂ ಮಧ್ಯವರ್ತಿಗಳಾದ ಡಾ.ತುಳಸೀರಾಮ್, ಸಿದ್ದೇಶ್, ಪುಟ್ಟರಾಜು, ಎ.ಎಲ್.ಸತ್ಯ, ಅಭಿಷೇಕ್ ಗೌಡ ಹಾಗೂ ಧನಂಜಯ್‌ಗೌಡ ಕರೆತರುತ್ತಿದ್ದ ಗರ್ಭಿಣಿಯರಿಗೆ ಭ್ರೂಣ ಪತ್ತೆ ಮಾಡಿಸುತ್ತಿದ್ದರು.

ನಯನ್ ಕುಮಾರ್, ನವೀನ್ ಕುಮಾರ್ ಸಂಬಂಧಿಕರಿಗೆ ಸೇರಿದ್ದ ಮಂಡ್ಯ ಜಿಲ್ಲೆ, ಹಾಡ್ಯ ಗ್ರಾಮದ ಜಮೀನಿನಲ್ಲಿರುವ ಆಲೆಮನೆಯಲ್ಲಿ ವೀರೇಶ್ ಮುಖಾಂತರ ಗರ್ಭಿಣಿಯರಿಗೆ ಸ್ಕ್ಯಾನಿಂಗ್ ಮಾಡಿಸಿ, ಹೆಣ್ಣು ಮಗುವೆಂದು ತಿಳಿದು ಬಂದರೆ ಡಾ.ಚಂದನ್ ಬಲ್ಲಾಳ್‌ಗೆ ಸೇರಿದ ಮೈಸೂರಿನ ಮಾತಾ ಆಸ್ಪತ್ರೆ ಮತ್ತು ಆಯುರ್ವೇದಿಕ್ ಡೇ ಕೇರ್ ಸೆಂಟರ್‌ಗಳಿಗೆ ಕಳುಹಿಸಿ, ಮೀನಾ, ರಿಜ್ಮಾಖಾನಂ, ನಿಸಾರ್ ಅಹಮದ್ ಹಾಗೂ ಮಂಜುಳಾ ಮೂಲಕ ಗರ್ಭಿಣಿ ಮಹಿಳೆಯರ ಗರ್ಭಪಾತ ಮಾಡಿ, ಭ್ರೂಣಗಳನ್ನು ನಿಸಾರ್ ಅಹಮದ್ ಮೂಲಕ ವಿಲೇವಾರಿ ಮಾಡಿಸುತ್ತಿದ್ದರು. ಅಲ್ಲಿ ಒಪ್ಪದ ಗರ್ಭಿಣಿಯರನ್ನು ಉಷಾರಾಣಿ ಮೂಲಕ ಮೈಸೂರಿನ ಚಾಮುಂಡೇಶ್ವರಿ ಆಸ್ಪತ್ರೆಯಲ್ಲಿ ಅಲ್ಲಿನ ವೈದ್ಯರಿಗೆ ಹಾಗೂ ಮಾಲೀಕರಿಗೆ ಅನುಮಾನ ಬಾರದ ರೀತಿಯಲ್ಲಿ ಗರ್ಭಪಾತ ಮಾಡಿಸುತ್ತಿದ್ದರು. ಇದರಿಂದ ಬಂದ ಹಣದಲ್ಲಿ ಕಮಿಷನ್ ಅನ್ನು ಮಧ್ಯವರ್ತಿಗಳಿಗೆ ನೇರವಾಗಿ ಅಥವಾ ಬ್ಯಾಂಕ್ ಅಕೌಂಟ್ ಮೂಲಕ ನೀಡಿರುವುದು ದೃಢಪಟ್ಟಿದ್ದು, ಈ ಬಗ್ಗೆ ಮುಂದಿನ ಕ್ರಮ ವಹಿಸುವಂತೆ ದೂರಿನಲ್ಲಿ ಕೋರಲಾಗಿದೆ.



ಹದಿನಾರಲ್ಲಿ ಮತದಾನ ನಂತರ ಮುಖಂಡರ ಒಗ್ಗಟ್ಟು ಪ್ರದರ್ಶನ



ವರುಣ ವಿಧಾನಸಭಾ ಕ್ಷೇತ್ರದ ಹದಿನಾರು ಗ್ರಾಮದಲ್ಲಿ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸುನಿಲ್ ಬೋಸ್ ಪರ ಗ್ರಾಮದ ಮುಖಂಡರು ಮತ ಚಲಾಯಿಸಿ, ಒಗ್ಗಟ್ಟು ಪ್ರದರ್ಶಿಸಿದರು. ಈ ವೇಳೆ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಗ್ರಾಮದ ಹಿರಿಯ ಮುಖಂಡರಾದ ಎಚ್.ಎನ್.ನಂಜಪ್ಪ, ಪ್ರವೀಣ್, ಗ್ರಾಪಂ ಮಾಜಿ ಅಧ್ಯಕ್ಷ ಅಭಿ ಎಲ್.ಸಿದ್ದರಾಜು, ಗುರುಮಲ್ಲಪ್ಪ, ಬಸವಣ್ಣ, ಶಿವಕುಮಾರ್, ನಾಗರಾಜನಾಯಕ, ರಂಗ, ಸೋಮನಾಯ್ಕ, ಗ್ರಾಪಂ ಜಿಲ್ಲಾ ಒಕ್ಕೂಟದ ಅಧ್ಯಕ್ಷ ನಾಗರಾಜು, ಗ್ರಾಮದ ವಾಲ್ಮೀಕಿ ಯುವಕ ಸಂಘದ ಅಧ್ಯಕ್ಷ ಸಿದ್ದರಾಜು, ಗ್ರಾಮದ ಮುಖಂಡರು ಹಾಜರಿದ್ದರು.

ಎಂ.ಅನನ್ಯಾಗೆ 591 ಅಂಕ

ಮೈಸೂರು,ಏ.27–ಶ್ರೀ ಜಯಚಾಮರಾಜೇಂದ್ರ ಪಿಯು ಕಾಲೇಜಿನ ವಿದ್ಯಾರ್ಥಿನಿ ಕು.ಎಂ. ಅನನ್ಯ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ 591 ಅಂಕಗಳನ್ನು ಮರುಮೌಲ್ಯ ಮಾಪನದಲ್ಲಿ ಗಳಿಸಿ, ಮೈಸೂರು ಜಿಲ್ಲೆಗೆ ಐದನೇ ಸ್ಥಾನವನ್ನು ಪಡೆದಿದ್ದಾರೆ.




ಬಿ.ಮಹದೇವಸ್ವಾಮಿಗೆ ಉನ್ನತ ಶ್ರೇಣಿ

ಮೈಸೂರು,ಏ.27–ಇತ್ತೀಚೆಗೆ ನಡೆದ ದ್ವಿತೀಯ ಪಿಯುಸಿ ವಿಜ್ಞಾನ ಪರೀಕ್ಷೆಯಲ್ಲಿ ಎಕ್ಸಲೆನ್ಸ್ ಪಿಯು ಕಾಲೇಜು ವಿದ್ಯಾರ್ಥಿ ಬಿ.ಮಹದೇವಸ್ವಾಮಿ ಶೇ.96.8 ಅಂಕ ಗಳಿಸುವ ಮೂಲಕ ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಈತ ಚಾಮರಾಜನಗರ ಪಟ್ಟಣದ ಬಸವೇಶ್ವರ ಬಡಾವಣೆಯ ನಿವಾಸಿ ಆರ್.ಎಂ.ಬಸವರಾಜು ಮತ್ತು ಎ.ವಿ.ಮಂಜುಳ ದಂಪತಿ ಪುತ್ರ



ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

28.04.2024 ಭಾನುವಾರ, ಮಳೆ ನಕ್ಷತ್ರ: ಭರಣಿ 27.04.2024 ರಿಂದ 10.05.2024
ಕ್ರೋಧಿ ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಕೃಷ್ಣ ಪಕ್ಷ,
ತಿಥಿ: ಬಿದಿಗೆ, ನಕ್ಷತ್ರ: ಅನೂರಾಧ, ರಾಹುಕಾಲ: ಸಂಜೆ 4.30 ರಿಂದ 6ರವರೆಗೆ

■ **ರಾಮ್‌ಸನ್ಸ್ ಬೊಂಬೆ ಮನೆ:** ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10 ರಿಂದ ಸಂಜೆ 7ರವರೆಗೆ

■ **ಅಖಿಲ ಕರ್ನಾಟಕ ಲೇಖಕರ ಮತ್ತು ಪ್ರಕಾಶಕರ ಸಂಘ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಸಂವಹನ ಪ್ರಕಾಶನ :** ವಿಶ್ವ ಪುಸ್ತಕ ದಿನಾಚರಣೆ, ಕೃತಿ ಲೋಕಾರ್ಪಣೆ ಹಾಗೂ ಕನ್ನಡ ಪುಸ್ತಕ ಪ್ರಾಧಿಕಾರದ ನೂತನ ಅಧ್ಯಕ್ಷರಾದ ಮಾನಸ ಅವರಿಗೆ ಅಭಿನಂದನಾ ಸಮಾರಂಭ, ಅಧ್ಯಕ್ಷತೆ : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಉದ್ಘಾಟನೆ ಹಾಗೂ ಅಭಿನಂದನೆ ಸ್ವೀಕಾರ : ಕನ್ನಡ ಪುಸ್ತಕ ಪ್ರಾಧಿಕಾರದ ನೂತನ ಅಧ್ಯಕ್ಷ ಮಾನಸ, ಕೃತಿ ಬಿಡುಗಡೆ : ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಮುಖ್ಯ ಅತಿಥಿಗಳು : ಹಿರಿಯ ಸಾಹಿತಿ ಡಾ. ಸಿ.ಪಿ. ಕೃಷ್ಣಕುಮಾರ್, ಮೈಸೂರು ವಿವಿ ನಿವೃತ್ತ ಗ್ರಂಥಪಾಲಕ ಡಾ. ಸಿ.ಪಿ. ರಾಮಶೇಷ್, ಉಪಸ್ಥಿತರು : ಅಖಿಲ ಕರ್ನಾಟಕ ಲೇಖಕರ ಮತ್ತು ಪ್ರಕಾಶಕರ ಸಂಘದ ಅಧ್ಯಕ್ಷ ಡಿ.ಎನ್. ಲೋಕಪ್ಪ, ಸ್ಥಳ: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಭವನ, ವಿಜಯನಗರ 1ನೇ ಹಂತ, ಬೆಳಗ್ಗೆ 10.30ಕ್ಕೆ.

■ **ರಂಗಾಯಣ :** ಚಿಣ್ಣರ ಮೇಳ ಮಕ್ಕಳ ರಂಗ ತರಬೇತಿ ಶಿಬಿರ, ಸಾಮರಸ್ಯ ಕಲಾ ದೋಣಿ ವಿಹಾರ, ಚಾಲನೆ : ಖ್ಯಾತ ವನ್ಯಜೀವಿ ಛಾಯಾಗ್ರಾಹಕ ಕೃಪಾಕರ ಸೇನಾನಿ, ಸ್ಥಳ: ರಂಗಾಯಣ, ಸಂಜೆ 4ಕ್ಕೆ.

■ **ಸುರಭಿ ಗಾನಕಲಾಮಂದಿರ ಚಾರಿಟಬಲ್ ಟ್ರಸ್ಟ್:** ಸಂಜೆ 5ಕ್ಕೆ ಅರಳು ಪ್ರತಿಭೆ, ಪ್ರತಿಭಾಂಕುರ, ಸಂಗೀತ ಮಾಲಿಕೆ 10ನೇ ಸುಮ ಮತ್ತು ಅಭಿನಂದನಾ ಸಮಾರಂಭ; ಸಂಜೆ 5 ರಿಂದ 6.15 ರವರೆಗೆ ಕರ್ನಾಟಕ ಶಾಸ್ತ್ರೀಯ ಸಂಗೀತ, ಕು. ಮಾನ್ಯ ಮಂಜುನಾಥ್ ಅವರಿಂದ ಗಾಯನ, ಕು. ಪ್ರೇರಣಾ–ವಯೋಲಿನ್, ವಿಕ್ರಮ್ ಭಾರದ್ವಾಜ್ – ಮೃದಂಗ; ಸಂಜೆ 6.30ಕ್ಕೆ ಅಭಿನಂದನಾ ಸಮಾರಂಭ, ಕುಮಾರವ್ಯಾಸ ಗಮಕ ಪ್ರಶಸ್ತಿ ಪುರಸ್ಕೃತರಾದ ಗಮಕ ವಿದ್ವಾನ್ ಕೃ. ರಾಮಚಂದ್ರ ಅವರಿಗೆ ನಿವೃತ್ತ ಪ್ರಾಧ್ಯಾಪಕ ಪ್ರೊ. ಡಾ. ಎನ್.ಎಸ್. ತಾರಾನಾಥ್ ಅವರಿಂದ ಅಭಿನಂದನೆ, ಸಂಜೆ 7 ರಿಂದ ಗಮಕ ವಾಚನ–ವ್ಯಾಖ್ಯಾನ, ಭಾಗ–ತೊರವೆ ರಾಮಾಯಣದಲ್ಲಿ 'ಸುಂದರ ಕಾಂಡ', ವ್ಯಾಖ್ಯಾನ–ವಿದುಷಿ ಡಾ. ಜ್ಯೋತಿಶಂಕರ್, ವಾಚನ – ಕು. ಸ್ವಾತಿ ನರಸಿಂಹಮೂರ್ತಿ, ಸ್ಥಳ: ಸುರುಚಿ ರಂಗಮನೆ, ಕುವೆಂಪುನಗರ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಸರ್ವಜಯಾನಂದ ಅವರಿಂದ ಶ್ರೀ ಶ್ರೀ ರಾಮಕೃಷ್ಣ ಚರಿತೆ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಶ್ರೀ ರಾಮಾಭ್ಯುದಯ ಸಭಾ, ಪಬ್ಲಿಕ್ ಚಾರಿಟಬಲ್ ಟ್ರಸ್ಟ್:** 134ನೇ ವರ್ಷದ ಶ್ರೀ ರಾಮೋತ್ಸವ, ಸಾಂಸ್ಕೃತಿಕ ಕಾರ್ಯಕ್ರಮ, ಕು. ಇಂಪನ ಮತ್ತು ತಂಡದವರಿಂದ ದೇವರನಾಮ, ಸ್ಥಳ: ಶ್ರೀರಾಮಮಂದಿರ, ವಿನೋಬ ರಸ್ತೆ, ಶ್ರೀರಾಮಪೇಟೆ, ಸಂಜೆ 6ಕ್ಕೆ.

■ **ರಂಗಾಯಣ :** ರಂಗಾಯಣದ ಭಾರತೀಯ ರಂಗ ಶಿಕ್ಷಣ ಕೇಂದ್ರದ ವಿದ್ಯಾರ್ಥಿಗಳಿಂದ ವೃಕ್ಷರಾಜ ನಾಟಕ ಪ್ರದರ್ಶನ, ಸಾಹಿತ್ಯ ರಚನೆ : ಎಸ್. ರಾಮನಾಥ, ನಿರ್ದೇಶನ : ಹೈಸ್ನಾಂ ತೋಂಬಾ, ವಸ್ತ್ರ ವಿನ್ಯಾಸ : ರಜನಿ ಗರುಡ, ಸ್ಥಳ: ಭೂಮಿಗೀತ, ರಂಗಾಯಣ, ಸ್ಥಳ: ರಂಗಾಯಣ, ಸಂಜೆ 6.30ಕ್ಕೆ.

■ **ಶ್ರೀ ರಾಮಸೇವಾ ಮಂಡಲಿ :** 71ನೇ ವರ್ಷದ ಶ್ರೀ ರಾಮೋತ್ಸವ, ವಿದ್ವಾನ್ ರಾಘವೇಂದ್ರ ರತ್ನಾಕರ್ ಮತ್ತು ವೃಂದದವರಿಂದ ಭಕ್ತಿ ಸಂಗೀತ, ಸ್ಥಳ: ಶ್ರೀರಾಮ ಸೇವಾ ಮಂಡಲಿ, 9ನೇ ಅಡ್ಡ ರಸ್ತೆ, ವಿದ್ಯಾರಣ್ಯಪುರಂ, ಸಂಜೆ 7ಕ್ಕೆ.

■ **ಲಯನ್ಸ್ ಕ್ಲಬ್ ಆಫ್ ಮೈಸೂರು ಅಂಬಾಸಡರ್ಸ್ :** ವಿಶ್ವ ಭೂಮಿ ಮತ್ತು ವಿಶ್ವ ಪುಸ್ತಕ ದಿನಾಚರಣೆ, ಮುಖ್ಯ ಅತಿಥಿಗಳು : ನೇಪಾಳ ಸರ್ಕಾರದ ಉಪಾಧ್ಯಕ್ಷರ ಸಾಂಸ್ಕೃತಿಕ ಸಲಹೆಗಾರ ಡಾ. ಎಂ.ಪಿ. ವರ್ಷಾ, ಅಧ್ಯಕ್ಷತೆ : ಲಯನ್ ಹೆಚ್.ಸಿ. ಕಾಂತರಾಜು (ನಿವೃತ್ತ), ಸನ್ಮಾನ : ದ್ವಿತೀಯ ಪಿಯುಸಿ ರ್‍ಯಾಂಕ್ ವಿಜೇತರಾದ ಕೆ.ಹೆಚ್. ಊರ್ವಿಶ್ ಪ್ರಶಾಂತ್ (2ನೇ ರ್‍ಯಾಂಕ್), ಶ್ರೇಯಾ ಗಣೇಶ್ ಅಯ್ಯರ್ (5ನೇ ರ್‍ಯಾಂಕ್), ಸ್ಥಳ: ಹೋಟೆಲ್ ಕಲ್ಯಾಣಿ, ರಿಂಗ್ ರಸ್ತೆ, ಸಂಜೆ 7ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಒಡಹುಟ್ಟಿನ ನುಡಿಗಳು –ಕನ್ನಡದ ಒಡನಾಡಿ ಭಾಷೆಗಳ ಕುರಿತ ಬಾನುಲಿ ಸರಣಿ, ಲೇಖನ ಹಾಗೂ ಪ್ರಸ್ತುತಿ– ಡಾ. ತೀತೀರ ರೇಖಾವಸಂತ, 6.40 ಪದ ಸಂಸ್ಕೃತಿ, ಪ್ರಸ್ತುತಿ– ಡಾ. ಕಬ್ಬಿನಾಲೆ ವಸಂತ ಭಾರದ್ವಾಜ್, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 9.40 ನಮ್ಮ ಆರೋಗ್ಯ ಕಾರ್ಯಕ್ರಮ 'ಮಕ್ಕಳಲ್ಲಿ ಅಧಿಕ ರಕ್ತದೊತ್ತಡ ಸಮಸ್ಯೆ ಮತ್ತು ಪರಿಹಾರ' ಕುರಿತು ಮೈಸೂರಿನ ನೆಫ್ರೋ ಯೂರಾಲಜಿ ಸಂಸ್ಥೆಯ ನೆಫ್ರಾಲಜಿ ವಿಭಾಗದ ಅಸಿಸ್ಟೆಂಟ್ ಪ್ರೊಫೆಸರ್ ಹಾಗೂ ವಿಭಾಗ ಮುಖ್ಯಸ್ಥರಾದ ಡಾ. ಕೆ.ಬಿ. ಶಶಿಕಿರಣ್ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ– ಬೇದ್ರೆ ಮಂಜುನಾಥ್, 10.00 ಕೇಳಿ ಗಿಳಿಗಳೇ–ಕಥೆ ಕೇಳು ಪುಟ್ಟ, ಕಥೆ ಹೇಳುತ್ತಾರೆ–ಬಿ. ಜಿ. ಕವಿತಾ, 10.30 ಮಕ್ಕಳ ಮಂಟಪ–ಅರಿವು ಶಾಲೆಯ ಮಕ್ಕಳಿಂದ ಕಾರ್ಯಕ್ರಮ ವೈವಿದ್ಯ, 11.00 ಮಿಶ್ರ ಮಾಧುರ್ಯ

ಮಧ್ಯಾಹ್ನ: 12.30 ದೇವರನಾಮ, 12.45 ಜನಪದ ಸಂಗೀತ – ಮಳವಳ್ಳಿ ಎಂ. ಮಹದೇವಸ್ವಾಮಿ ಮತ್ತು ಸಂಗಡಿಗರಿಂದ ಪಿರಿಯಾಪಟ್ಟಣ ಕಾಳಗದ ಹಾಡು, 1.00 ಚಿತ್ರಗೀತೆಗಳು, 1.20 ಭಾವಗೀತೆ, 2.35 ಕನ್ನಡ ಚಲನಚಿತ್ರ ಧ್ವನಿ ವಾಹಿನಿ 'ಹೃದಯ ಪಲ್ಲವಿ', 3.40 ಯಕ್ಷಗಾನ ತಾಳ ಮದ್ದಲೆ, ಪ್ರಸಂಗ– ಕೈಕಾ ವಿವಾಹ, ಪ್ರಸ್ತುತಿ– ಉಡುಪಿಯ ಬಡ ನಿಡಿಯೂರಿನ ನಿಡಿಯೂರ ಯಕ್ಷರು, 6.50 ಕೃಷಿರಂಗ– ತೋರಣ ಹೂರಣ, ಪ್ರಸ್ತುತಿ– ಎನ್. ಕೇಶವಮೂರ್ತಿ, ಆರ್. ಲೋಕೇಶ್ವರಿ, ಡಾ. ಮೈಸೂರು ಉಮೇಶ್–ಪರಾಗ–ಬೇಸಾಯದ ಬದುಕು ಸರಾಗ–ನಿರ್ಮಾಣ–ಎನ್. ಕೇಶವಮೂರ್ತಿ, ಕೃಷಿ ದರ್ಪಣ–ಪ್ರಸ್ತುತಿ – ಆರ್. ಲೋಕೇಶ್ವರಿ, 8.00 'ಹಾದಿಯಲ್ಲಿ ಕಂಡ ಮುಖ' ಬಾನುಲಿ ಸರಣಿ, ಹುಣಸೂರು ತಾಲೂಕು ಕೆಬ್ಬೆಕೊಪ್ಪಲು ದೊಂಬರ ಕಾಲೋನಿಯ ರಾಜ ಮತ್ತು ರಾಣಿ ದಂಪತಿಗಳೊಂದಿಗೆ ಸಂವಾದ, ಪ್ರಸ್ತುತಿ–ಅಬ್ದುಲ್ ರಶೀದ್, 10.00 ರವಿವಾಸರೀಯ ಅಖಿಲ ಭಾರತೀಯ ಸಂಗೀತ ಸಭಾ, ಡಾ. ಕೆ. ಎಸ್. ಹರಿಶಂಕರ್ – ಹಾಡುಗಾರಿಕೆ



ಮೈಸೂರು ಮಿತ್ರ


ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | 45 | ಏಪ್ರಿಲ್ 28 ಭಾನುವಾರ 2024

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 13 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಮತಯಂತ್ರಗಳಿಗೆ 'ಸ್ಟ್ರಾಂಗ್ ಸೆಕ್ಯೂರಿಟಿ'

ಮೂರು ಸುತ್ತಿನ ಭದ್ರತಾ ವ್ಯವಸ್ಥೆ: ಮೈಸೂರಿನ ಪಡುವಾರಹಳ್ಳಿಯ ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿನಲ್ಲಿ ಡಿ–ಮಸ್ಟರಿಂಗ್; ಮಧ್ಯಾಹ್ನದ ವೇಳೆಗೆ ವಿರಾಜಪೇಟೆ ಕ್ಷೇತ್ರದ ಮತಯಂತ್ರಗಳು ಜಮಾ; ಶಸ್ತ್ರಸಜ್ಜಿತ ಸಿಆರ್‌ಪಿಎಫ್ ಯೋಧರ ಸುಪರ್ದಿಯಲ್ಲಿ ಸ್ಟ್ರಾಂಗ್‌ರೂಮ್



ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿನಲ್ಲಿ ಸ್ಥಾಪಿಸಿರುವ ಸ್ಟ್ರಾಂಗ್‌ರೂಮ್‌ಗೆ ಭದ್ರತೆ ಒದಗಿಸಿರುವ ಪ್ಯಾರಾ ಮಿಲಿಟರಿ ಪಡೆಯೊಂದಿಗೆ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ಪೊಲೀಸ್ ಆಯುಕ್ತ ರಮೇಶ್ ಬಾನೊತ್, ಮಡಿಕೇರಿ ಎಆರ್‌ಓ ನರ್ವಾಡೆ ವಿನಾಯಕ್, ಡಿಸಿಪಿ ಮುತ್ತುರಾಜ್ ಅವರನ್ನು ಕಾಣಬಹುದು.

ಮೈಸೂರು, ಏ.27 (ಎಂಟಿವೈ)– ಮೈಸೂರು–ಕೊಡಗು ಲೋಕಸಭಾ ಕ್ಷೇತ್ರ ವ್ಯಾಪ್ತಿಯ 8 ವಿಧಾನಸಭಾ ಕ್ಷೇತ್ರದ 2202 ಮತಗಟ್ಟೆಯಲ್ಲಿ ಬಳಸಲಾದ ಎಲ್ಲಾ ಮತಯಂತ್ರ ಕಂಟ್ರೋಲ್ ಯುನಿಟ್ ಹಾಗೂ ವಿವಿಪ್ಯಾಟ್‌ಗಳನ್ನು ಸುರಕ್ಷಿತವಾಗಿ ಮೈಸೂರಿನ ಪಡುವಾರಹಳ್ಳಿಯ ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿನಲ್ಲಿ ಸ್ಥಾಪಿಸಿರುವ 'ಸ್ಟ್ರಾಂಗ್ ರೂಮ್'ನಲ್ಲಿರಿಸಿ, ಶಸ್ತ್ರಸಜ್ಜಿತ ಸಿಆರ್‌ಪಿಎಫ್ ಭದ್ರತೆ ಕಲ್ಪಿಸಲಾಗಿದೆ.

ಮೈಸೂರು ಜಿಲ್ಲೆಯ 6 ಹಾಗೂ ಕೊಡಗಿನ 2 ವಿಧಾನಸಭಾ ಕ್ಷೇತ್ರ ಒಳಗೊಂಡಿರುವ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಚುನಾವಣೆ ಶುಕ್ರವಾರ(ಏ.26) ಬೆಳಗ್ಗೆ 7ರಿಂದ ಸಂಜೆ 6ರವರೆಗೆ ಶಾಂತಿಯುತವಾಗಿ ನಡೆದಿತ್ತು. ಜೂ.4ರಂದು ಮತ ಎಣಿಕಾ ಕಾರ್ಯ ಏಕಕಾಲದಲ್ಲಿ ನಡೆಯಲಿದೆ. ಅಲ್ಲಿಯವರೆಗೂ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಮತಯಂತ್ರಗಳನ್ನು ಸುರಕ್ಷಿತವಾಗಿ, ಭಾರೀ ಭದ್ರತೆಯಡಿ ಸ್ಟ್ರಾಂಗ್‌ರೂಮ್‌ನಲ್ಲಿಡಲಾಗಿದೆ.

ಪಡುವಾರಹಳ್ಳಿಯಲ್ಲಿರುವ ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿನ 20 ಕೊಠಡಿಗಳನ್ನು ಈ ಹಿಂದೆಯೇ ಸ್ಟ್ರಾಂಗ್‌ರೂಮ್‌ಗೆ ಮೀಸಲಿರಿಸಲಾಗಿತ್ತು. ಕಳೆದ ರಾತ್ರಿ ಚುನಾವಣಾ ಪ್ರಕ್ರಿಯೆ ಪೂರ್ಣಗೊಂಡ ಬಳಿಕ ಮತಗಟ್ಟೆಗಳಿಂದ ಅಭ್ಯರ್ಥಿಗಳ ಭವಿಷ್ಯವುಳ್ಳ ಮತಯಂತ್ರ, ಕಂಟ್ರೋಲ್ ಯುನಿಟ್, ವಿವಿಪ್ಯಾಟ್‌ಗಳನ್ನು ಮತದಾನ ಅಧಿಕಾರಿಗಳು ತಂದು ಆಯಾ ಕ್ಷೇತ್ರಗಳ ಉಸ್ತುವಾರಿ ಅಧಿಕಾರಿಗಳ ವಶಕ್ಕೆ ಒಪ್ಪಿಸಿದ್ದರು. 8 ವಿಧಾನಸಭಾ ಕ್ಷೇತ್ರಗಳಿಗೆ ಸಂಬಂಧಿಸಿದ ಎಲ್ಲಾ ಮತಯಂತ್ರಗಳನ್ನು ಕಳೆದ ರಾತ್ರಿಯಿಂದಲೇ ಸ್ಟ್ರಾಂಗ್‌ರೂಮ್‌ಗೆ ಕೊಂಡೊಯ್ಯುವ ಪ್ರಕ್ರಿಯೆ ಆರಂಭಿಸಲಾಗಿತ್ತು. ಅದಕ್ಕಾಗಿ ಪ್ರತ್ಯೇಕ ಸಿಬ್ಬಂದಿ ನಿಯೋಜಿಸಲಾಗಿದೆ. ಮುಂಜಾನೆ ● 6ನೇ ಪುಟಕ್ಕೆ



ಸ್ಟ್ರಾಂಗ್‌ರೂಮ್‌ಗೆ ವಿರಾಜಪೇಟೆ ಕ್ಷೇತ್ರದ ಮತಯಂತ್ರಗಳನ್ನು ಸಾಗಿಸುತ್ತಿರುವುದು.

ರಾಜ್ಯದಲ್ಲಿ ಮೊದಲ ಹಂತದ ಲೋಕಸಭಾ ಚುನಾವಣೆ ಅಂತ್ಯದ ಬೆನ್ನ ಹಿಂದೆಯೇ

ಕೇಂದ್ರದಿಂದ 3454 ಕೋಟಿ ಬರ ಪರಿಹಾರ ಬಿಡುಗಡೆ

- ಪರಿಹಾರಕ್ಕಾಗಿ ರಾಜ್ಯ ಸರ್ಕಾರ ಸುಪ್ರೀಂ ಕೋರ್ಟ್ ಮೊರೆ ಹೋಗಿತ್ತು
- ಎನ್‌ಡಿಆರ್‌ಎಫ್‌ನಡಿ 18171 ಕೋಟಿ ಕಲ್ಪಿಸುವಂತೆ ಮನವಿ ಮಾಡಿತ್ತು

ಬೆಂಗಳೂರು, ಏ.27(ಕೆಎಂಶಿ)– ರಾಜ್ಯದ 14 ಲೋಕಸಭಾ ಕ್ಷೇತ್ರಗಳಿಗೆ ಮತದಾನ ಪ್ರಕ್ರಿಯೆ ಮುಗಿಯುತ್ತಿದ್ದಂತೆ ಬರ ಪರಿಹಾರವಾಗಿ ಕೇಂದ್ರ ಸರ್ಕಾರ 3,454 ಕೋಟಿ ರೂ. ಬಿಡುಗಡೆ ಮಾಡಿದೆ.

ರಾಷ್ಟ್ರದ ಇತಿಹಾಸದಲ್ಲೇ ಪರಿಹಾರ ಕೋರಿ ಸರ್ಕಾರ ಸುಪ್ರೀಂಕೋರ್ಟ್ ಮೊರೆ ಹೋಗಿತ್ತು. ನ್ಯಾಯಾಲಯ ಮಧ್ಯೆ ಪ್ರವೇಶಿಸುತ್ತಿದ್ದಂತೆ ಪರಿಹಾರ ಹಣವನ್ನು ಕೇಂದ್ರ ಸರ್ಕಾರ ಘೋಷಣೆ ಮಾಡಿದೆ.

ಈ ಮೂಲಕ ಕರ್ನಾಟಕ ಸರ್ಕಾರದ ಹೋರಾಟಕ್ಕೆ ಜಯ ದೊರೆತಂತಾಗಿದೆ, ತಾತ್ಕಾಲಿಕವಾಗಿ ಬರದ ನಡುವೆಯೂ ರೈತರಿಗೆ ಒಂದಷ್ಟು ಬೆಳೆ ಪರಿಹಾರ ದೊರೆಯಲಿದೆ. ಕರ್ನಾಟಕದ ಜೊತೆಗೆ ತಮಿಳುನಾಡಿನಲ್ಲಿ ಉಂಟಾಗಿದ್ದ ನೆರೆ ಮತ್ತು ಅತಿವೃಷ್ಟಿಗೂ ಕೇಂದ್ರ ಆರ್ಥಿಕ ನೆರವು ಕೊಟ್ಟಿದೆ. ಮುಂಗಾರು ಹಾಗೂ ಹಿಂಗಾರು ಮಳೆ ಕೈಕೊಟ್ಟಿದ್ದರಿಂದ ರಾಜ್ಯದ ಬಹುತೇಕ ಭಾಗ ಬರಕ್ಕೆ ಸಿಲುಕಿ ರೈತರು ಕೋಟ್ಯಾಂತರ ರೂ. ಮೌಲ್ಯದ ಬೆಳೆ ಕಳೆದುಕೊಂಡಿದ್ದಾರೆ. ಕೃಷಿಕನ ಕೈ ಹಿಡಿಯಲು ಹಾಗೂ ಬರ ನಿರ್ವಹಣೆಗಾಗಿ ಎನ್‌ಡಿಆರ್‌ಎಫ್‌ನಿಂದ 18,171 ಕೋಟಿ ರೂ. ಬರ ಪರಿಹಾರ ನೀಡುವಂತೆ



ರಾಜ್ಯ ಸರ್ಕಾರ ಕೇಂದ್ರಕ್ಕೆ ಕಳೆದ ಸೆಪ್ಟೆಂಬರ್‌ನಲ್ಲಿ ಮನವಿ ಸಲ್ಲಿಸಿತ್ತು. ಇದರಲ್ಲಿ ಬೆಳೆ ನಷ್ಟಕ್ಕಾಗಿ 4,663.12 ಕೋಟಿ ರೂ., ಕುಡಿಯುವ ನೀರು ಹಾಗೂ ಮೇವಿಗೆ 566.78 ಕೋಟಿ ರೂ. ಹಾಗೂ ಬರದ ತೀವ್ರತೆಗೆ ಗುರಿಯಾದ ಕುಟುಂಬಗಳಿಗೆ ನೆರವು ಒದಗಿಸಲು 12,577.9 ಕೋಟಿ ರೂ. ನೆರವು ಕೋರಿ ಕೇಂದ್ರಕ್ಕೆ ಮನವಿ ಸಲ್ಲಿಸಿತ್ತು. ತದನಂತರ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಕೃಷಿ ಸಚಿವ ಚಲುವರಾಯಸ್ವಾಮಿ ಸೇರಿದಂತೆ ಸಂಪುಟದ ಸಹೋದ್ಯೋಗಿಗಳು ಪ್ರಧಾನಿ ನರೇಂದ್ರ ಮೋದಿ ಹಾಗೂ ಕೇಂದ್ರದ ಗೃಹ ಸಚಿವ ಅಮಿತ್ ಷಾ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿದ್ದರು. ಏಳು ತಿಂಗಳು ಕಳೆದರೂ ಪರಿಹಾರ ನೀಡಿರಲಿಲ್ಲ, ಮತ್ತೊಂದೆಡೆ ● 6ನೇ ಪುಟಕ್ಕೆ

ಇಂದು ಕೇಂದ್ರದ ವಿರುದ್ಧ ಸಿದ್ದರಾಮಯ್ಯ ನೇತೃತ್ವದಲ್ಲಿ ಕಾಂಗ್ರೆಸ್ ಪ್ರತಿಭಟನೆ



ಬೆಂಗಳೂರು: ಬರ ಪರಿಹಾರ ವಿಚಾರದಲ್ಲಿ ಮಲತಾಯಿ ಧೋರಣೆ ತೋರುತ್ತಿರುವ ಕೇಂದ್ರ ಸರ್ಕಾರದ ವಿರುದ್ಧ ಕಾಂಗ್ರೆಸ್ ಮತ್ತೆ ಭಾನುವಾರ ಬೆಳಗ್ಗೆ ಪ್ರತಿಭಟನೆ ನಡೆಸಲು ನಿರ್ಧರಿಸಿದೆ. ಕೇಂದ್ರ ಸರ್ಕಾರ ಕೇವಲ 3454 ಕೋಟಿ ರೂ. ಮಾತ್ರ ಬಿಡುಗಡೆ ಮಾಡಿದೆ. ನಾವು ಕೇಳಿದ್ದು 18,172 ಕೋಟಿ ರೂಪಾಯಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ. ಅಲ್ಲದೆ ಅತ್ಯಂತ ಕಡಿಮೆ ಬರ ಪರಿಹಾರ ಬಿಡುಗಡೆ ಮಾಡಿದ ಕೇಂದ್ರದ ನಡೆ ವಿರೋಧಿಸಿ ಭಾನುವಾರ ವಿಧಾನಸೌಧದ ಗಾಂಧಿ ಪ್ರತಿಮೆ ಮುಂದೆ ಪ್ರತಿಭಟನೆ ನಡೆಸುವುದಾಗಿ ಉಪ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಶನಿವಾರ ಹೇಳಿದ್ದಾರೆ. ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಡಿಸಿಎಂ, ನಾಳೆ ವಿಧಾನಸೌಧದ ಗಾಂಧಿ ಪ್ರತಿಮೆ ಮುಂದೆ ಕೇಂದ್ರದ ವಿರುದ್ಧ ಪ್ರತಿಭಟನೆಗೆ ನಿರ್ಧರಿಸಲಾಗಿದೆ. ಬಹಳ ಕಡಿಮೆ ಬರ ಪರಿಹಾರ ಕೊಟ್ಟಿದ್ದಾರೆಂದು ಮಹಾತ್ಮ ಗಾಂಧಿ ಪ್ರತಿಮೆ ಎದುರು ನಮ್ಮ ಪಕ್ಷದ ನಾಯಕರು ಪ್ರತಿಭಟನೆ ಹಮ್ಮಿಕೊಂಡಿದ್ದೇವೆ. ನಾನೂ ಭಾಗವಹಿಸುತ್ತೇನೆ ಎಂದರು.

ಇಂಡಿಗನತ್ತ ಗ್ರಾಮದಲ್ಲಿ ಏ.29ರಂದು ಮರು ಮತದಾನ



ಚಾಮರಾಜನಗರ, ಏ.27– ಮತದಾನ ಬಹಿಷ್ಕಾರ ಮಾಡಿದ ಬಳಿಕ ಮತಗಟ್ಟೆಯನ್ನೇ ಧ್ವಂಸಗೊಳಿಸಿದ್ದ ಹನೂರು ತಾಲೂಕಿನ ಇಂಡಿಗನತ್ತ ಗ್ರಾಮದಲ್ಲಿ ಸೋಮವಾರ (ಏ.29) ಮರು ಮತದಾನ ನಡೆಯಲಿದೆ ಎಂದು ಚುನಾವಣಾ ಆಯೋಗ ತಿಳಿಸಿದೆ.

ಮತಗಟ್ಟೆ ಸಂಖ್ಯೆ 146ರಲ್ಲಿ ಸೋಮವಾರ ಬೆಳಗ್ಗೆ 7 ರಿಂದ ಸಂಜೆ 6 ಗಂಟೆವರೆಗೂ ಮರು ಮತದಾನ ಜರುಗಲಿದೆ.

ಶುಕ್ರವಾರ ಮತದಾನ ಬಹಿಷ್ಕಾರದ ಬಗ್ಗೆ ಮಾಹಿತಿ ಪಡೆದ ಅಧಿಕಾರಿಗಳು ಮನವೊಲಿಕೆಗೆ ತೆರಳಿದ್ದ ವೇಳೆ ಗ್ರಾಮದ ಕೆಲವರು ಮತಗಟ್ಟೆಯನ್ನೇ ಧ್ವಂಸ ಮಾಡಿದ್ದ ಘಟನೆ ಹನೂರು ತಾಲೂಕಿನ ಮಲೆಮಹದೇಶ್ವರ ಬೆಟ್ಟ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಇಂಡಿಗನತ್ತ ಗ್ರಾಮದಲ್ಲಿ ನಡೆದಿತ್ತು. ಈ ಘಟನೆಗೆ ಸಂಬಂಧಿಸಿದಂತೆ 25 ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

ಮತಗಟ್ಟೆ ಧ್ವಂಸ ಪ್ರಕರಣ: 25 ಮಂದಿ ಬಂಧನ

ಚಾಮರಾಜನಗರ, ಏ.27–ಚುನಾವಣೆ ಬಹಿಷ್ಕಾರ ಘೋಷಿಸಿದ ಬಳಿಕ ಮತಗಟ್ಟೆಯನ್ನೇ ಧ್ವಂಸ ಮಾಡಿದ್ದ ಹನೂರು ತಾಲೂಕಿನ ಇಂಡಿಗನತ್ತ ಗ್ರಾಮದ ಘಟನೆಗೆ ಸಂಬಂಧಿಸಿದಂತೆ 25 ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ. ಮಲೆಮಹದೇಶ್ವರ ಬೆಟ್ಟದ ಪೊಲೀಸರು, 15 ಮಹಿಳೆಯರು ಹಾಗೂ 10 ಪುರುಷರನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ. ಇಂಡಿಗನತ್ತ ಮತಗಟ್ಟೆ ಪಿಆರ್‌ಓ ಬಸವಣ್ಣ ಹಾಗೂ ಹನೂರು ತಹಶೀಲ್ದಾರ್ ಗುರು ಪ್ರಸಾದ್ ಅವರು ಪ್ರತ್ಯೇಕ ದೂರು ನೀಡಿದ್ದರು. ಅಧಿಕಾರಿಗಳು ನೀಡಿದ ದೂರಿನ ಅನ್ವಯ 250 ಅಧಿಕ ಮಂದಿ ವಿರುದ್ಧ ಪ್ರಕರಣ ದಾಖಲಾಗಿದೆ. ಈ ಘಟನೆ ಹಿನ್ನೆಲೆಯಲ್ಲಿ ಇಂಡಿಗನತ್ತ ಗ್ರಾಮಕ್ಕೆ ಗ್ರಾಮವೇ ಖಾಲಿಯಾಗಿ ಬಿಕೋ ಎನ್ನುತ್ತಿದೆ. ಬಂಧನ ಭೀತಿಯಿಂದ ಮನೆಗಳನ್ನು ತೊರೆದಿರುವ ಜನರು ತಲೆ ಮರೆಸಿಕೊಂಡಿದ್ದಾರೆ. ಸ್ಥಳಕ್ಕೆ ಎಎಸ್‌ಪಿ ಉದೇಶ್ ಭೇಟಿ ನೀಡಿದ್ದಾರೆ. ಘಟನಾ ಸ್ಥಳದಲ್ಲೇ ಮೊಕ್ಕಾಂ ಹೂಡಿದ್ದಾರೆ.

ಸಿಇಟಿ ಗೊಂದಲದ ಬಗ್ಗೆ ಮುಂದಿನ ವಾರ ಸರ್ಕಾರ ನಿರ್ಧಾರ

ಬೆಂಗಳೂರು, ಏ. 27–ಸಿಇಟಿ ಪರೀಕ್ಷೆ ಗೊಂದಲ ಪರಿಶೀಲನೆಗೆ ನಾಲ್ವರು ಸದಸ್ಯರನ್ನೊಳಗೊಂಡ ತಜ್ಞರ ಸಮಿತಿಯನ್ನು ಸರ್ಕಾರ ಇತ್ತೀಚೆಗೆ ರಚಿಸಿತ್ತು. ಇದೀಗ ಆ ಸಮಿತಿ ವರದಿ ಸಲ್ಲಿಸಿದೆ. ಈ ವರದಿ ಆಧರಿಸಿ ಮುಂದಿನ ವಾರ ಸರ್ಕಾರ ನಿರ್ಧಾರ ಕೈಗೊಳ್ಳುವ ಸಾಧ್ಯತೆ ಇದೆ. ಈಗಾಗಲೇ ಸಿಇಟಿ ಸಂಬಂಧ ಆಕ್ಷೇಪ ಸಲ್ಲಿಸಲು ವಿದ್ಯಾರ್ಥಿಗಳಿಗೆ ಅವಕಾಶ ಕಲ್ಪಿಸಲಾಗಿತ್ತು. ವಿದ್ಯಾರ್ಥಿಗಳ ಆಕ್ಷೇಪದ ಹಿನ್ನೆಲೆಯಲ್ಲಿ ತಜ್ಞರ ವರದಿ ಆಧರಿಸಿ ಸರ್ಕಾರ ನಿರ್ಧಾರ ಕೈಗೊಳ್ಳಲಿದೆ.

ಏಪ್ರಿಲ್ 18 ಹಾಗೂ 19ರಂದು ಸಿಇಟಿ ಪರೀಕ್ಷೆ ನಡೆದಿತ್ತು. 4 ವಿಷಯಗಳಲ್ಲಿ ಕನಿಷ್ಠ 45 ಪ್ರಶ್ನೆಗಳು ಕೈಬಿಟ್ಟ ಪಠ್ಯದಿಂದ ಬಂದಿರುವುದಾಗಿ ಆರೋಪ ಮಾಡಲಾಗಿತ್ತು. ಭೌತಶಾಸ್ತ್ರ, ರಸಾಯನಶಾಸ್ತ್ರ, ಗಣಿತ, ಜೀವಶಾಸ್ತ್ರದಲ್ಲಿ ಔಟ್ ಆಫ್ ಸಿಲಬಸ್ ಪ್ರಶ್ನೆ ಕೇಳಲಾಗಿತ್ತು. ● 6ನೇ ಪುಟಕ್ಕೆ



ಮಣಿಪಾಲ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ

ಸಂಸದ ವಿ.ಶ್ರೀನಿವಾಸಪ್ರಸಾದ್‌ರ ಭೇಟಿಯಾದ ಸಿಎಂ ಸಿದ್ದರಾಮಯ್ಯ

ಕುಟುಂಬ ವರ್ಗ, ವೈದ್ಯರಿಂದ ಮಾಹಿತಿ ಪಡೆದ ಸಿಎಂ





ಬೆಂಗಳೂರು, ಏ.27–ಬೆಂಗಳೂರಿನ ಮಣಿಪಾಲ್ ಆಸ್ಪತ್ರೆಯ ತುರ್ತು ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿರುವ ಹಿರಿಯ ರಾಜಕೀಯ ಮುತ್ಸದ್ಧಿ, ಸಂಸದ ವಿ.ಶ್ರೀನಿವಾಸ ಪ್ರಸಾದ್ ಅವರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಭೇಟಿ ಮಾಡಿ ಆರೋಗ್ಯ ವಿಚಾರಿಸಿದರು.

ಇಂದು ಸಂಜೆ ಆಸ್ಪತ್ರೆಗೆ ಭೇಟಿ ನೀಡಿದ ಮುಖ್ಯಮಂತ್ರಿಗಳು ಪ್ರಸಾದ್ ಅವರ ಕುಟುಂಬ ವರ್ಗದವರಿಂದ ಮಾಹಿತಿ ಪಡೆದರು. ನಂತರ ಪ್ರಸಾದ್ ಅವರಿಗೆ ಚಿಕಿತ್ಸೆ ನೀಡುತ್ತಿರುವ ಮಣಿಪಾಲ್ ಆಸ್ಪತ್ರೆಯ ವೈದ್ಯ ಡಾ. ಸುದರ್ಶನ ಬಲ್ಲಾಳ್ ಅವರಿಂದ ಪ್ರಸಾದ್ ಅವರ ಆರೋಗ್ಯ ಸ್ಥಿತಿ ಹಾಗೂ ಅವರಿಗೆ ನೀಡಲಾಗುತ್ತಿರುವ ಚಿಕಿತ್ಸೆ ಬಗ್ಗೆ ಮಾಹಿತಿ ಪಡೆದರು. ಇದೇ ವೇಳೆ ಮಣಿಪಾಲ್ ಆಸ್ಪತ್ರೆಯ ಮುಖ್ಯಸ್ಥರಾದ ಡಾ. ಸುದರ್ಶನ್ ಬಲ್ಲಾಳ್, ಮಾಧ್ಯಮ ಪ್ರಕಟಣೆ ನೀಡಿದ್ದು, ಸಂಸದ ಶ್ರೀನಿವಾಸಪ್ರಸಾದ್ ಅವರಿಗೆ ತುರ್ತು ನಿಗಾ ಘಟಕದಲ್ಲಿ ಚಿಕಿತ್ಸೆ ನೀಡುತ್ತಿರುವುದಾಗಿ ತಿಳಿಸಿದ್ದಾರೆ. ಕಳೆದ ಸುಮಾರು 2 ವರ್ಷದಿಂದಲೂ ಪ್ರಸಾದ್ ಅವರು ತಮ್ಮ ಆಸ್ಪತ್ರೆಯಲ್ಲಿ ಮಾಮೂಲಿಯಾಗಿ ಆರೋಗ್ಯ ತಪಾಸಣೆ ಹಾಗೂ ಚಿಕಿತ್ಸೆ ಪಡೆಯುತ್ತಿರುವುದರಿಂದ ಅವರ ಆರೋಗ್ಯ ಸಂಬಂಧ ದಾಖಲೆಗಳು ನಮ್ಮಲ್ಲಿವೆ ಎಂದರು. ಏ.22ರಂದು ಶ್ರೀನಿವಾಸಪ್ರಸಾದ್ ಅವರನ್ನು ನಮ್ಮ ಆಸ್ಪತ್ರೆಗೆ ದಾಖಲಿಸಲಾಯಿತು.

ಅವರ ಆರೋಗ್ಯದಲ್ಲಿ ಸ್ವಲ್ಪ ಮಟ್ಟಿಗೆ ಏರುಪೇರಾದ ಕಾರಣ ತುರ್ತು ನಿಗಾ ಘಟಕದಲ್ಲಿ ಅವರಿಗೆ ದಿನದ 24 ಗಂಟೆಯೂ ತಜ್ಞ ವೈದ್ಯರ ತಂಡ ಚಿಕಿತ್ಸೆ ನೀಡಿದೆ. ಬಹು ಅಂಗಾಂಗ ವೈಫಲ್ಯದ ಕಾರಣದಿಂದ ಪ್ರಸಾದ್ ಅವರಿಗೆ ಎಲ್ಲಾ ರೀತಿಯ ಚಿಕಿತ್ಸೆಗಳನ್ನು ನೀಡಲಾಗುತ್ತಿದೆ. ಸದ್ಯದ ಪರಿಸ್ಥಿತಿಯಲ್ಲಿ ಅವರ ಆರೋಗ್ಯ ಸ್ಥಿರವಾಗಿದೆ. ಆದರೆ ಅವರು ಸಂಪೂರ್ಣವಾಗಿ ಚೇತರಿಸಿಕೊಂಡಿದ್ದಾರೆ ಎಂದು ಹೇಳಬೇಕಾದರೆ ಇನ್ನೂ 2–3 ದಿನ ಕಾಲಾವಕಾಶ ಬೇಕಾಗಬಹುದು ಎಂದು ಡಾ. ಸುದರ್ಶನ ಬಲ್ಲಾಳ್ ತಿಳಿಸಿದರು. ಅಲ್ಲದೇ ಪ್ರಸಾದ್ ಅವರ ಕುಟುಂಬ ವರ್ಗದವರು ಸಂಪೂರ್ಣ ಸಹಕಾರ ನೀಡುತ್ತಿದ್ದಾರೆ. ನಾವು ಸತತವಾಗಿ ಪ್ರಸಾದ್ ಕುಟುಂಬದವರ ಜೊತೆ ಸಂಪರ್ಕದಲ್ಲಿದ್ದೇವೆ. ತುರ್ತು ನಿಗಾ ಘಟಕದಲ್ಲಿ ಚಿಕಿತ್ಸೆ ನೀಡುತ್ತಿರುವುದರಿಂದ ಪ್ರಸಾದ್ ಅವರನ್ನು ಯಾರೂ ಭೇಟಿ ಮಾಡಲು ಅವಕಾಶ ನೀಡಲಾಗುತ್ತಿಲ್ಲ ಎಂದು ಡಾ. ಸುದರ್ಶನ ಬಲ್ಲಾಳ್ ತಿಳಿಸಿದ್ದಾರೆ.



ನಕ್ಕರೆ ಅದೇ ಸ್ವರ್ಗ

ಮೇಷ್ಟ್ರು : "ನಾನು ಪಾಠ ಮಾಡುವಾಗ ನೀನು ಯಾಕೆ ದೇವರನ್ನು ಬೇಡುತ್ತಿದ್ದೀಯಾ?"
ಗುಂಡ : "ನಮ್ಮಮ್ಮ ಹೇಳಿದ್ದಾರೆ. ಮಲಗೋಕೆ ಮುಂಚೆ ದೇವರನ್ನು ಬೇಡಿಕೋ ಅಂತ !"

ಮೈಸೂರು ಮಿತ್ರ

ಭಾನುವಾರ, 28 ಏಪ್ರಿಲ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ *M.A.*


ಅಮೃತವಾಹಿನಿ.........

ದೊಡ್ಡದಾಗಿ ವೈಫಲ್ಯ ಹೊಂದುವ ಎದೆಗಾರಿಕೆ ಇದ್ದವರು ಮಾತ್ರವಷ್ಟೇ ದೊಡ್ಡ ಸಾಧನೆ ಮಾಡಲು ಸಾಧ್ಯ –ನುಡಿಮುತ್ತು


ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ತಾಯಿಯನ್ನು ನಿಂದಿಸಬೇಡ, ಒಳ್ಳೆಯವರನ್ನು ಬಂಧಿಸಬೇಡ.

ನಿಮ್ಮ ಪತ್ರಗಳು

■ ಮತಗಟ್ಟೆಗಳಲ್ಲಿ ಇಂಗ್ಲಿಷ್ ಮೆರವಣಿಗೆ









ಮಾನ್ಯರೆ,

ಈ ಹಿಂದೆ ಚುನಾವಣಾಧಿಕಾರಿಗಳು ಮತಗಟ್ಟೆಗಳಿಗೆ ಸಂಬಂಧಿಸಿದ ಸಾಮಗ್ರಿಗಳಲ್ಲಿ ಕನ್ನಡಕ್ಕೆ ಮೊದಲ ಸ್ಥಾನ ಕೊಟ್ಟು, ಬಳಸುತ್ತಿದ್ದರು.

ಆದರೆ ಈ ಬಾರಿ ಇಂಗ್ಲಿಷ್ ಮೆರವಣಿಗೆ ನಡೆದಿರುವುದು ಖಂಡನೀಯ.

ಮತಗಟ್ಟೆ ಒಳಗೆ ಹಾಕಿದ್ದ ಪೋಲಿಂಗ್ ಏಜೆಂಟ್ ಮತ್ತಿತರ ನಾಮಫಲಕಗಳು ಇಂಗ್ಲೀಷ್‌ನಲ್ಲಿ ಮಾತ್ರ ಇದ್ದವು. ಮತಗಟ್ಟೆಯ ಹೊರಗೆ ಹಾಕಿದ್ದ ಹಲವು ಸೂಚನಾ ಫಲಕಗಳಲ್ಲೂ ಕನ್ನಡಕ್ಕೆ ಮೊದಲ ಸ್ಥಾನ ಇರಲಿಲ್ಲ.

ಮತಗಟ್ಟೆ ಸಿಬ್ಬಂದಿಗೆ ಕೊಟ್ಟಿದ್ದ ಮತದಾರರ ಪಟ್ಟಿ ಇಂಗ್ಲೀಷ್‌ನಲ್ಲಿತ್ತು. ಸಿಬ್ಬಂದಿಗೆ ಕೊಡಲಾಗಿದ್ದ ಪ್ರಕ್ರಿಯ ಸಾಮಗ್ರಿಗಳು ಇಂಗ್ಲೀಷ್‌ನಲ್ಲೇ ಇದ್ದವು. ಬಹುತೇಕ ವಾಹನಗಳ ಮೇಲೆ ಇಂಗ್ಲಿಷ್ ಫಲಕಗಳೇ ರಾರಾಜಿಸುತ್ತಿದ್ದವು.

ಇದು ಕೆಲವು ಉದಾಹರಣೆಗಳು ಮಾತ್ರ. ಚಿತ್ರಸಹಿತವಾಗಿ ಅದನ್ನು ಪ್ರದರ್ಶಿಸಿ ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳನ್ನು ಹೊಣೆಗಾರರನ್ನಾಗಿ ಮಾಡಿ, ಶಿಸ್ತು ಕ್ರಮ ಕೈಗೊಳ್ಳಬೇಕೆಂದು ಜಿಲ್ಲಾಧಿಕಾರಿಗಳನ್ನು ಆಗ್ರಹಿಸುತ್ತೇವೆ.

–ಸ.ರ.ಸುದರ್ಶನ, ಪ್ರಧಾನ ಕಾರ್ಯದರ್ಶಿ, ಕನ್ನಡ ಕ್ರಿಯಾ ಸಮಿತಿ, ಮೈಸೂರು.

■ ಅಸ್ತಿ ತೆರಿಗೆ ಏರಿಕೆ : ಅಸಂಘಟಿತ ನಾಗರಿಕರ ಪಾಡು

ಮಾನ್ಯರೆ,

ಅಸ್ತಿ ತೆರಿಗೆ ಶೇ.15–20 ಏರಿಕೆ ಅವೈಜ್ಞಾನಿಕ. ಬೂಕನಕೆರೆ ವಿಜೇಂದ್ರರ ಪತ್ರ (ದಿನಾಂಕ: 5–4–2024. ಮೈಸೂರು ಮಿತ್ರ. ಓದುಗರ ಪತ್ರ) ಎರ್ರಾಬಿರ್ರಿ ತೆರಿಗೆ ಏರಿಕೆ ಬಗ್ಗೆ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಆದರೆ ಇದಕ್ಕೂ ಮೊದಲೇ (3–4–2024. ಮೈಸೂರು ಮಿತ್ರ) ಪಾಲಿಕೆ ಆಯುಕ್ತೆ ಡಾ.ಎನ್.ಎನ್. ಮಧು ಅವರು, ಮೈಸೂರು ಪಾಲಿಕೆಯು 24–25 ನೇ ಸಾಲಿನ ಅಸ್ತಿ ತೆರಿಗೆ ದರ ಏರಿಸಿಲ್ಲ. ಆದರೆ ರಾಜ್ಯ ಸರ್ಕಾರವು ಅಕ್ಟೋಬರ್ 2023ರಿಂದಲೇ ಅನ್ವಯವಾಗುವಂತೆ ಅಸ್ತಿಗಳ ಮಾರ್ಗಸೂಚಿ ದರವನ್ನು ಸೆಪ್ಟೆಂಬರ್ 2023ರಲ್ಲಿ ಮಾರ್ಗಸೂಚಿ ಮೌಲ್ಯವನ್ನು ಹೆಚ್ಚಿಸಿರುವುದರಿಂದ ಆದರನ್ವಯ ಅಸ್ತಿ ತೆರಿಗೆ ಲೆಕ್ಕಾಚಾರ ಮಾಡುವುದರಿಂದ ಸಹಜವಾಗಿಯೇ ಪ್ರಸಕ್ತ ಸಾಲಿನ ಏ.1ರಿಂದ ಅಸ್ತಿ ತೆರಿಗೆ ದರವೂ ಹೆಚ್ಚಾಗಲಿದೆ ಎಂದು ಸ್ಪಷ್ಟನೆ ನೀಡಿದ್ದಾರೆ.

ಮಾಧ್ಯಮಗಳಲ್ಲಿ ವರದಿಯಾದಾಗ, ಜನರಾಗಲಿ, ಜನಪ್ರತಿನಿಧಿಗಳಾಗಲಿ, ನಾಗರೀಕ ಸಮಿತಿಗಳಾಗಲಿ, ಪ್ರತಿಭಟಿಸಿದ್ದಾಗಲಿ, ವಿರೋಧಿಸಿದ್ದಾಗಲಿ ನಡೆಯಲಿಲ್ಲ. ಆದರೆ ಅದೆಲ್ಲ ಕಳೆದು ಈಗ ನಾಗರಿಕರು ತೆರಿಗೆ ಪಾವತಿಸಲು ಪಾಲಿಕೆ ಕಚೇರಿಗಳಿಗೆ ಹೋದಾಗ ಏರಿಕೆಯ ಬಿಸಿ ತಾಗುತ್ತಿದೆ.! ಆದರೆ ಈಗ ಕಾಲ ಮಿಂಚಿದ್ದು ಪ್ರತಿಭಟಿಸಿದರೂ ಪ್ರಯೋಜನವಿಲ್ಲದಾಗಿದೆ.

ಆದರೆ ಸೆಪ್ಟೆಂಬರ್‌ನಲ್ಲಿ ಸರ್ಕಾರ ಆದೇಶ ನೀಡಿದಾಗ ಜನರು ಪ್ರತಿಭಟನೆ ನಡೆಸಿದ್ದರೆ, ಹಾಗೂ ನಮ್ಮ ಜನಪ್ರತಿನಿಧಿಗಳು ವಿಧಾನ ಸಭೆ ಅಧಿವೇಶನದಲ್ಲಿ ಚರ್ಚೆ ನಡೆಸಿದ್ದರೆ, ಈ ಏರಿಕೆಯನ್ನು ನ್ಯಾಯಯುತವಾಗಿ ಕಡಿಮೆ ಮಾಡಿಸಲು ಸಾಧ್ಯವಿತ್ತು.

ಆದರೆ ನಾನು ಗಮನಿಸಿದಂತೆ ಕಳೆದ 20–25 ವರ್ಷಗಳಲ್ಲಿ ಲೋಕಸಭೆಯಲ್ಲಾಗಲಿ, ವಿಧಾನ ಸಭೆಗಳಲ್ಲಾಗಲಿ ಯಾವುದೇ ನಾಗರಿಕ ಸಮಸ್ಯೆ, ಮಸೂದೆಗಳ ಬಗ್ಗೆ ವಿಸ್ತೃತ ಚರ್ಚೆಗಳು ನಡೆದು ಅನುಮೋದನೆ ಪಡೆದದ್ದು ಬಹಳ ಕಡಿಮೆಯೇ. ಮಸೂದೆಗಳು, ಗದ್ದಲ, ವಾಕ್ ಔಟ್‌ಗಳ ನಡುವೆ ಸಭಾಪತಿಗಳ ಧ್ವನಿ ಮತದ ಮೇಲೆ ಅಂಗೀಕಾರಗೊಂಡದ್ದೆ ಹೆಚ್ಚು.

ಹೀಗಿರುವಾಗ ಸಂಘಟನೆಯೇ ಇಲ್ಲದ ನಾಗರಿಕರ ಪರವಾಗಿ ಹೋರಾಡುವವರು ಯಾರು? ಟೋಲ್ ದರ, ವಿಮೆ ಏರಿಕೆ ಮಾಡಿದರೆ ಲಾರಿ ಮಾಲೀಕರು ದೇಶಾದ್ಯಂತ ಪ್ರತಿಭಟಿಸುತ್ತಾರೆ. ಹಾಗೆಯೇ ವರ್ತಕರು, ನೌಕರರು, ಕಾರ್ಮಿಕರು ತಮ್ಮ ತಮ್ಮ ಹಕ್ಕುಗಳಿಗಾಗಿ ಪ್ರತಿಭಟಿಸಿ ನ್ಯಾಯ ಪಡೆಯುತ್ತಾರೆ. ಆದರೆ ಯಾವುದೇ ಸಂಘಟನೆ ಇಲ್ಲದ ನಾಗರಿಕರ ಪರವಾಗಿ ಹೋರಾಟ ಮಾಡುವವರು ಯಾರು?

ಅಲ್ಲದೆ ಅಸ್ತಿ ತೆರಿಗೆಯನ್ನು ಹೀಗೆ ಏರಿಕೆ ಮಾಡುತ್ತಾ ಹೋಗುತ್ತಿದ್ದರೆ, ನಾಗರಿಕರು ನೆಮ್ಮದಿಯಾಗಿ ಮನೆಯಲ್ಲಿ ಬದುಕುವ ಹಕ್ಕನ್ನೂ ಕಸಿದುಕೊಂಡಂತಾಗುತ್ತದೆ.

ವಾಣಿಜ್ಯ, ಬಾಡಿಗೆಗೆ ನೀಡುವ ಅಸ್ತಿಗಳಿಗೆ ಬೇಕಾದರೆ ತೆರಿಗೆ ಏರಿಕೆ ಮಾಡಿದರೆ ಯಾರೂ ಪ್ರಶ್ನೆ ಮಾಡುವುದಿಲ್ಲ. ಆದರೆ ತಾವು ತಮ್ಮದೇ ಸ್ವಂತ ಮನೆಯಲ್ಲಿ ವಾಸಿಸಲು ಕೈಲಾಗದಷ್ಟು ದುಬಾರಿ ತೆರಿಗೆ ಕಟ್ಟುವುದು ಬದುಕುವ ಹಕ್ಕನ್ನೇ ಕಸಿದುಕೊಂಡಂತೆ. ಈಗ ಸಾಲದ್ದಕ್ಕೆ ತೆರಿಗೆ ಏರಿಕೆ ಶೇ.15–20ರಷ್ಟು ಹೆಚ್ಚಳ! ಬೆಕ್ಕಿಗೆ ಗಂಟೆ ಕಟ್ಟುವವರು ಯಾರು? **–ಮುಳ್ಳೂರು ಪ್ರಕಾಶ್, ಮೈಸೂರು.**

■ ದಾ(ಧ್ಯಾ)ನ

ಮಾನ್ಯರೆ,
ಪ್ರಜಾಪ್ರಭುತ್ವ ಒಂದು ನಮೂನೆಯ
ಆಧ್ಯಾತ್ಮಿಕ ವಿದ್ಯಮಾನ!
ಬೇಕು 'ಮತದಾನ'ಕ್ಕೆ ಮುನ್ನ
ಗಹನ 'ಧ್ಯಾನ'–
ಯಾರಿಗೆ ಮತ ಹಾಕಿದರೆ ಹಿತ,
ಇಲ್ಲ ಅನಾಹುತ ಎಂಬುದನ್ನು ಕುರಿತ
ಚಿಂತನ!

■ ಕಂ (ಅಂ)ಗನಾ

'ಕಂಗನಾ' ಎಂದರೆ ಯಾರು?
ವಿವಾದಾಸ್ಪದ ಅಂಗನಾ,
ಬಾಲಿವುಡ್ ತಾರೆ!–ಸರೀನಾ?
ಬ(ಫ)ಲ : ಹೆಣ್ಣು ಈಗ
'ಬಲ'ಶಾಲಿ; ಲಾಗಾಯ್ತಿನಿಂದಲೂ
'ಫಲ' ಶಾಲಿ (ವನ) !

–ಸಿಪಿಕೆ, ಹಿರಿಯ ಸಾಹಿತಿಗಳು, ಮೈಸೂರು.


ನಮ್ಮ ಮೈಸೂರಿನ ಅಸಾಮಾನ್ಯರು



ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರಿಂದ ಹಿಡಿದು ಯದುವಂಶದ ಕೊನೆಯ ಮಹಾರಾಜರಾದ ಜಯಚಾಮರಾಜ ಒಡೆಯರ್ ಆಡಳಿತದ ಅವಧಿಯವರೆಗೆ ಅನೇಕ ಶ್ರೇಷ್ಠ ಮಹನೀಯರು ಮೈಸೂರು ರಾಜ್ಯದಲ್ಲಿ ಗಣನೀಯ ಸೇವೆ ಸಲ್ಲಿಸಿದ್ದಾರೆ. ಅಂತಹ ಕೆಲವರ ಹೆಸರುಗಳನ್ನು ಮೈಸೂರು ಚರಿತ್ರೆಗೆ ಸಂಬಂಧಪಟ್ಟ ಇತಿಹಾಸದ ಪುಸ್ತಕಗಳಲ್ಲಿ ಪ್ರಸ್ತಾಪಿಸಿರುವುದನ್ನು ನಾವು ಕಾಣುತ್ತೇವೆ. ಆಡಳಿತದ ಪ್ರಮುಖ ಹುದ್ದೆಯಲ್ಲಿದ್ದು, ಗಣನೀಯ ಸೇವೆ ಸಲ್ಲಿಸಿದ್ದ ಕೆಲವರ ಹೆಸರುಗಳು ಅವುಗಳಲ್ಲಿ ಕಂಡು ಬಂದರೂ, ಅವರಂತೆಯೇ ಸೇವೆ ಸಲ್ಲಿಸಿರುವ ಇತರ ನೂರಾರು ಮಂದಿ ಎಲ್ಲಿಯೂ ಪ್ರಸ್ತಾಪಗೊಳ್ಳದೆ ಎಲೆಮರೆಕಾಯಿಯಾಗಿ ಉಳಿದು ಹೋಗಿದ್ದಾರೆ. ನೆನಪಿನ ಅಂಗಳದಿಂದ ಜಾರಿ ಹೋಗಿದ್ದಾರೆ. ಹಾಗೆ ಸೇವೆ ಸಲ್ಲಿಸಿದವರಲ್ಲಿ ಹಲವಾರು ಮಂದಿ ಅಂದಿಗೆ ಖ್ಯಾತ ನಾಮರಾಗಿದ್ದರೂ ಇಂದು ಅವರ ಬಗ್ಗೆ ನಮಗೆ ಹೆಚ್ಚು ತಿಳಿಯದೆ ಹೋಗಿದೆ. ನೆನಪಿನಿಂದ ಅಳಿಸಿಹೋಗಿದ್ದಾರೆ. ಕೆಲವರ ಸೇವೆಯನ್ನಾದರೂ ಇಲ್ಲಿ ಗುರುತಿಸುವ ಪ್ರಯತ್ನ ನನ್ನದು. ಇಂತಹ ಪ್ರಯತ್ನ ಬಹಳ ಹಿಂದೆಯೇ ಪ್ರಾರಂಭಿಸುವ ಉದ್ದೇಶ ಹೊಂದಿದ್ದರೂ, ಅದು ಈಗ ಸಾಧ್ಯವಾಗುತ್ತಿದೆ. ನೆನಪಿನಂಗಳದಿಂದ ಮರೆಯಾದ ಮಹನೀಯರ ಪರಿಚಯ ಒಂದು ಮಾಲಿಕೆಯಾಗಿ ಪ್ರಕಟಗೊಳ್ಳಲಿದೆ. ಅವು 'ಮೈಸೂರು ಮಿತ್ರ' ಓದುಗರಿಗೆ ಮೆಚ್ಚುಗೆಯಾದರೆ, ನನಗೆ ಬರೆದ ತೃಪ್ತಿ.



17. ಗಾನಕಲಾ ಧುರಂಧರ ಮೈಸೂರು ಕರಿಗಿರಿರಾಯರು



ಗೌರಿ ಸತ್ಯ
ಹಿರಿಯ ಪತ್ರಕರ್ತರು

ಚಾಮರಾಜ ಒಡೆಯರ್ ಕಾಲದಲ್ಲಿ ಹಲವಾರು ಖ್ಯಾತ ಸಂಗೀತಗಾರರಿದ್ದರು. ವೀಣಾ ಶಾಮಣ್ಣ, ವೀಣಾ ಪದ್ಮನಾಭಯ್ಯ, ವೀಣಾ ಶೇಷಣ್ಣ, ವೀಣಾ ಸುಬ್ಬಣ್ಣ, ಮೈಸೂರು ವಾಸುದೇವಾಚಾರ್ಯ, ಬಿಡಾರಂ ಕೃಷ್ಣಪ್ಪ, ತಿರುಪ್ಪನಂದಲ್ ಪಟ್ಟಾಭಿರಾಮಯ್ಯ, ಸೋಸಲೆ ಅಯ್ಯಶಾಸ್ತ್ರಿ, ಜಯರಾಯಾಚಾರ್ಯ, ಗಿರಿಭಟ್ಟರ ತಮ್ಮಯ್ಯ ಹಾಗೂ ನಂಜನಗೂಡು ಸುಬ್ಬಾಶಾಸ್ತ್ರಿ ಇಂತಹ ಸಂಗೀತ ದಿಗ್ಗಜರುಗಳಿದ್ದರು. ಅವರಲ್ಲಿ ಅನೇಕರು ತಮ್ಮ ವಿದ್ವತ್ತಿನಿಂದ ಖ್ಯಾತರಾದವರು. ಅವರುಗಳ ಪೈಕಿ ವಾಗ್ಗೇಯಕಾರರಾಗಿ ಉನ್ನತ ಹಿರಿಮೆ ಸಾಧಿಸಿದ ಮೈಸೂರು ಕರಿಗಿರಿರಾಯರೂ ಒಬ್ಬರು.

ಮೈಸೂರಿನ ರಾಜರು ಮುಂಚಿನಿಂದಲೂ ಸಂಗೀತ, ಸಾಹಿತ್ಯ, ಇತ್ಯಾದಿ ಕಲೆಗಳಿಗೆ ಪ್ರೋತ್ಸಾಹ ನೀಡುತ್ತಿದ್ದರು. ಅವರಲ್ಲಿ ಕೆಲವರು ತಾವೇ ಸ್ವತಃ ಸಂಗೀತ ಕಲಿತು ವಾದ್ಯಗಳನ್ನು ನುಡಿಸುತ್ತಿದ್ದರು. ಚಿಕ್ಕದೇವರಾಜ ಒಡೆಯರು ಉತ್ತಮ ವೈಣಿಕರಾಗಿದ್ದರು. ಸಂಗೀತ, ಸಾಹಿತ್ಯ, ಕಲೆಗಳ ಪೋಷಕರಾಗಿದ್ದುದಲ್ಲದೆ ಸ್ವತಃ 'ಗೀತ ಗೋಪಾಲ' ಮತ್ತಿತರ ಕೃತಿಗಳನ್ನು ರಚಿಸಿದರು. ಮುಮ್ಮಡಿ ಕೃಷ್ಣರಾಜ ಒಡೆಯರು ಅಧಿಕಾರ ವಹಿಸಿಕೊಂಡ ಮೇಲಂತೂ ಕಲೆಗೆ ಹೆಚ್ಚಿನ ಪ್ರೋತ್ಸಾಹ ದೊರೆಯಿತು. ಅವರು ಸಂಗೀತ ಶಾಸ್ತ್ರದಲ್ಲಿ ನುರಿತವರಾಗಿದ್ದುದಲ್ಲದೆ ನೂರಾರು ಕಲಾವಿದರಿಗೆ ತಮ್ಮ ರಾಜಸಭೆಯಲ್ಲಿ ಆಶ್ರಯ ನೀಡಿದರು. ಚಾಮರಾಜ ಒಡೆಯರ್ ಕಾಲದಲ್ಲಿ ಕಲೆ ಮತ್ತಷ್ಟು ವಿಸ್ತಾರವಾಗಿ ಬೆಳೆದು ಖ್ಯಾತ ವಿದ್ವಾಂಸರು ಅವರ ಸಭೆಯನ್ನು ಅಲಂಕರಿಸಿದ್ದರು. ಮಹಾರಾಜರೇ ಪಿಟೀಲು ನುಡಿಸುವುದರಲ್ಲಿ ಹೆಚ್ಚಿನ ಆಸಕ್ತಿಯಲ್ಲದೆ, ಪಾಶ್ಚಾತ್ಯ ಸಂಗೀತದಲ್ಲಿ ನೈಪುಣ್ಯತೆ ಪಡೆದಿದ್ದರು. ಅವರ ರಾಜಸಭೆಯನ್ನು ಅಲಂಕರಿಸಿದ್ದ ವಿದ್ವಾಂಸರುಗಳ ಪೈಕಿ ಕರಿಗಿರಿರಾಯರೂ ಒಬ್ಬರು.

ಕರಿಘಟ್ಟದ ರಂಗನಾಥನ ಹೆಸರಿನಲ್ಲಿ ಕರಿಗಿರಿ ಎಂದು ಹೆಸರು ಹೊಂದಿದ್ದ ಅವರು ಹಿರಿಯ ಸಂಗೀತಗಾರರ ಪ್ರೀತಿ ಗೌರವಗಳನ್ನು ಸಂಪಾದಿಸಿ ರಾಜಾಸ್ಥಾನದ ಪ್ರತಿಷ್ಠೆಯನ್ನು ಪಾಲಿಸಿಕೊಂಡು ಬಂದರು. "ಕಲೆಯ ಅನುಷ್ಠಾನದಲ್ಲಿ ಪರಿಪಕ್ವವಾಗಿದ್ದುಕೊಂಡು, ಸಂಗೀತ ಶಾಸ್ತ್ರ ವಿಚಾರವಾಗಿ ಆಳವಾದ ಅಧ್ಯಯನವನ್ನೂ ಮಾಡಿ, ಸ್ವತಂತ್ರವಾದ ಜೀವಿಕೆಯನ್ನು ಹಿಡಿದು, ಶಿಷ್ಯ ಸಂಗ್ರಹ, ಗ್ರಂಥರಚನೆಯನ್ನು ಮಾಡಿ ಕೀರ್ತಿಕಾಯರಾಗಿ ಉಳಿದವರು ಈ ಮಹನೀಯರು." ಒಬ್ಬರೇ ಸಂಗೀತ ಶಾಸ್ತ್ರ ಮತ್ತು ಅನುಷ್ಠಾನದಲ್ಲಿ ಪರಿಣಿತಿ ಸಾಧಿಸಿರುವವರು ಅಪರೂಪವೇ. ಕರಿಗಿರಿರಾಯರು ಈ ಸಾಧನೆಯನ್ನು ಮಾಡಿ ಗೌರವ ಪಡೆದಿದ್ದರು.

ಮುಮ್ಮಡಿ ಕೃಷ್ಣರಾಜ ಒಡೆಯರ್ ಆಸ್ಥಾನದಲ್ಲಿ ವೇದಾಂತ ಪಂಡಿತರಾಗಿದ್ದ ಲಕ್ಷ್ಮೀನರಸಿಂಹಾಚಾರ್ಯರ ಎರಡನೇ ಪುತ್ರರಾಗಿ ಇವರು 1853 ಜನಿಸಿದರು. ಇವರ ಮೊದಲನೆಯ ಪುತ್ರ ವೆಂಕಟನರಸಿಂಹಾಚಾರ್ಯರೂ ತಂದೆಯಂತೆ ಸಂಸ್ಕೃತದಲ್ಲಿ ಪ್ರಾವೀಣ್ಯತೆ ಹೊಂದಿದ್ದರು. ಸಂಸ್ಕೃತ, ವೇದಾಂತವನ್ನು ಚೆನ್ನಾಗಿ ಕಲಿತಿದ್ದರೂ ಕರಿಗಿರಿರಾಯರಿಗಾದರೋ ಸಂಗೀತದಲ್ಲಿ ಆಸಕ್ತಿ. ಆದರೆ ವೈದಿಕ ಸಂಪ್ರದಾಯದ ಮನೆಯಲ್ಲಿ ಸಂಗೀತ ಕಲಿಯುವುದಕ್ಕೆ ತಂದೆ ಮತ್ತು ಅಣ್ಣ ಇಬ್ಬರ ವಿರೋಧವಿತ್ತು. ವೈದಿಕ ಸಂಪ್ರದಾಯದ ಮನೆಯಲ್ಲಿ ಸಂಗೀತಾಭ್ಯಾಸ ನಿಷಿದ್ಧ ಎಂಬ ನಂಬಿಕೆ. ಇದರಿಂದಾಗಿ ಕರಿಗಿರಿರಾಯರು ತಂದೆಗೆ ತಿಳಿಯದಂತೆ ಆಸ್ಥಾನದಲ್ಲಿ ವಿದ್ವಾಂಸರಾಗಿದ್ದ ಸುಬ್ಬರಾಯರಲ್ಲಿ ಕೆಲವು ವರ್ಷಗಳು ಸಾಧನೆ ಮಾಡಿದರು. ಸುಬ್ಬರಾಯರೇ ಕರಿಗಿರಿರಾಯರಿಗೆ ಮೊದಲ ಸಂಗೀತ ಗುರುಗಳಾದರು.

ಕರಿಗಿರಿರಾಯರಿಗೆ ಇನ್ನೂ 23 ವರ್ಷ ವಯಸ್ಸಾಗಿರಲಿಲ್ಲ. ಮನೆಯವರೆಲ್ಲಾ ರಾಘವೇಂದ್ರ ಸ್ವಾಮಿಗಳ ಆರಾಧನೆಗೆಂದು ನಂಜನಗೂಡಿಗೆ ತೆರಳಿದ್ದರು. ಮಠಾಧಿಪತಿಗಳಾಗಿದ್ದ ಸ್ವಾಮಿಗಳೂ ಅಲ್ಲಿದ್ದರಂತೆ. ಪೂಜೆಯೆಲ್ಲಾ ಮುಗಿದ ಮೇಲೆ ಕರಿಗಿರಿಯವರ ಸಂಗೀತಾಭ್ಯಾಸ ತಿಳಿದಿದ್ದ ಸ್ವಾಮಿಗಳು ಕರಿಗಿರಿಯರನ್ನು ಹಾಡುವಂತೆ ಅಪ್ಪಣೆ ಮಾಡಿದರಂತೆ. ಕರಿಗಿರಿಯವರು ಉತ್ಸಾಹದಿಂದ ತಂದೆಯಿದ್ದಾರೆಂಬುದನ್ನು ಮರೆತು ಉತ್ಸಾಹದಿಂದ, ಅದ್ಭುತವಾದ ಕಂಠಮಾಧುರ್ಯದಿಂದ ಹಾಡಿದರಂತೆ. ಅಲ್ಲಿದ್ದ ಎಲ್ಲರೂ ಪ್ರೌಢಿಮೆ ಮತ್ತು ಕಂಠಮಾಧುರ್ಯವನ್ನು ಮೆಚ್ಚಿ ಕೊಂಡಾಡಿದರಂತೆ. ಆದರೆ ತಂದೆ ಮಾತ್ರ ಮುನಿಸಿಕೊಂಡು ತಮ್ಮ ಮಾತಿಗೆ ವಿರುದ್ಧವಾಗಿ ಮಗ ಸಂಗೀತ ಕಲಿತಿರುವುದಕ್ಕೆ ಕೋಪ ಮಾಡಿ ಕೊಂಡು ಮೈಸೂರಿಗೆ ಹಿಂತಿರುಗಿದರಂತೆ. ಮೈಸೂರಿಗೆ ಬಂದ ಮೇಲೆ ತಂದೆ ಮತ್ತು ಮಗನಿಗೆ ಮಾತು ಬೆಳೆದು ಕರಿಗಿರಿಯವರು ಮನೆಯನ್ನೇ ಬಿಟ್ಟು ಹೊರಟು ಹೈದರಾಬಾದಿನಲ್ಲಿ ತಮ್ಮ ನೆಂಟರ ಮನೆಯಲ್ಲಿ ಸಂಗೀತಾಭ್ಯಾಸವನ್ನು ಮುಂದುವರಿಸಿದರು. ಸಂಗೀತ ಚೆನ್ನಾಗಿ ಕಲಿತು ಕಛೇರಿಗಳನ್ನೂ ಮಾಡಲಾರಂಭಿಸಿದರು. ತಮ್ಮ ಕಂಠ ಮಾಧುರ್ಯದಿಂದ ಖ್ಯಾತಿ ಗಳಿಸಿ ಪ್ರಶಸ್ತಿಗಳನ್ನು ಪಡೆದರು. ಅವರ ಕೀರ್ತಿ ಉತ್ತರ ಭಾರತದಲ್ಲೂ ಹರಡಿ ಅಲ್ಲೆಲ್ಲಾ ಯಶಸ್ವಿಯಾಗಿ ಕಚೇರಿಗಳನ್ನು ನಡೆಸಿದರು.

ಕಾಲಾನಂತರ ತಮ್ಮ ತಂದೆಯವರು ರೋಗಗ್ರಸ್ಥರಾಗಿದ್ದು ಕ್ಷೀಣಾವಸ್ಥೆಯಲ್ಲಿ ಇರುವುದನ್ನು ತಿಳಿದು ಅವರು ಮೈಸೂರಿಗೆ ಹಿಂತಿರುಗಿ ಬಂದರು. ತಂದೆಯವರು ತೀರಿಕೊಂಡ ನಂತರ ಅವರು ಮೈಸೂರಿನಲ್ಲೇ ನೆಲೆಸಿದರು. ಅವರ ಕೀರ್ತಿ ಮಹಾರಾಜ ಚಾಮರಾಜ ಒಡೆಯರಿಗೂ ತಿಳಿದು ಅರಮನೆಯಲ್ಲಿ ಕಚೇರಿಯೊಂದನ್ನು ಏರ್ಪಡಿಸಿದರು. ಅವರ ಪಾಂಡಿತ್ಯ ಮತ್ತು ಕಂಠ ಮಾಧುರ್ಯವನ್ನು ಮಹಾರಾಜರು ಮೆಚ್ಚಿ ಅವರನ್ನು ಆಸ್ಥಾನ ವಿದ್ವಾಂಸರನ್ನಾಗಿ ನೇಮಿಸಿಕೊಂಡರು. ಆಗ ಅವರಿಗಿನ್ನೂ 45 ವರ್ಷ ವಯಸ್ಸಷ್ಟೇ. ಚಾಮರಾಜ ಒಡೆಯರ ಅಂದಿನ ಆಸ್ಥಾನದಲ್ಲಿದ್ದ ಸಂಗೀತ ವಿದ್ವಾಂಸರು ಇಡೀ ನಾಡಿನಲ್ಲೇ ಖ್ಯಾತರಾಗಿದ್ದವರು. ಅವರೊಂದಿಗೆ ಆಸ್ಥಾನದಲ್ಲಿ ಸ್ಥಾನಗಳಿಸಿ ಹೆಸರು ಪಡೆಯುವುದು ಬಹಳಷ್ಟು ಕಷ್ಟದ ಕಾರ್ಯವಾಗಿತ್ತು. ಕರಿಗಿರಿರಾಯರು ಆ ಕಾರ್ಯವನ್ನು ಸಾಧಿಸಿ ಆ ವಿದ್ವಾಂಸರಿಂದ ಸನ್ಮಾನಿತರೂ ಆಗಿದ್ದರು ಎಂದರೆ ಸಂಗೀತದಲ್ಲಿ ಅವರ ಪಾಂಡಿತ್ಯ–ಸಾಧನೆಯನ್ನು ತೋರಿಸುತ್ತದೆ. ಆ ಹಿರಿಯ ವಿದ್ವಾಂಸರೆಲ್ಲಾ ಸೇರಿ ಕರಿಗಿರಿ ರಾಯರಿಗೆ 'ಸಂಗೀತ ವಿದ್ಯಾಕಂಠೀರವ' ಎಂಬ ಪ್ರಶಸ್ತಿಯನ್ನೂ ಮತ್ತು ಗಂಟೆಯಿಂದ ಕೂಡಿದ ತೋಡಾವನ್ನೂ ಬಹುಮಾನವಾಗಿ ನೀಡಿದರು. ಆಸ್ಥಾನ ವಿದ್ವಾಂಸರನ್ನಾಗಿ ನೇಮಿಸಿಕೊಂಡಿದ್ದ ಮಹಾರಾಜರು ಕರಿಗಿರಿರಾಯರಿಗೆ 'ಗಾನಕಲಾ ಧುರಂಧರ' ಎಂಬ ಬಿರುದನ್ನು ಕೊಟ್ಟರು. ಹತ್ತು ವರ್ಷಗಳ ನಂತರ ಗದ್ವಾಲ ಸಂಸ್ಥಾನದ ಮಹಾರಾಜರು ಇವರಿಗೆ ಚಿನ್ನದ ಕಂಠೀಹಾರವನ್ನೂ, ಶಾಲು ಜೋಡಿಯನ್ನೂ, ಸಂಭಾವನೆಯನ್ನೂ ನೀಡಿ ಸನ್ಮಾನಿಸಿದರು. 1920ರಲ್ಲಿ ಕಾಶೀ ವಿದ್ಯಾಪೀಠ ಇವರಿಗೆ 'ಸಂಗೀತ ಭೂಷಣ' ಎಂಬ ಪ್ರಶಸ್ತಿ ನೀಡಿ ಸನ್ಮಾನಿಸಿತು.

ಮುಂದೆ ಖ್ಯಾತ ಸಂಗೀತ ವಿದ್ವಾಂಸರಾದ ಹಲವಾರು ಮಂದಿ ಕರಿಗಿರಿರಾಯರ ಶಿಷ್ಯರಾಗಿದ್ದರು. ತಮ್ಮ ಶಿಷ್ಯರಿಗೆ ಕೇವಲ ಬರಿಯ ಕಲೆಗಾರಿಕೆಯನ್ನು ಮಾತ್ರ ಕಲಿಸದೆ ಅದರ ಎಲ್ಲಾ ಪ್ರಕಾರಗಳನ್ನು, ವೈಶಿಷ್ಟಗಳನ್ನು ಮನವರಿಕೆ ಮಾಡಿಕೊಟ್ಟರು. ಇದರಿಂದಾಗಿ ಮುಂದೆ ಅವರು ಸಮರ್ಥ ಸಂಗೀತಗಾರರೆಂದು ಹೆಸರು ಮಾಡಲು ಸಾಧ್ಯವಾಯಿತು. ಅವರ ಶಿಷ್ಯರಲ್ಲಿ 'ಗಾನ ವಿಶಾರದ' ಬಿಡಾರಂ ಕೃಷ್ಣಪ್ಪ, 'ಸಂಗೀತರತ್ನ' ಚಿಕ್ಕರಾಮರಾಯರು, ಗದ್ವಾಲ ಸಂಸ್ಥಾನದ ವಿದ್ವಾಂಸರಾದ ಅನಂತ ಶಾಸ್ತ್ರಿಗಳು, ಬೆಜವಾಡದ ಸುಬ್ಬರಾಯಶಾಸ್ತ್ರಿಗಳು, ಮೈಸೂರಿನ ವಿದ್ವಾನ್ ಅಚ್ಚಪ್ಪ, 'ಪುರುಷ ಸರಸ್ವತಿ'ಯೆಂದು ಪ್ರಖ್ಯಾತರಾದ ರಾಳಪಲ್ಲಿ ಅನಂತಕೃಷ್ಣಶರ್ಮ ಮೊಮ್ಮಗ ಟಿ.ವೆಂಕಟರಾವ್ ಮತ್ತಿತರರಿದ್ದರು. ಮೈಸೂರಿನ ಕುರುಡರ ಶಾಲೆಯಲ್ಲಿ ಅವರು ನೂರಾರು ವಿದ್ಯಾರ್ಥಿಗಳಿಗೆ ಸಂಗೀತದ ಉಪಾಧ್ಯಾಯರಾಗಿ ಸಂಗೀತ ಶಾರದೆಯ ಸೇವೆ ಮಾಡಿದರು. ವಾಗ್ಗೇಯಕಾರರಾಗಿ ಅವರು ಹಲವಾರು ವರ್ಣಗಳನ್ನೂ, ಕೀರ್ತನೆಗಳನ್ನೂ, ದೇವರ ನಾಮಗಳನ್ನೂ ರಚಿಸಿದರು. ಕರಿಗಿರಿರಾಯರು ಖಂಡಿತವಾದಿಗಳೂ, ಪ್ರತಿವಾದಿಗಳಿಗೆ ಸಿಂಹಸ್ವಪ್ನರೂ ಆಗಿದ್ದ ಕರಿಗಿರಿರಾಯರ ಅಂಕಿತನಾಮ 'ನರಸಿಂಹ' ಎಂಬುದಾಗಿತ್ತು. ಇವರು 1927ರ ಅಕ್ಟೋಬರ್ 25ರಂದು ಮೈಸೂರಿನಲ್ಲಿ ಕಾಲವಾದರು.

ಹಸಿರು ಹೊದಿಕೆಯಲ್ಲಿ ಈ ಕುಟುಂಬ
ಬೇಸಿಗೆಯಲ್ಲೂ ತಂಪು...ತಂಪು...!







> ❝ ಜಗತ್ತಿನ ತಾಪಮಾನ ಕಡಿಮೆ ಮಾಡಲು ಇದು ಬಹಳ ಅವಶ್ಯಕ. ನಮ್ಮ ಕೊಡಗಿನಲ್ಲಿ ತುಂಬಾ ಜಾಗ ಇತ್ತು. ಅಲ್ಲಿಯೂ ಈ ರೀತಿ ಗಿಡ ಬಳ್ಳಿಗಳನ್ನು ಬೆಳೆಸಿದೆ. ಆದರೆ ಇದು ನಗರ. ಈ ರೀತಿ ಬಳ್ಳಿ ಬೆಳೆಸುವುದಕ್ಕೆ ಸ್ವಲ್ಪ ಕಷ್ಟವಾಗುತ್ತದೆ. ಮೊದಲು ಮೈಸೂರಿನಲ್ಲಿ ಇಷ್ಟೊಂದು ತಾಪಮಾನ ಇರಲಿಲ್ಲ. ಆದರೆ ಈಗ ತಾಪ ಹೆಚ್ಚಾಗುತ್ತಿದೆ. ಮನೆ ನೋಡಿದವರೆಲ್ಲಾ ಒಳ್ಳೆಯ ಕೆಲಸ ಮಾಡಿದ್ದೀರಿ ಎನ್ನುತ್ತಾರೆ. **–ಬೆಂಜಮಿನ್ ವಾಸ್, ವರ್ಟಿಕಲ್ ಗಾರ್ಡನ್ ಹೋಮ್ ಮಾಲೀಕ**

ಮೈಸೂರು, ಏ.27(ಎಂಕೆ)– ಹಚ್ಚ ಹಸಿರಿನ ಹೊದಿಕೆ... ಶಿಲ್ಪಕಲೆಗಳ ಸೊಬಗು... ಹಕ್ಕಿಗಳ ಕಲರವ... ತಣ್ಣನೆಯ ಹಿತ ಗಾಳಿಯ ಅನುಭವ ನೀಡುವ 'ವರ್ಟಿಕಲ್ ಗಾರ್ಡನ್ ಹೋಮ್' ಅರಮನೆ ನಗರಿ ಮೈಸೂರಿನಲ್ಲಿ ನೋಡುಗರ ಕಣ್ಮನ ಸೆಳೆಯುತ್ತಿದೆ....!

ಗೋಕುಲಂ 3ನೇ ಹಂತದ 10ನೇ ಮುಖ್ಯರಸ್ತೆಯ 11ನೇ ಕ್ರಾಸ್‌ನಲ್ಲಿ ನಿಸರ್ಗದ ಮಡಿಲಲ್ಲಿ ಹಸಿರಿನ ಹೊದಿಕೆಯಿಂದ ರೂಪ ತಾಳಿರುವ, ವನ್ಯಜೀವಿಗಳ ಗೂಡಿನಂತೆ ನೋಡುಗರ ಕಣ್ಣಿಗೆ ಆನಂದ ನೀಡುವ ಹಸಿರು ಮನೆ(ವರ್ಟಿಕಲ್ ಗಾರ್ಡನ್ ಹೋಮ್) ಸುಡು ಬಿಸಿಲ ಬೇಸಿಗೆಯಲ್ಲೂ ಹಚ್ಚ ಹಸಿರಿನಿಂದ ಕಂಗೊಳಿಸುತ್ತಿದೆ.

ಸಾವಿರಾರು ಗಿಡ ಬಳ್ಳಿಗಳ ಹೊದಿಕೆಯಿಂದ ಆವೃತ್ತವಾಗಿರುವ ಈ ಹಸಿರು ಮನೆ, ಮಾಲೀಕರಾದ ಕೊಡಗಿನ ಸೋಮವಾರಪೇಟೆ ಮೂಲದ ಬೆಂಜಮಿನ್ ವಾಸ್ ಅವರ ಪರಿಸರ ಪ್ರೇಮಕ್ಕೆ ಸಾಕ್ಷಿಯಾಗಿದೆ. ಹೊರಗೆ ಸುಡು ಬಿಸಿಲಿದ್ದರೂ ಮನೆ ಗೇಟ್‌ನಿಂದ ಒಳ ಪ್ರವೇಶ ಮಾಡುತ್ತಿದ್ದಂತೆ ತಣ್ಣನೆ ಅನುಭವ ಮನಸ್ಸನ್ನು ಮುದಗೊಳಿಸಲಿದೆ. ಮುಂದೆ ಸಾಗಿ ಮನೆಯೊಳಗೆ ಇಣುಕಿದರೆ ನೂರಾರು ವರ್ಷಗಳಷ್ಟು ಹಳೆಯ ಶಿಲ್ಪಕಲೆಗಳ ಸಾಲು ಇತಿಹಾಸವನ್ನು ಸಾರುತ್ತಿವೆ.

ಕಡಲ ತೀರದಲ್ಲಿ ಸಿಗುವ ಸಣ್ಣ ಗಾತ್ರದಿಂದ ದೊಡ್ಡ ಗಾತ್ರದವರೆಗಿನ ಸುಂದರ ಕಪ್ಪೆಚಿಪ್ಪುಗಳು, ಬಗೆ ಬಗೆ ಕಲಾಕೃತಿಗಳನ್ನೊಳಗೊಂಡ ಪಿಂಗಾಣಿ ಮತ್ತು ಮರದ ವಸ್ತುಗಳು, ಹಕ್ಕಿಗೂಡುಗಳು ನಯನ ಮನೋಹರವಾಗಿ ಆಕರ್ಷಣೆ ಮಾಡಲಿವೆ. ಹಾಗೆಯೇ ಮನೆಯೊಳಗೆ ಇಂಪಾಗಿ ಸದ್ದು ಮಾಡುವ ಲವ್ ಬರ್ಡ್ಸ್‌ಗಳ ಕಲರವ, ಕೈ ನೀಡಿದರೆ ಶೇಕ್ ಹ್ಯಾಂಡ್ ನೀಡುವ ಚುರುಕು ಸ್ನೇಹಿತರ ಶ್ವಾನಗಳು ವಿಶೇಷವಾಗಿವೆ. ಎಸಿ, ಫ್ಯಾನ್ ಇಲ್ಲದಿದ್ದರೂ ಬೇಸಿಗೆಯಲ್ಲೂ ತಣ್ಣನೆಯ ಹಿತ ನೀಡುವ ಹಸಿರು ಮನೆ ಎಲ್ಲರ ಆಕರ್ಷಣೆ ಮಾತ್ರವಲ್ಲ ಸಸ್ಯಶಾಸ್ತ್ರ ವಿದ್ಯಾರ್ಥಿಗಳ ಪಾಠ ಶಾಲೆಯೂ, ಮಿನಿ ವಸ್ತು ಸಂಗ್ರಹಾಲವೂ ಆಗಿದೆ.

ಮೈಸೂರಿನ ಸೆಂಟ್ ಫಿಲೋಮಿನಾ ಚರ್ಚ್‌ನಲ್ಲಿ ಸೇವೆ ಸಲ್ಲಿಸಿ ನಿವೃತ್ತರಾಗಿರುವ ಬೆಂಜಮಿನ್ ವಾಸ್ ಅವರ ಪರಿಸರ ಕಾಳಜಿಗೆ ಅವರ ಪತ್ನಿ ಪ್ಲೋರೀಟಾ, ಮಕ್ಕಳಾ ಜೋರ್ಡಾನ್ ವಾಸ್, ಝಿಯಾನ್ ವಾಸ್ ಸಾಥ್ ನೀಡುತ್ತಿದ್ದಾರೆ. ಗಿಡ ಬಳ್ಳಿ ಹಾಗೂ ಪಕ್ಷಿಗಳ ಆರೈಕೆ, ಶಿಲ್ಪಕಲೆಗಳು ಹಾಗೂ ಕಲಾಕೃತಿಗಳ ಜೋಪಾನ ಮಾಡುವ ಕಾರ್ಯದಲ್ಲಿ ತೊಡಗಿದ್ದಾರೆ.

10 ಸಾವಿರ ಗಿಡ ಬಳ್ಳಿಯ ಹೊದಿಕೆ: ಹಸಿರು ಮನೆಯಲ್ಲಿ ಸುಮಾರು 10 ಸಾವಿರಕ್ಕೂ ಹೆಚ್ಚು ಗಿಡ ಬಳ್ಳಿಗಳನ್ನು ಮನೆಯ ಕೆಳಗೆ ಮತ್ತು ಮೇಲೆ ದೊಡ್ಡ ದೊಡ್ಡ ಪಾಟ್‌ಗಳನ್ನು ಇಟ್ಟಿದ್ದು, ಸೊಂಪಾಗಿ ಬೆಳೆದಿರುವ ಹಸಿರಿನ ಗಿಡಬಳ್ಳಿ ಮನೆ ಮುಂದಿನ ಭಾಗವನ್ನು ಸಂಪೂರ್ಣವಾಗಿ ಆವರಿಸಿ ಹೊದಿಕೆಯಾಗಿದೆ. ಹಾಗೆಯೇ ನೂರಾರು ಬಗೆ ಔಷಧಿಯುಕ್ತ ಬಳ್ಳಿಗಳು ಕುಟುಂಬದ ಆರೋಗ್ಯ ರಕ್ಷಣೆಗೂ ಸಹಕಾರಿಯಾಗಿವೆ. ನಾಗತಳೆ ಗಿಡವೂ ಇರುವುದರಿಂದ ಇದುವರೆಗೆ ಸಣ್ಣ ಹಾವು ಬಂದಿಲ್ಲ ಎಂದು ಮಲೆನಾಡಿನ ಮೂಲದ ಬೆಂಜಮಿನ್ ವಾಸು 'ಮೈಸೂರು ಮಿತ್ರ'ನಲ್ಲಿ ತಮ್ಮ ಹಸಿರು ಮನೆ ವಿಶಿಷ್ಟತೆಯನ್ನು ತಿಳಿಸಿದರು.

ಮೈಸೂರಿಗೆ ಬಂದು 20 ವರ್ಷವಾಯಿತು. 2005ರಲ್ಲಿ ಮನೆ ಕಟ್ಟಿದಾಗಿನಿಂದಲೂ ಗಿಡ, ಬಳ್ಳಿಗಳನ್ನು ಬೆಳೆಸುತ್ತಿದ್ದೆ. ಕಳೆದ 10 ವರ್ಷಗಳಿಂದ ಮನೆ ಸುತ್ತಮುತ್ತ ಗಿಡ, ಬಳ್ಳಿಗಳನ್ನು ಬೆಳೆಸೋಕೆ ಶುರು ಮಾಡಿದೆ. ಅದು ಈಗ ಇಷ್ಟು ದೊಡ್ಡದಾಗಿ ಬೆಳೆದಿವೆ. ಬಳ್ಳಿಗಳು ಜಾಸ್ತಿ ಇವೆ. ದ್ರಾಕ್ಷಿ ಬಳ್ಳಿಗಳಲ್ಲಿ ಸಾಕಷ್ಟು ಹಣ್ಣು ಬಿಡುತ್ತಿವೆ. ಆಯುರ್ವೇದಿಕ್‌ಗೆ ಬಳಸುವ ಬಳ್ಳಿಗಳಿವೆ. ಔಷಧಿಗೆ ಬೇಕಿರುವ ಬಳ್ಳಿಗಳು ಇವೆ. ಹೂವಿನ ರೀತಿಯ ಬಳ್ಳಿಗಳು ಮತ್ತು ಗಿಡಗಳಿವೆ. ಈ ಗಿಡ, ಬಳ್ಳಿಗಳು ತುಂಬಾ ತೇವಾಂಶಭರಿತವಾಗಿದ್ದು, ಚಳಿಗಾಲ ಮತ್ತು ಮಳೆಗಾಲದಲ್ಲಿ 1 ತಿಂಗಳಿಗೊಮ್ಮೆ ನೀರು ಹಾಯಿಸಿದರೆ ಸಾಕು. ಆದರೆ ಈ ಬೇಸಿಗೆಯಲ್ಲಿ ವಾರಕ್ಕೊಮ್ಮೆ ನೀರು ಹಾಕಬೇಕಾಗುತ್ತದೆ ಎಂದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy News papers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com



ಶತಮಾನ ಕಂಡ ಅತ್ಯದ್ಭುತ ಸಂತ, ಪ್ರತ್ಯಕ್ಷ ದೈವ. ಆಧ್ಯಾತ್ಮ ಸಾಧನೆಗಳ ಹರಿಕಾರ, ಸಿದ್ಧಿಗಳನ್ನು ಸಾಧಿಸಿದ ಸಿದ್ಧಿಪುರುಷ

ಆಚಾರ್ಯ ಶ್ರೀ ಅಂತರ್ಮನ ಪ್ರಸನ್ನ ಸಾಗರ್ ಮಹರಾಜ್ ಅವರು

ಚಾಮುಂಡಿಯ ಪುಣ್ಯಭೂಮಿಗೆ ಆಗಮಿಸುತ್ತಿರುವುದು ನಮ್ಮ ಸೌಭಾಗ್ಯ

ಭಾರತದ ದಿಗಂಬರ ಜೈನ ಸಂತರು ಆಧ್ಯಾತ್ಮಿಕ ಅಭ್ಯಾಸದ ಜಾಗತಿಕ ದಾಖಲೆಯನ್ನು ಸ್ಥಾಪಿಸಿದ್ದಾರೆ ಅಂತರಮನ ಆಚಾರ್ಯ ಶ್ರೀ ಮಹರಾಜ್ ಪ್ರಸನ್ನ ಸಾಗರ್ ಜಿ ಅವರು ಮಾಡಿದ ಸಿಂಹನಿಷ್ಕ್ರಿದಿತ ಉಪವಾಸ ವ್ರತದ ಅತ್ಯುತ್ತಮ ಆಚರಣೆಯು ಖಂಡಿತವಾಗಿಯೂ ಭಾರತದ ಶ್ರೇಷ್ಠ ಆಧ್ಯಾತ್ಮಿಕ ಸಂಪ್ರದಾಯದ ಸುವರ್ಣ ಶಾಸನವಾಗಿದೆ. ಈ ಪದ್ಧತಿ ಜಾಗತಿಕ ದಾಖಲೆಯಾಗಿದೆ. ಇಪ್ಪತ್ತು ತೀರ್ಥಂಕರರ ವಿಮೋಚನೆಯ ಭೂಮಿ ಮತ್ತು ಅನೇಕ ತಪಸ್ವಿಗಳ ತಪಸ್ಸಿನ ಭೂಮಿಯಲ್ಲಿ ಅವರು ಅತ್ಯಂತ ಪವಿತ್ರ ಭೂಮಿಯಲ್ಲಿ ಕಠಿಣ ತಪಸ್ಸನ್ನು ಮಾಡಿದರು. ಸನಾತನ ತೀರ್ಥ ರಾಜ ಸಮ್ಮೇದ್ ಶಿಖರ್ ಜಿ ಅವರು 557 ದಿನಗಳ ಕಾಲ ಅಖಂಡ ಮೌನ ಮತ್ತು ಸ್ವಯಂ ನಿಯಂತ್ರಣದಲ್ಲಿ ಧ್ಯಾನವನ್ನು ಅಭ್ಯಾಸ ಮಾಡಿದರು. 496 ದಿನಗಳ ಕಾಲ ನೀರಿಲ್ಲದ ಉಪವಾಸವನ್ನು ಆಚರಿಸಿದರು ಮತ್ತು ಅವರ ಉತ್ಕೃಷ್ಟ ನಿಷ್ಕೃಷ್ಟ ವ್ರತದ ಸಮಯದಲ್ಲಿ ಅಲ್ಪ ಪ್ರಮಾಣದ ಆಹಾರ ಮತ್ತು ನೀರನ್ನು ತೆಗೆದುಕೊಂಡು ಸಮರ್ಪಿತರಾದರು. ಆತ್ಮಾವಲೋಕನ ಮತ್ತು ಅಸ್ತಿತ್ವದಿಂದ ವಿಮೋಚನೆಯ ಶಾಶ್ವತ ಪ್ರಯಾಣ. ಆತ್ಮದ ಸೌಂದರ್ಯವನ್ನು ಬಹಿರಂಗಪಡಿಸುವ ಸಲುವಾಗಿ, ಭಗವಾನ್ ಮಹಾವೀರರ ನಂತರ, ಮೊದಲ ಬಾರಿಗೆ, ನಿಷ್ಕೃತಿ ವ್ರತದ ಅತ್ಯುತ್ತಮ ಅಭ್ಯಾಸವನ್ನು ಪೂರ್ಣಗೊಳಿಸಿದ ವಿಶ್ವದ ಮೊದಲ ಯಶಸ್ವಿ ಅನ್ವೇಷಕರಾಗಿ ಹೊರಹೊಮ್ಮಿದ್ದಾರೆ ಜ್ಞಾನ, ತಪಸ್ಸು, ಸರಳತೆ ಮತ್ತು ಸತ್ಯಾಸತ್ಯತೆಯ ಪ್ರತಿರೂಪವಾದ ಪರಮಪೂಜ್ಯ ಅಂತರಮನ ಆಚಾರ್ಯ ಶ್ರೀ ಮಹರಾಜ್ ಪ್ರಸನ್ನ ಸಾಗರ್ ಜೀ ಅವರು ಅಹಿಂಸೆಯ ಹರಿಕಾರರು, ಅವರು ವಿಶ್ವಶಾಂತಿ ಮತ್ತು ಸಾಮರಸ್ಯಕ್ಕಾಗಿ ಅವಿರತವಾಗಿ ಶ್ರಮಿಸುತ್ತಿದ್ದಾರೆ. ಅವರ ಆಧ್ಯಾತ್ಮಿಕ ಅಭ್ಯಾಸದ ಪವಿತ್ರ ತ್ರಿಮೂರ್ತಿಗಳಲ್ಲಿ ಪ್ರತಿಫಲಿಸುವ ಸರಿಯಾದ ಜ್ಞಾನ, ಸರಿಯಾದ ತತ್ವಶಾಸ್ತ್ರ ಮತ್ತು ಸರಿಯಾದ ನಡವಳಿಕೆಯ ಸಂಯೋಜನೆಯು ಅವರ ಆಧ್ಯಾತ್ಮಿಕ ಅಭ್ಯಾಸವನ್ನು ಮಾರ್ಗದರ್ಶಿಸುತ್ತಿದೆ. ಅವರ ಕಠಿಣ ತಪಸ್ಸು ವಾರಗಳು ಮತ್ತು ತಿಂಗಳುಗಳ ಕಾಲ ಆಹಾರ ಮತ್ತು ನೀರಿಲ್ಲದೆ ಬದುಕುವುದಕ್ಕೆ ಸಮಾನಾರ್ಥಕವಾಗಿದೆ. ಅವರು ಜ್ಞಾನದ ನಿಧಿ ಮತ್ತು ಅವರ ಜ್ಞಾನ-ಕೇಂದ್ರಿತ ಅಭ್ಯಾಸವನ್ನು ಜೀವಂತ ದಂತಕಥೆ ಎಂದು ವಿವರಿಸಲಾಗುತ್ತದೆ. ಅವರು ನಿಜವಾಗಿಯೂ ಒಬ್ಬ ವ್ಯಕ್ತಿ ಮಾತ್ರವಲ್ಲ, ಒಂದು ಉದ್ದೇಶವೂ ಆಗಿದ್ದಾರೆ, ಜೀವಿ ಮಾತ್ರವಲ್ಲ, ನಂಬಿಕೆಯೂ ಹೌದು.

ಅವರ ಆಲೋಚನೆಗಳ ಆಳದಿಂದ ಹೊರಹೊಮ್ಮುವ ಆಲೋಚನೆಗಳು ಗಂಭೀರ ಮತ್ತು ಅರ್ಥವಾಗುವ ಮತ್ತು ಪ್ರಭಾವಶಾಲಿಯಾಗಿವೆ. ಅವರು ಧರ್ಮ ಮತ್ತು ಅದರ ಪದ್ಧತಿಗಳ ಬಗ್ಗೆ ಅನೇಕ ಪುರಾಣಗಳನ್ನು ಹೋಗಲಾಡಿಸಿದ್ದಾರೆ ಮತ್ತು ಒಬ್ಬರು ತನ್ನ ಮತ್ತು ಇತರರ ಬಗ್ಗೆ ಉದಾತ್ತ ಮತ್ತು ಪ್ರಾಮಾಣಿಕವಾಗಿರಬೇಕು ಮತ್ತು ಮೌಲ್ಯ ಕೇಂದ್ರಿತ ಜೀವನವನ್ನು ನಡೆಸಬೇಕು ಎಂದು ಒತ್ತಿ ಹೇಳಿದರು. ಅಂತರಮನ ಆಚಾರ್ಯ ಶ್ರೀಗಳು ನಿರಂತರವಾಗಿ ತಪಸ್ಸು ಮಾಡುತ್ತಾ ವಿವಿಧ ವಚನಗಳನ್ನು ಅಳವಡಿಸಿಕೊಂಡು ಯಶಸ್ವಿ ಸಾಧಕರೂ ಆಗಿದ್ದಾರೆ. 2001 ರಲ್ಲಿ ಅಕ್ಷಯ ತೃತೀಯದ ಶುಭ ಸಂದರ್ಭದಲ್ಲಿ ಗುರುದೇವ ಶ್ರೀಗಳು ತೀರ್ಥರಾಜ ಸಮ್ಮೇದ್ ಶಿಖರದ ಎಂಟು ವಂದನೆಗಳನ್ನು ಒಂದು ದಿನದಲ್ಲಿ ಮಾಡುವ ಅದ್ಭುತ ಮಾನದಂಡವನ್ನು ಸ್ಥಾಪಿಸಿದರು ಮತ್ತು 27 ದಿನಗಳಲ್ಲಿ 72 ವಂದನೆಗಳನ್ನು ಪೂರ್ಣಗೊಳಿಸಿದರು. ಅವರು ಅದ್ಭುತವಾದ ಮೇಲ್ಪಂಕ್ತಿಯನ್ನು ಹಾಕಿದರು.

ಇದಲ್ಲದೆ, ಪೂಜ್ಯ ಗುರುದೇವ ಶ್ರೀಗಳು ಆಚರಿಸಿದ ಕೆಲವು ಪ್ರಮುಖ ಉಪವಾಸಗಳೆಂದರೆ ಜಿನ ಸಹಸ್ರನಾಮ ವ್ರತ, ಚಾರಿತ್ರ್ಯ ಶುದ್ಧಿ ವ್ರತ, ಮಧ್ಯಮ ಸಿಂಹ್ನಿಷ್ಕ್ರೀಡಿತ ವ್ರತ, ಜ್ಞಾನ ಪಚ್ಚಿಸಿ ವ್ರತ, ಸಮ್ಮೇದ ಶಿಖರ ವ್ರತ, ಪಂಚಮೇರು ವ್ರತ, ರತ್ನತ್ರಯ ವ್ರತ, ದಶಲಕ್ಷಣ ವ್ರತ, ಸೋಲಹರಣ ಮತ್ತು ಜಿಂಗುನ್ ಸಮ್ಪತಿವ್ರತ. ಅಷ್ಟಾಹ್ನಿಕ ವ್ರತ, ರವಿ ವ್ರತ, ನಮೋಕಾರ ಉಪವಾಸ, ಭವನವಿಧಿ ಉಪವಾಸ, ಸಂವಶರಣ ಉಪವಾಸ, ಅಷ್ಟಮಿ ಉಪವಾಸ, ಭಕ್ತಮಾರ್ಗ, ಚೌಂಸತದ್ಧಿ ಉಪವಾಸ ಇತ್ಯಾದಿ. ಅಂತರಮನ ಆಚಾರ್ಯ ಶ್ರೀಗಳ ಆಧ್ಯಾತ್ಮಿಕ ಅಭ್ಯಾಸವು ಜ್ಞಾನದ ಶುದ್ಧೀಕರಣದ ಪಯಣವು ಪರಿತ್ಯಾಗದ ಜೊತೆಗೆ ಯೋಚನಾರಹಿತತೆಯತ್ತ ಸಾಗಬೇಕೆಂದು ಇಡೀ ಜಗತ್ತಿಗೆ ಅರಿವು ಮೂಡಿಸಿದೆ. ಒಬ್ಬ ವ್ಯಕ್ತಿಯು ಜಾಗೃತನಾಗಿರಲು ಮತ್ತು ಆತ್ಮದ ಕಣ್ಣುಗಳ ಮೂಲಕ ಸತ್ಯದ ವಿಶಾಲ ಸ್ವರೂಪವನ್ನು ನೋಡುವುದು ಅವಶ್ಯಕ. ಸತ್ಯವು ಗೋಚರಿಸುವುದಿಲ್ಲ, ಏಕೆಂದರೆ ಅದು ಸತ್ಯದ ಒಂದು ಭಾಗ ಮಾತ್ರ. ಸಾಪೇಕ್ಷ ದೃಷ್ಟಿಕೋನದಿಂದ ಅವರು ಯಾವಾಗಲೂ ಸತ್ಯದ ವಿವಿಧ ಆಯಾಮಗಳ ಬಗ್ಗೆ ಜನರಿಗೆ ಅರಿವು ಮೂಡಿಸುತ್ತಾರೆ, ಇದರಿಂದಾಗಿ ಒಟ್ಟಾರೆ ಪರಿಕಲ್ಪನೆಯನ್ನು ಅರ್ಥಮಾಡಿಕೊಳ್ಳಬಹುದು.

ಜೈ ಜಿನೇಂದ್ರ

ನಮಸ್ತೆ ಮಹರಾಜ್

– ಎಂ. ಡಿ ಹರೀಶ್ ಕುಮಾರ್ ಹೆಗ್ಡೆ
ಹಿರಿಯ ವಕೀಲರು ಮೈಸೂರು

ಮತದಾನದ ನಂತರ ಶತಾಯುಷಿ ನಿಧನ



ಕೆಆರ್.ಪೇಟೆ: ತಾಲ್ಲೂಕಿನ ಅಗ್ರಹಾರ ಬಾಚಹಳ್ಳಿ ಗ್ರಾಮದ ಹಿರಿಯ ಮುಖಂಡರು, ಗ್ರಾಮ ಪಂಚಾಯಿತಿ ಮಾಜಿ ಸದಸ್ಯರಾದ ಸತ್ತೇಗೌಡ ಉರುಫ್ ದೊಡ್ಡೇಗೌಡ(103) ಅವರು ಮತದಾನ ಮಾಡಿದ ನಂತರ ನಿಧನ ಹೊಂದಿರುತ್ತಾರೆ.


ಲೋಕಸಭಾ ಚುನಾವಣೆಯಲ್ಲಿ ಮತದಾನ ಮಾಡಿ ಮನೆಗೆ ಹಿಂತಿರುಗಿದ ನಂತರ ಅವರು ಹೃದಯಾಘಾತದಿಂದ ನಿಧನರಾಗಿದ್ದಾರೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೃತರು ಪುತ್ರರಾದ ಗ್ರಾ.ಪಂ.ಸದಸ್ಯ ಚನ್ನೇಗೌಡ, ನಾಗೇಗೌಡ, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ.

ಮೃತರ ಅಂತ್ಯಕ್ರಿಯೆಯು ಶನಿವಾರ ಸ್ವಗ್ರಾಮ ಅಗ್ರಹಾರ ಬಾಚಹಳ್ಳಿ ಗ್ರಾಮದಲ್ಲಿ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ. ಸತ್ತೇಗೌಡರ ನಿಧನಕ್ಕೆ ತಾಲೂಕಿನ ವಿವಿಧ ಗಣ್ಯರು ಸಂತಾಪ ಸೂಚಿಸಿದ್ದಾರೆ.

ಎಸ್.ಬಿ.ನಿಂಗಶೆಟ್ಟಿ ನಿಧನ

ಕೆ.ಆರ್.ಪೇಟೆ,ಏ.27–ತಾಲೂಕಿನ ಸಂತೇಬಾಚಹಳ್ಳಿ ಗ್ರಾಮದ ಶಿವಜ್ಯೋತಿಪಣ ಸಮುದಾಯದ ಹಿರಿಯ ಮುಖಂಡರಾದ ಎಸ್.ಬಿ.ನಿಂಗ ಶೆಟ್ಟಿ (93) ಅವರು ನಿಧನ ಹೊಂದಿರುತ್ತಾರೆ.



ಮೃತರು ಪತ್ನಿ, ಇಬ್ಬರು ಪುತ್ರರು, ಐವರು ಪುತ್ರಿಯರು, ಅಳಿಯ ಡಿ.ಆರ್.ಶಿವಕುಮಾರ್ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯು ಸ್ವಗ್ರಾಮ ಸಂತೇಬಾಚಹಳ್ಳಿ ಗ್ರಾಮ ದಲ್ಲಿರುವ ಅವರ ತೋಟದಲ್ಲಿ ನಡೆಯಿತು. ಮೃತರ ನಿಧನಕ್ಕೆ ಶಾಸಕ ಹೆಚ್.ಟಿ.ಮಂಜು, ಮಾಜಿ ಸಚಿವ ಡಾ.ಕೆ.ಸಿ.ನಾರಾಯಣಗೌಡ, ಆರ್.ಟಿ.ಓ ಅಧಿಕಾರಿ ಮಲ್ಲಿಕಾರ್ಜುನ್, ಮಾಜಿ ಶಾಸಕರಾದ ಕೆ.ಬಿ.ಚಂದ್ರಶೇಖರ್, ಬಿ.ಪ್ರಕಾಶ್, ಮನ್‌ಮುಲ್ ನಿರ್ದೇಶಕ ಡಾಲು ರವಿ ಸೇರಿದಂತೆ ಗಣ್ಯರು ಸಂತಾಪ ಸೂಚಿಸಿದ್ದಾರೆ

ಪಿಎಚ್.ಡಿ ಪದವೀಧರರು

ಮೈಸೂರು,ಏ.27–ಡಾ.ಹೆಚ್.ಆರ್.ಮಂಜುನಾಥ್ ಅವರ ಮಾರ್ಗದರ್ಶನದಲ್ಲಿ ತಬಸ್ಸುಮ್ ಅವರು ಭೂಗೋಳಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾ ಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ



ಮಂಡ್ಯದಲ್ಲಿ ಶೇ.81.67 ದಾಖಲೆಯ ಮತದಾನ

ಮತದಾನ ನಡೆದ ರಾಜ್ಯದ 14 ಕ್ಷೇತ್ರಗಳ ಪೈಕಿ ಮಂಡ್ಯಗೆ ಮೊದಲ ಸ್ಥಾನ

87.20ರಷ್ಟು ಮತದಾನವಾದ ಮೇಲುಕೋಟೆ ಮಂಡ್ಯ ಜಿಲ್ಲೆಗೆ ಪ್ರಥಮ



ಮಂಡ್ಯ ಜಿಲ್ಲೆಯಲ್ಲಿ ಉತ್ಸಾಹದಿಂದ ಮತದಾನ ಮಾಡಿದ ದೃಶ್ಯ.

ಮಂಡ್ಯ,ಏ.27–ಶುಕ್ರವಾರ ನಡೆದ ರಾಜ್ಯದ ಮೊದಲ ಹಂತದ 14 ಕ್ಷೇತ್ರಗಳ ಲೋಕಸಭಾ ಚುನಾವಣೆಯ ಮತದಾನದ ಅಂತಿಮ ಪಟ್ಟಿ ಶನಿವಾರ ಬಿಡುಗಡೆಯಾಗಿದ್ದು, ಮಂಡ್ಯ ಲೋಕಸಭಾ ಕ್ಷೇತ್ರದಲ್ಲಿ ಶೇ.81.67ರಷ್ಟು ಮತದಾನವಾಗಿದೆ. ಈ ಮೂಲಕ ಮಂಡ್ಯ ಕ್ಷೇತ್ರ ಮತದಾನದ ಶೇಖಡವಾರಿನಲ್ಲಿ ಮೊದಲ ಸ್ಥಾನ ಪಡೆದಿದ್ದು, ಕ್ಷೇತ್ರದ ಅತಿ ಹೆಚ್ಚು ಮತದಾರರು ಮತದಾನದಲ್ಲಿ ಪಾಲ್ಗೊಂಡು ರಾಜ್ಯಕ್ಕೆ ಮಾದರಿಯಾಗಿದ್ದಾರೆ.

ಶುಕ್ರವಾರ ಬೆಳಿಗ್ಗೆ ಏಳು ಗಂಟೆಯಿಂದ ಸಂಜೆ 6ಗಂಟೆಯವರೆಗೆ ಮತದಾನ ನಡೆದಿತ್ತು ಈ ಪೈಕಿ ಮಂಡ್ಯ ಕ್ಷೇತ್ರದಲ್ಲಿ ಬೆಳಗ್ಗೆಯಿಂದ ಚುರುಕಿನಿಂದ ನಡೆದ ಮತದಾನ ಮಧ್ಯಾಹ್ನ ಬಿಸಿಲಿನ ತಾಪದಿಂದ ಕೊಂಚ ಕಳೆಗುಂದಿತ್ತು ಸಂಜೆ ವೇಳೆಗೆ ಮತ್ತೆ ಚುರುಕುಗೊಂಡ ಮತದಾನ ಅಂತಿಮವಾಗಿ ಶೇ.81.67ರಷ್ಟು ನಡೆಯಿತು

ಮಂಡ್ಯ ಲೋಕಸಭಾ ಕ್ಷೇತ್ರದ ಪೈಕಿ ಮೇಲುಕೋಟೆ ವಿಧಾನಸಭಾ ಕ್ಷೇತ್ರ ಜಿಲ್ಲೆಗೆ ಪ್ರಥಮ ಸ್ಥಾನ ಪಡೆದಿದ್ದು, ಮೇಲುಕೋಟೆಯಲ್ಲಿ ಶೇ.87.20 ರಷ್ಟು ಮತದಾನವಾಗಿದೆ. ನಾಗಮಂಗಲ ಕ್ಷೇತ್ರ ಎರಡನೇ ಸ್ಥಾನ ಪಡೆದಿದ್ದು, ಇಲ್ಲಿ ಶೇ.84.73ರಷ್ಟು ಮತದಾನವಾಗಿದೆ ಶ್ರೀರಂಗಪಟ್ಟಣ ಮೂರನೇ ಸ್ಥಾನ ಪಡೆದಿದ್ದು, ಇಲ್ಲಿ ಶೇ.84.48ರಷ್ಟು ಮತದಾನವಾದರೆ, ಶೇ.82.99ರಷ್ಟು ಮತದಾನವಾಗುವ ಮೂಲಕ ಮದ್ದೂರು ಕ್ಷೇತ್ರ ನಾಲ್ಕನೇ ಸ್ಥಾನ ಪಡೆದಿದೆ.

ಕೆ.ಆರ್.ಪೇಟೆ ಕ್ಷೇತ್ರದಲ್ಲಿ ಶೇ.80.63ರಷ್ಟು ಮತದಾನವಾಗಿ ಐದನೇ ಸ್ಥಾನ ಪಡೆದರೆ, ಶೇ.80.50ರಷ್ಟು ಮತದಾನವಾದ ಕೆ.ಆರ್. ನಗರ ಆರನೇ ಸ್ಥಾನದಲ್ಲಿದೆ. ಇನ್ನು ಮೀಸಲು ಕ್ಷೇತ್ರ ಮಳವಳ್ಳಿಯಲ್ಲಿ ಶೇ.77.23ರಷ್ಟು ಮತದಾನವಾಗಿ ಏಳನೇ ಸ್ಥಾನದಲ್ಲಿದ್ದರೆ, ಕೇಂದ್ರ ಸ್ಥಾನ ಮಂಡ್ಯದಲ್ಲಿ ಶೇ.77ರಷ್ಟು ಮತದಾನವಾಗಿದೆ


ಕಳೆದ ಲೋಕಸಭಾ ಚುನಾವಣೆಯಲ್ಲಿ ಶೇ.80.41 ರಷ್ಟು ಮತದಾನವಾಗಿತ್ತು. ಈ ಬಾರಿ 1.26 ರಷ್ಟು ಹೆಚ್ಚಿನ ಮತದಾನವಾಗಿದ್ದು, ಕ್ಷೇತ್ರ ವ್ಯಾಪ್ತಿಯ 17,79,243 ಮತದಾರರ ಪೈಕಿ 14,53,067 ಮತದಾರರು ಹಕ್ಕು ಚಲಾಯಿಸಿದ್ದು, ಈ ಪೈಕಿ 7,20,520 ಪುರುಷರು, 7,32,503 ಮಹಿಳೆಯರಾಗಿದ್ದು, 44 ಮಂದಿ ಇತರರಾಗಿದ್ದಾರೆ.

ಮಳವಳ್ಳಿಯಲ್ಲಿ 1,95,889 ಮತದಾರರು ಹಕ್ಕು ಚಲಾಯಿಸಿದ್ದು, ಈ ಪೈಕಿ 98,146 ಪುರುಷರು, 97,741 ಮಹಿಳೆಯರಾಗಿದ್ದು, ಮದ್ದೂರಿನಲ್ಲಿ 1,79,038 ಮತದಾರರು ಮತದಾನ ಮಾಡಿದ್ದು, ಈ ಪೈಕಿ 87,331 ಪುರುಷರು, 91,702 ಮಹಿಳೆಯರಾಗಿದ್ದಾರೆ. ಮೇಲುಕೋಟೆ ಕ್ಷೇತ್ರದಲ್ಲಿ 1,77,368 ಮತದಾರರು ಮತ ಚಲಾಯಿಸಿದ್ದರೆ, ಇವರಲ್ಲಿ 88,175 ಪುರುಷರು, 89,189 ಮಹಿಳೆಯರಾಗಿದ್ದಾರೆ.

ಮಂಡ್ಯ ಕ್ಷೇತ್ರದಲ್ಲಿ 1,76,841 ಮತದಾರರು ಮತದಾನ ಮಾಡಿದ್ದು, ಈ ಪೈಕಿ 86,970 ಪುರುಷರು, 89,859 ಮಹಿಳೆಯರಾಗಿದ್ದಾರೆ. ಶ್ರೀರಂಗಪಟ್ಟಣ ಕ್ಷೇತ್ರದಲ್ಲಿ 1,83,851 ಮತದಾರರು ಮತ ಹಕ್ಕು ಚಲಾಯಿಸಿದ್ದು, ಇವರಲ್ಲಿ 90,507 ಪುರುಷರು, 93,336 ಮಹಿಳೆಯರಾಗಿದ್ದಾರೆ. ನಾಗಮಂಗಲ ಕ್ಷೇತ್ರದಲ್ಲಿ 1,83,480 ಮತದಾರರು ಮತದಾನ ಮಾಡಿದ್ದು, ಈ ಪೈಕಿ 92,195 ಪುರುಷರು, 91,281 ಮಹಿಳೆಯರಾಗಿದ್ದಾರೆ. ಕೆ.ಆರ್.ಪೇಟೆ ಕ್ಷೇತ್ರದಲ್ಲಿ 1,80,477 ಮತದಾರರು ಮತ ಹಕ್ಕು ಚಲಾಯಿಸಿದ್ದರೆ, ಇವರಲ್ಲಿ 89,362 ಪುರುಷರು, 91,112 ಮಹಿಳೆಯರಾಗಿದ್ದಾರೆ. ಕೆಆರ್.ನಗರ ಕ್ಷೇತ್ರದಲ್ಲಿ 1,76,123 ಮತದಾರರು ಮತದಾನ ಮಾಡಿದ್ದರೆ, ಇವರಲ್ಲಿ 87,834 ಪುರುಷರು, 88,283 ಮಹಿಳೆಯರಾಗಿದ್ದಾರೆ.

ಎಂದಿನಂತೆ ಈ ಬಾರಿಯೂ ಬೆಂಗಳೂರು ನಗರದ ಮೂರು ಕ್ಷೇತ್ರಗಳಲ್ಲಿ ಅತಿ ಕಡಿಮೆ ಮತದಾನವಾಗಿದೆ. ಮಂಡ್ಯ ಲೋಕಸಭಾ ಕ್ಷೇತ್ರ ಇಡೀ ರಾಜ್ಯದ 14 ಕ್ಷೇತ್ರಗಳ ಪೈಕಿ ಮತದಾನ ನಡೆದ ಶೇಖಡವಾರು ಪಟ್ಟಿಯಲ್ಲಿ ಮೊದಲ ಸ್ಥಾನದಲ್ಲಿದ್ದರೆ ಬೆಂಗಳೂರು ಸೆಂಟ್ರಲ್ ಕ್ಷೇತ್ರದಲ್ಲಿ ಅತಿ ಕಡಿಮೆ ಮತದಾನ ನಡೆದಿದ್ದು, ಶೇ.52.81ರಷ್ಟು ಮತದಾನವಾಗಿದೆ

ರಿಲ್ಯಾಕ್ಸ್ ಮೂಡ್‌ನಲ್ಲಿ ಹೆಚ್ಡಿಕೆ, ಸ್ಟಾರ್‌ಚಂದ್ರು..!



ಕುಮಾರಸ್ವಾಮಿ



ಸ್ಟಾರ್‌ಚಂದ್ರು

ಮಂಡ್ಯ: ಕಳೆದ 15 ದಿನಗಳಿಂದ ನಿರಂತರ ಚುನಾವಣಾ ಪ್ರಚಾರದಿಂದ ಬಸವಳಿದಿದ್ದ ಜೆಡಿಎಸ್ ಅಭ್ಯರ್ಥಿ ಹೆಚ್.ಡಿ.ಕುಮಾರಸ್ವಾಮಿ ಹಾಗೂ ಕಾಂಗ್ರೆಸ್ ಅಭ್ಯರ್ಥಿ ಸ್ಟಾರ್ ಚಂದ್ರು ರಿಲ್ಯಾಕ್ಸ್ ಮೂಡ್‌ಗೆ ಜಾರಿದ್ದಾರೆ.

ಕಳೆದ ಒಂದು ತಿಂಗಳಿನಿಂದ ಚುನಾವಣಾ ಪ್ರಚಾರದಲ್ಲಿ ತೊಡಗಿದ್ದ ಕಾಂಗ್ರೆಸ್‌ನ ಸ್ಟಾರ್ ಚಂದ್ರು ಕಳೆದ 15ದಿನಗಳಿಂದ ನಿತ್ಯ ರೋಡ್ ಶೋ, ರ್‍ಯಾಲಿ, ಸಭೆ ಸಮಾರಂಭದಲ್ಲಿ ಪಾಲ್ಗೊಳ್ಳುತ್ತಿದ್ದರು. ಇವರ ಜೊತೆಗೆ ಸ್ಥಳೀಯ ಮುಖಂಡರು, ಶಾಸಕರು ಭಾಗವಹಿಸುತ್ತಿದ್ದರೆ, ರಾಹುಲ್‌ಗಾಂಧಿ, ಸಿದ್ದರಾಮಯ್ಯ, ಡಿಕೆಶಿವಕುಮಾರ್, ನಟ ದರ್ಶನ್ ಸಹ ಪ್ರಚಾರದಲ್ಲಿ ಅಬ್ಬರಿಸಿದ್ದರು. ಬಿಸಿಲಿನ ಬೇಗೆಯಿಂದ ಸ್ಟಾರ್‌ಚಂದ್ರು ಬಸವಳಿದಿದ್ದು, ನಿನ್ನೆ ಮತದಾನದ ದಿನ ಕ್ಷೇತ್ರದ ಕೆಲವೆಡೆ ಕಾಣಿಸಿಕೊಂಡ ಚಂದ್ರು ಶನಿವಾರ ಬೆಂಗಳೂರಿನ ತಮ್ಮ ನಿವಾಸದಲ್ಲಿ ವಿಶ್ರಾಂತಿಗೆ ಜಾರಿದ್ದಾರೆ.

ಅತ್ತ ಹೆಚ್.ಡಿ.ಕುಮಾರಸ್ವಾಮಿ ಸಹ ಬಿಡದಿ ಬಳಿಯ ಕೇತಗಾನಹಳ್ಳಿಯ ತಮ್ಮ ನಿವಾಸದಲ್ಲಿ ವಿಶ್ರಾಂತಿಗೆ ಜಾರಿದ್ದು, ಕಳೆದ 15 ದಿನಗಳಿಂದ ಹೆಚ್ಡಿಕೆ ಬಸವಳಿದಿದ್ದರು. ಚೆನ್ನೈನಲ್ಲಿ ಹೃದಯ ಶಸ್ತ್ರ ಚಿಕಿತ್ಸೆಗೆ ಒಳಗಾಗಿದ್ದ ಹೆಚ್ಡಿಕೆ, ಆಸ್ಪತ್ರೆಯಿಂದ ಬಂದ ತರುವಾಯ ಮಂಡ್ಯಗೆ ಆಗಮಿಸಿ, ನಾಮಪತ್ರ ಸಲ್ಲಿಸಿದ್ದರು. ಮಂಡ್ಯದ ಎಂಟು ವಿಧಾನಸಭಾ ಕ್ಷೇತ್ರದಲ್ಲಿ ಚುನಾವಣಾ ಪ್ರಚಾರ ಸಭೆ, ರ್‍ಯಾಲಿಯಲ್ಲಿ ಪಾಲ್ಗೊಂಡಿದ್ದ ಹೆಚ್ಡಿಕೆ ತಮ್ಮ ಸ್ವ ಕ್ಷೇತ್ರ ಮಾತ್ರವಲ್ಲದೇ ಮೈಸೂರು, ಚಾಮರಾಜನಗರ, ಹಾಸನ, ಬೆಂಗಳೂರು ಗ್ರಾಮಾಂತರ, ಬೆಂಗಳೂರಿನ ಮೂರು ಕ್ಷೇತ್ರಗಳು, ತುಮಕೂರು, ಚಿಕ್ಕಬಳ್ಳಾಪುರ, ಚಿಕ್ಕಮಗಳೂರು, ಶಿವಮೊಗ್ಗದಲ್ಲಿ ಚುನಾವಣಾ ರ್‍ಯಾಲಿ ನಡೆಸಿದ್ದರು.

ಮಂಡ್ಯದಲ್ಲಿ ಹೆಚ್ಡಿಕೆ ಪರ ಗೋವಾ ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಸೇರಿದಂತೆ ಹೆಚ್.ಡಿ.ದೇವೇಗೌಡ, ಬಿ.ಎಸ್.ಯಡಿಯೂರಪ್ಪ, ಬಿ.ವೈ.ವಿಜಯೇಂದ್ರ, ಸಿ.ಟಿ.ರವಿ, ಆರ್.ಅಶೋಕ್ ಸೇರಿದಂತೆ ಅನೇಕ ನಾಯಕರು ಹೆಚ್ಡಿಕೆ ಜೊತೆಗೆ ಪ್ರಚಾರದಲ್ಲಿ ತೊಡಗಿದ್ದರು. ಹೃದಯ ಶಸ್ತ್ರ ಚಿಕಿತ್ಸೆ ನಂತರ ವಿಶ್ರಾಂತಿ ಪಡೆಯದ ಹೆಚ್ಡಿಕೆ, ಸದ್ಯ ಎರಡ್ಮೂರು ದಿನಗಳ ಕಾಲ ವಿಶ್ರಾಂತಿ ಪಡೆದು ಎರಡನೇ ಹಂತದಲ್ಲಿ ಚುನಾವಣೆ ನಡೆಯುವ ಉತ್ತರ ಕರ್ನಾಟಕದ ಉಳಿದ 14 ಕ್ಷೇತ್ರಗಳ ಪೈಕಿ ಹಲವೆಡೆಗೆ ಪ್ರಚಾರಕ್ಕೆ ಹೋಗಲಿದ್ದಾರೆ.

ಸಾಲ ಬಾಧೆ: ರೈತ ಆತ್ಮಹತ್ಯೆ

ಕೆ.ಆರ್.ಪೇಟೆ ಬಳಿ ದುರಂತ



ಕೆ.ಆರ್.ಪೇಟೆ,ಏ.27–ಸಾಲದ ಬಾಧೆ ತಾಳಲಾರದೇ ರೈತರೊಬ್ಬರು ಆತ್ಮಹತ್ಯೆಗೆ ಶರಣಾಗಿರುವ ಘಟನೆ ತಾಲೂಕಿನ ಮುರುಕನಹಳ್ಳಿ ಗ್ರಾಮದಲ್ಲಿ ಸಂಭವಿಸಿದೆ.

ಮುರುಕನಹಳ್ಳಿ ಗ್ರಾಮದ ಗೋವಿಂದಾಚಾರಿ ಮಗ ನಾಗರಾಜಾಚಾರಿ(60) ಆತ್ಮಹತ್ಯೆಗೆ ಶರಣಾದ ರೈತ. ನಾಗರಾಜಚಾರಿ ಶುಕ್ರವಾರ ಬೆಳಿಗ್ಗೆ ಮುರುಕನಹಳ್ಳಿ ಗ್ರಾಮದಲ್ಲಿ ಮತದಾನ ಮಾಡಿದ ನಂತರ ಪಾಂಡವಪುರ ತಾಲೂಕು ಚಿನಕುರಳಿ ಹೋಬಳಿಯ ಬೇಬಿ ಗ್ರಾಮದ ಬೆಟ್ಟದ ತಪ್ಪಲಿನ ನಿರ್ಜನ ಪ್ರದೇಶದಲ್ಲಿ ಮರಕ್ಕೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡು ಸಾವನಪ್ಪಿದ್ದಾರೆ.

ಮೃತ ನಾಗರಾಜಾಚಾರಿ ಅವರು ಮುರುಕನಹಳ್ಳಿ ಗ್ರಾಮದ ಸರ್ವೆ ನಂ.230ರಲ್ಲಿದ್ದ ಸುಮಾರು ಒಂದು ಎಕರೆ ಜಮೀನಿನಲ್ಲಿ ಕೊಳವೆ ಬಾವಿ ಕೊರೆಸಿ ತರಕಾರಿ ಬೆಳೆಗಳನ್ನು ಬೆಳೆದು ಜೀವನ ನಡೆಸುತ್ತಿದ್ದರು. ಇದಕ್ಕಾಗಿ ಮುರುಕನಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ 50 ಸಾವಿರ ಸಾಲ, ಮನೆಯ ಮೇಲೆ ಖಾಸಗಿ ಬ್ಯಾಂಕ್‌ನಲ್ಲಿ ಸಾಲ, ಜೊತೆಗೆ ಸಂಘ ಸಂಸ್ಥೆಗಳಲ್ಲಿ ಸೇರಿ ಸುಮಾರು ಐದಾರು ಲಕ್ಷ ರೂಪಾಯಿಗಳನ್ನು ಸಾಲ ಮಾಡಿದ್ದರು.

ಬರಗಾಲದ ಹಿನ್ನೆಲೆಯಲ್ಲಿ ಕೊಳವೆ ಬಾವಿಯಲ್ಲಿ ನೀರು ಬತ್ತಿಹೋಗಿದ್ದ ಕಾರಣ ಯಾವುದೇ ತರಕಾರಿ ಬೆಳೆ ಬೆಳೆಯಲು ಸಾಧ್ಯವಾಗಿರಲಿಲ್ಲ. ಇದರಿಂದ ಸಾಲ ತೀರಿಸುವ ಮಾರ್ಗ ಕಾಣದೇ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಮೃತ ನಾಗರಾಜಾಚಾರಿ ಅವರ ಮಗ ಮಂಜುನಾಥ್ ಅವರು ಚಿನಕುರಳಿ ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ.

ಗ್ರಾಮಸ್ಥರ ಒತ್ತಾಯ: ಆತ್ಮಹತ್ಯೆಗೆ ಶರಣಾದ ರೈತನ ಕುಟುಂಬಕ್ಕೆ ಸರ್ಕಾರವು ಸೂಕ್ತ ಪರಿಹಾರ ನೀಡಬೇಕು ಎಂದು ಮುರುಕನಹಳ್ಳಿ ಗ್ರಾಮಸ್ಥರು ಒತ್ತಾಯ ಮಾಡಿದ್ದಾರೆ.

ಕುಮಾರಸ್ವಾಮಿ ಪ್ರಚಂಡ ಬಹುಮತದಿಂದ ಗೆಲ್ಲುತ್ತಾರೆ



ಚಿನಕುರಳಿ: ಮಂಡ್ಯ ಕ್ಷೇತ್ರದಲ್ಲಿ ಒನ್ ಸೈಡ್ ಚುನಾವಣೆ ನಡೆಯುತ್ತಿದ್ದು, ನಮ್ಮ ಅಭ್ಯರ್ಥಿ ಹೆಚ್.ಡಿ. ಕುಮಾರಸ್ವಾಮಿ ಪ್ರಚಂಡ ಬಹುಮತದಿಂದ ಗೆಲ್ಲುತ್ತಾರೆ ಎಂದು ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ವಿಶ್ವಾಸ ವ್ಯಕ್ತಪಡಿಸಿದರು.

ಪಾಂಡವಪುರದ ಚಿನಕುರಳಿ ಗ್ರಾಮದಲ್ಲಿ ಮತದಾನದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕ್ಷೇತ್ರದಲ್ಲಿ ಬಿರುಸಿನಿಂದ ಮತದಾನ ನಡೆದಿದೆ. ಮತದಾರರಿಗೆ ಕೃತಜ್ಞತೆ ಸಲ್ಲಿಸುತ್ತೇನೆ. ಮಂಡ್ಯದಲ್ಲಿ ನೂರಕ್ಕೆ ನೂರರಷ್ಟು ಇದು ಒನ್ ಸೈಡ್ ಚುನಾವಣೆ ನಡೆಯುತ್ತಿದ್ದು, ಹಿಂದೆಯೂ ಮತದಾರರು ಸ್ವಾಭಿಮಾನದ ನಿರ್ಧಾರಗಳನ್ನು ಮಾಡಿದ್ದಾರೆ. ಈ ಬಾರಿಯೂ ಸ್ಪಷ್ಟ ನಿರ್ಧಾರ ಮಾಡಿದ್ದಾರೆ. ಕುಮಾರಣ್ಣ ಪ್ರಚಂಡ ಬಹುಮತದಿಂದ ಗೆಲ್ಲಿಸುವ ಆಶೀರ್ವಾದ ಮಾಡಿದ್ದಾರೆ ಎಂದರು.

ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದ ತೆಂಗಿನ ಮರಗಳು ಬೆಂಕಿಗಾಹುತಿ



ಕೆಆರ್.ಪೇಟೆ,ಏ.27–ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದ ಲಕ್ಷಾಂತರ ರೂ ಮೌಲ್ಯದ ತೆಂಗಿನ ಮರಗಳು ಬೆಂಕಿಗಾಹುತಿಯಾಗಿರುವ ಘಟನೆ ತಾಲೂಕಿನ ಚಿಲ್ಲದಹಳ್ಳಿ ಗ್ರಾಮದ ಎಲ್ಲೆಯಲ್ಲಿ ನಡೆದಿದೆ.

ಅಗ್ರಹಾರ ಬಾಚಹಳ್ಳಿ ಗ್ರಾಮ ನಿವಾಸಿ ಹಾಗೂ ಪಂಚಾಯಿತಿ ಮಾಜಿ ಸದಸ್ಯರಾದ ಎ.ಬಿ.ಕುಮಾರ್ ಅವರಿಗೆ ಸೇರಿದ ಚಿಲ್ಲದಹಳ್ಳಿ ಗ್ರಾಮದ ಎಲ್ಲೆಯಲ್ಲಿರುವ ಸುಮಾರು 1ಎಕರೆ 10ಗುಂಟೆಯಲ್ಲಿದ್ದ 15 ತೆಂಗಿನ ಮರಗಳು ಬೆಂಕಿಗೆ ಸಿಲುಕಿ ನಾಶವಾಗಿದೆ.

ಜಮೀನಿನ ಮೇಲೆ ಹಾದು ಹೋಗಿರುವ ವಿದ್ಯುತ್ ತಂತಿಗಳ ಮೇಲೆ ತೆಂಗಿನ ಗೊದಮಟ್ಟೆ ಬಿದ್ದ ಕಾರಣ ತಂತಿಗಳು ಪರಸ್ಪರ ಸ್ಪರ್ಷ ಗೊಂಡು ವಿದ್ಯುತ್ ಶಾರ್ಟ್ ಸರ್ಕ್ಯೂಟ್ ಉಂಟಾಗಿ ಈ ಬೆಂಕಿ ಅವಘಡ ಸಂಭವಿಸಿದೆ ಎಂದು ರೈತ ಎ.ಬಿ.ಕುಮಾರ್ ಮಾಹಿತಿ ನೀಡಿದ್ದಾರೆ. ವಿಷಯ ತಿಳಿದ ಕೂಡಲೇ ಆಗಮಿಸಿದ ಕೆ.ಆರ್.ಪೇಟೆ ಅಗ್ನಿಶಾಮದ ದಳದ ಅಧಿಕಾರಿಗಳು ಬೆಂಕಿಯನ್ನು ನಂದಿಸುವ ಮೂಲಕ ಹೆಚ್ಚಿನ ಅನಾಹುತವನ್ನು ತಪ್ಪಿಸಿದ್ದಾರೆ. ಘಟನೆ ಕುರಿತು ರೈತ ಎ.ಬಿ.ಕುಮಾರ್ ಕೆ.ಆರ್.ಪೇಟೆ ಟೌನ್ ಪೊಲೀಸ್ ಠಾಣೆಗೆ ಹಾಗೂ ಚೆಸ್ಕಾಂ ಅಧಿಕಾರಿಗಳಿಗೆ ದೂರು ನೀಡಿದ್ದಾರೆ.

ಸ್ಟಾರ್‌ಚಂದ್ರು ಗೆಲುವು ಖಚಿತ



ಮಳವಳ್ಳಿ: ಮಂಡ್ಯ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ವೆಂಕಟರಮಣೇಗೌಡ(ಸ್ಟಾರ್ ಚಂದ್ರು) ಅವರ ಗೆಲುವು ನಿಶ್ಚಿತ ಎಂದು ಶಾಸಕ ಪಿ.ಎಂ.ನರೇಂದ್ರಸ್ವಾಮಿ ವಿಶ್ವಾಸ ವ್ಯಕ್ತಪಡಿಸಿದರು.

ತಾಲೂಕಿನ ಪೂರಿಗಾಲಿ ಸರ್ಕಾರಿ ಪ್ರಾಥಮಿಕ ಶಾಲೆಯ 248 ಮತಗಟ್ಟೆಯಲ್ಲಿ ಕುಟುಂಬದ ಸದಸ್ಯರೊಂದಿಗೆ ಸರದಿ ಸಾಲಿನಲ್ಲಿ ನಿಂತು ಮತ ಚಲಾವಣೆ ಮಾಡಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಚುನಾವಣಾ ಪ್ರಚಾರದ ಸಂದರ್ಭದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಮುಖಂಡರ ಉತ್ಸಾಹ ಹಾಗೂ ಸಾರ್ವಜನಿಕರ ಉತ್ತಮ ಸ್ಪಂದನೆಯನ್ನು ನೋಡಿದರೇ ರಾಜ್ಯದಲ್ಲಿ 20ಕ್ಕೂ ಹೆಚ್ಚು ಸ್ಥಾನಗಳಲ್ಲಿ ಕಾಂಗ್ರೆಸ್ ಪಕ್ಷಗೆಲುವು ಸಾಧಿಸಲಿದೆ ಎಂದರು.

ಮೂರನೇ ಪುಟದಿಂದ

ಮತಯಂತ್ರಗಳಿಗೆ 'ಸ್ಟ್ರಾಂಗ್ ಸೆಕ್ಯೂರಿಟಿ'

ವೇಳೆಗೆ ಮೈಸೂರಿನ ಕೆ.ಆರ್.ಕ್ಷೇತ್ರ, ಎನ್.ಆರ್.ಕ್ಷೇತ್ರ, ಚಾಮರಾಜ ಕ್ಷೇತ್ರ, ಚಾಮುಂಡೇಶ್ವರಿ ಕ್ಷೇತ್ರ, ಹುಣಸೂರು, ಪಿರಿಯಾಪಟ್ಟಣ ಕ್ಷೇತ್ರಗಳ ಮತಯಂತ್ರಗಳನ್ನು ಸ್ಟ್ರಾಂಗ್ ರೂಮ್‌ನಲ್ಲಿ ಮತಗಟ್ಟೆಗಳ ಕ್ರಮಸಂಖ್ಯೆಗೆ ಅನುಗುಣವಾಗಿ ಜೋಡಣೆ ಮಾಡಿ, ಕೊಠಡಿಗೆ ಸೀಲ್(ಮುದ್ರೆ) ಮಾಡಲಾಗಿತ್ತು. ಬೆಳಗ್ಗೆ ಮಡಿಕೇರಿ ಕ್ಷೇತ್ರದ ಮತಯಂತ್ರಗಳು ಸ್ಟ್ರಾಂಗ್ ರೂಮ್ ಸೇರಿದವು. ಆದರೆ, ವಿರಾಜಪೇಟೆ ವಿಧಾನಸಭಾ ಕ್ಷೇತ್ರದ ಮತಯಂತ್ರಗಳ ತರುವುದು ವಿಳಂಬವಾಯಿತು. ಮಧ್ಯಾಹ್ನ 1 ಗಂಟೆ ವೇಳೆಗೆ ವಿರಾಜಪೇಟೆ ಕ್ಷೇತ್ರದ ಎಲ್ಲಾ ಮತಯಂತ್ರಗಳನ್ನು ಮೈಸೂರಿಗೆ ಬಂದು ಸ್ಟ್ರಾಂಗ್‌ರೂಮ್‌ನಲ್ಲಿರಿಸಿ, ಸೀಲ್ ಮಾಡಲಾಯಿತು.

ಭದ್ರಕೋಟೆಯಲ್ಲಿ ಅಭ್ಯರ್ಥಿಗಳ ಭವಿಷ್ಯ: ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಹಾಗೂ ಬಿಜೆಪಿ ಅಭ್ಯರ್ಥಿ ಸೇರಿದಂತೆ 18 ಅಭ್ಯರ್ಥಿಗಳು ಕಣದಲ್ಲಿದ್ದು, ಕ್ಷೇತ್ರದಲ್ಲಿ ಶೇ.70.62ರಷ್ಟು ಮತದಾನ ನಡೆದಿದೆ. ಕ್ಷೇತ್ರದಲ್ಲಿನ 2202 ಮತಗಟ್ಟೆಗಳಲ್ಲಿ ಬಳಸಿದ 4404 ಮತಯಂತ್ರ, 2202 ಕಂಟ್ರೋಲ್ ಯುನಿಟ್ ಹಾಗೂ ವಿವಿ ಪ್ಯಾಟ್‌ಗಳು ಸುರಕ್ಷಿತವಾಗಿವೆ. ಸ್ಟ್ರಾಂಗ್ ರೂಮ್ ಇರುವ ಕಾಲೇಜಿನ ಕಟ್ಟಡದ ಸುತ್ತಲೂ ಭದ್ರಕೋಟೆಯನ್ನೇ ನಿರ್ಮಿಸಲಾಗಿದೆ. ಮತಯಂತ್ರಗಳಿರುವ ಸ್ಟ್ರಾಂಗ್‌ರೂಮ್ ಬಾಗಿಲು ಸೀಲ್ ಮಾಡಲಾಗಿದ್ದು, ಸಿಆರ್‌ಪಿಎಫ್ ಯೋಧರ ತಂಡ ಪಹರೆ ಇದೆ. ಬಳಿಕ ಸ್ಟ್ರಾಂಗ್‌ರೂಮ್ ಇರುವ ಕಡೆ ಯಾರೂ ಓಡಾಡದಂತೆ ನಗರ ಹಾಗೂ ಸಶಸ್ತ್ರ ಮೀಸಲು ಪಡೆಯ ಪೊಲೀಸರು, ಎರಡನೇ ಹಂತದ ಭದ್ರತಾ ಕಾರ್ಯ ನಿರ್ವಹಿಸಲಿದ್ದಾರೆ. ಮೂರನೆ ಹಂತದ ಭದ್ರತೆಯಲ್ಲಿ ಸ್ಟ್ರಾಂಗ್‌ರೂಮ್ ಇರುವ ಕಟ್ಟಡದ ಪ್ರವೇಶ ದ್ವಾರ ಹಾಗೂ ಕಟ್ಟಡದ ಸುತ್ತಲೂ ಬಿಗಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿದೆ.

ಸಿಸಿ ಕ್ಯಾಮರಾ ಕಣ್ಗಾವಲು: ಮತಯಂತ್ರಗಳಿರುವ ಸ್ಟ್ರಾಂಗ್‌ರೂಮ್ ಮುಂಭಾಗದ ಕಾರಿಡಾರ್ ಸೇರಿದಂತೆ ಕಟ್ಟಡದ ಸುತ್ತಲೂ 150 ಕ್ಕೂ ಹೆಚ್ಚು ಸಿಸಿ ಕ್ಯಾಮರಾ ಅಳವಡಿಸಲಾಗಿದ್ದು, ದಿನದ 24 ಗಂಟೆಯೂ ಕಣ್ಗಾವಲು ಇರಿಸಲಾಗಿದೆ.

ಜಿಲ್ಲಾಧಿಕಾರಿಗಳಿಂದ ಪರಿಶೀಲನೆ: ಮಹಾರಾಣಿ ವಾಣಿಜ್ಯ ಕಾಲೇಜಿನಲ್ಲಿನ ಸ್ಟ್ರಾಂಗ್‌ರೂಮ್ ಅನ್ನು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ಪೊಲೀಸ್ ಆಯುಕ್ತ ರಮೇಶ್ ಬಾನೊತ್, ಮಡಿಕೇರಿಯ ಎಆರ್‌ಓ ನರ್ವಾಡೆ ವಿನಾಯಕ್, ಮೈಸೂರು ಡಿಸಿಪಿ ಮುತ್ತುರಾಜ್ ಇನ್ನಿತರರು ಪರಿಶೀಲಿಸಿದರು. ಅಲ್ಲದೆ, ಭದ್ರತಾ ಕರ್ತವ್ಯನಿರತ ಪ್ಯಾರಾ ಮಿಲಿಟರಿ ಪಡೆಯೊಂದಿಗೆ ಸಮಾಲೋಚಿಸಿದರು. ಬಳಿಕ ಡಿಸಿ ಡಾ.ಕೆ.ವಿ.ರಾಜೇಂದ್ರ ಮಾತನಾಡಿ, ಇವಿಎಂ, ವಿವಿ ಪ್ಯಾಟ್ ಇರುವ ಸ್ಟ್ರಾಂಗ್‌ರೂಂಗಳಿಗೆ ಸೆಂಟ್ರಲ್ ಪ್ಯಾರಾ ಮಿಲಿಟರಿ ಪಡೆಯಿಂದ ಭದ್ರತೆ ಒದಗಿಸಲಾಗಿದೆ. ಪ್ರತಿದಿನ ಮೂರು ಪಾಳಿಯಲ್ಲಿ ಭದ್ರತಾ ಸಿಬ್ಬಂದಿ ಕರ್ತವ್ಯ ನಿರ್ವಹಿಸಲಿದ್ದಾರೆ. ಒಂದು ಪಾಳಿಯಲ್ಲಿ 60 ಸಿಬ್ಬಂದಿ ಬಂದೋಬಸ್ತ್‌ಗೆ ನಿಯೋಜಿಸಲಾಗುತ್ತಿದೆ. ಎರಡನೇ ಹಂತದಲ್ಲಿ ಕರ್ನಾಟಕ ಸಶಸ್ತ್ರ ಮೀಸಲು ಪಡೆ ಪೊಲೀಸರು, ಸ್ಟ್ರಾಂಗ್ ರೂಂ ಸುತ್ತ ಸ್ಥಳೀಯ ಸಿವಿಲ್ ಪೊಲೀಸರು ಗಸ್ತು ಇದ್ದು, ಸ್ಟ್ರಾಂಗ್ ರೂಂ ಸುತ್ತ 150 ಸಿಸಿ ಕ್ಯಾಮರಾ ಅಳವಡಿಸಲಾಗಿದೆ. ಜೂ.4ರಂದು ಮತ ಎಣಿಕೆ ಮುಗಿಯುವವರೆಗೂ ಸ್ಟ್ರಾಂಗ್ ರೂಂಗೆ ಯಾರಿಗೂ ಪ್ರವೇಶ ಅವಕಾಶ ಇರುವುದಿಲ್ಲ. ಮೈಸೂರು –ಕೊಡಗು ಲೋಕಸಭಾ ಕ್ಷೇತ್ರದಲ್ಲಿ ಶಾಂತಿಯುತ ಮತದಾನವಾಗಿದೆ. ಎಲ್ಲಿಯೂ ಅಹಿತಕರ ಘಟನೆ ನಡೆದಿಲ್ಲ. ಮತದಾನದ ವೇಳೆ 65 ವಿವಿಪ್ಯಾಟ್‌ಗಳನ್ನು ಬದಲಿಸಲಾಗಿದೆ ಎಂದು ತಿಳಿಸಿದರು.

ಮುಂದಿನ ವಾರ ಸರ್ಕಾರ ನಿರ್ಧಾರ

ಹೀಗಾಗಿ ಈ ಗೊಂದಲ ಪರಿಶೀಲನೆಗೆ ಸರ್ಕಾರ ನಾಲ್ವರು ಸದಸ್ಯರ ತಜ್ಞರ ಸಮಿತಿಯನ್ನು ರಚಿಸಿತ್ತು. ಈ ವರ್ಷ 3,49637 ವಿದ್ಯಾರ್ಥಿಗಳು ಸಿಇಟಿ ಪರೀಕ್ಷೆಗೆ ನೋಂದಣಿ ಮಾಡಿಕೊಂಡಿದ್ದರು. ಕಳೆದ ವರ್ಷಕ್ಕಿಂತ ಒಂದು ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ಈ ಬಾರಿ ಸಿಇಟಿ ಪರೀಕ್ಷೆಗೆ ಅರ್ಜಿ ಸಲ್ಲಿಸಿದ್ದರು. ಇನ್ನು ಸಾಮಾನ್ಯವಾಗಿ ಪ್ರತಿ ವರ್ಷ ಪರೀಕ್ಷೆ ವೇಳೆ ಮೂರು ಸೆಟ್ ಪ್ರಶ್ನೆ ಪತ್ರಿಕೆಗಳನ್ನು ತಯಾರಿಸಲಾಗುತ್ತದೆ. ಅದೇ ರೀತಿ 2023ನೇ ಸಾಲಿನಲ್ಲಿ ತಯಾರಿಸಿದ್ದ ಯಾವುದೋ ಒಂದು ಸೆಟ್ ಪ್ರಶ್ನೆ ಪತ್ರಿಕೆಯನ್ನೇ ಈ ಬಾರಿಯ ಪರೀಕ್ಷೆಗೂ ಪ್ರಾಧಿಕಾರ ನೀಡಿತ್ತು ಎಂಬ ಅನುಮಾನ ಕೂಡ ಮೂಡಿತ್ತು. ಅಲ್ಲದೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಮತ್ತು ಪದವಿ ಪೂರ್ವ ಶಿಕ್ಷಣ ಇಲಾಖೆ ನಡುವೆ ಉಂಟಾದ ಸಂವಹನ ಕೊರತೆಯೂ ಒಂದು ಕಾರಣವಾಗಿದೆ ಎನ್ನಲಾಗಿದೆ.

ಬರ ಪರಿಹಾರ ಬಿಡುಗಡೆ

ಲೋಕಸಭಾ ಚುನಾವಣೆಗೆ ಅಧಿಸೂಚನೆ ಹೊರಬೀಳುತ್ತಿದ್ದಂತೆ ರಾಜ್ಯ ಸರ್ಕಾರ ಕೇಂದ್ರದ ವಿರುದ್ಧ ಕಾನೂನು ಸಮರಕ್ಕಿಳಿದು ಸುಪ್ರೀಂಕೋರ್ಟ್‌ನ ಮೊರೆ ಹೋಗಿತ್ತು. ಕರ್ನಾಟಕದ ಮನವಿಯ ವಿಚಾರಣೆಯನ್ನು ಸುಪ್ರೀಂಕೋರ್ಟ್ ಕೈಗೆತ್ತಿಕೊಳ್ಳುತ್ತಿದ್ದಂತೆ ಮಧ್ಯೆ ಪ್ರವೇಶಿಸಿದ ಕೇಂದ್ರ ಸರ್ಕಾರ, ಬರ ಪರಿಹಾರ ಮಂಜೂರಾತಿಗೆ ಕೇಂದ್ರ ಚುನಾವಣಾ ಆಯೋಗ ಸಮ್ಮತಿಸಿದೆ ಎಂದು ಸುಪ್ರೀಂಕೋರ್ಟ್‌ಗೆ ತಿಳಿಸಿತು. ಈ ಹಿನ್ನೆಲೆಯಲ್ಲಿ ಮುಂದಿನ ವಿಚಾರಣೆಯನ್ನು ಸುಪ್ರೀಂಕೋರ್ಟ್ ಈ ತಿಂಗಳ 29ಕ್ಕೆ ಮುಂದೂಡಿತು. ಈ ನಡುವೆ ಕೇಂದ್ರ ಸರ್ಕಾರ ಬರ ಪರಿಹಾರ ಮೊತ್ತವನ್ನು ರಾಜ್ಯಕ್ಕೆ ಈಗ ಬಿಡುಗಡೆ ಮಾಡಿದೆ.

ಶ್ರೀ ಸೂರ್ಯ ಅರ್ಕಮಹಾಗಣಪತಿ ದೇವಸ್ಥಾನದಲ್ಲಿ ಧ್ವಜಸ್ತಂಭ ಪ್ರತಿಷ್ಠಾಪನಾ ಮಹೋತ್ಸವ



ಮೈಸೂರು,ಏ.27(ಪಿಎಂ)– ಮೈಸೂರಿನ ಮಾದಹಳ್ಳಿ ಸಮೀಪದ ಕಣಿಯನಹುಂಡಿ ಗೇಟ್‌ನ ಬೋಗಾದಿ–ಗದ್ದಿಗೆ ಮುಖ್ಯ ರಸ್ತೆಯಲ್ಲಿರುವ ಅರ್ಕಧಾಮದ ಶ್ರೀ ಸೂರ್ಯ ಅರ್ಕಮಹಾಗಣಪತಿ ನೂತನ ದೇವಸ್ಥಾನದ ಎದುರು ಶುಕ್ರವಾರ ಧ್ವಜಸ್ತಂಭ ಪ್ರತಿಷ್ಠಾಪನೆ ನೆರವೇರಿಸಲಾಯಿತು.

ಧ್ವಜಸ್ತಂಭ ಪ್ರತಿಷ್ಠಾಪನಾ ಮಹೋತ್ಸವವು ಯೋಗಿ ಶ್ರೀನಿವಾಸ ಅರ್ಕ ಅವರ ಸಾನಿಧ್ಯದಲ್ಲಿ ವಿವಿಧ ಪೂಜಾ ವಿಧಿ ವಿಧಾನಗಳೊಂದಿಗೆ ಶ್ರದ್ಧಾಭಕ್ತಿಯಿಂದ ನಡೆಯಿತು. ಬೆಳಗ್ಗೆ 9.15ರಿಂದ 10.15 ರವರೆಗೆ ಧ್ವಜಸ್ತಂಭ ಸ್ಥಾಪನಾ ಕಾರ್ಯ ಜರುಗಿತು. ವಿವಿಧ ಪೂಜಾ ಕೈಂಕರ್ಯದೊಂದಿಗೆ ಧ್ವಜಸ್ತಂಭದ ಸ್ಥಾಪನೆ ಕಾರ್ಯ ನಡೆಯಿತು. ಇದಕ್ಕೂ ಮುನ್ನ ಕ್ರೇನ್ ಮೂಲಕ ಬೃಹತ್ ಶಿಲೆಯಿಂದ ನಿರ್ಮಿಸಿರುವ ಧ್ವಜಸ್ತಂಭ ನಿಲ್ಲಿಸಲಾಯಿತು.

ನಂತರ ಮಧ್ಯಾಹ್ನ 11ರಿಂದ 12ರ ವರೆಗೆ ಯಜ್ಞ ಹಾಗೂ ಪೂರ್ಣಾಹುತಿ ಹೋಮ ನಡೆಸಲಾಯಿತು. ಬಳಿಕ ಮಧ್ಯಾಹ್ನ 12ರಿಂದ 12.45ರವರೆಗೆ ದೇವಾಲಯದ ಶ್ರೀ ಸೂರ್ಯ ಅರ್ಕಮಹಾಗಣಪತಿಗೆ ಮಹಾಮಂಗಳಾರತಿ ನೆರವೇರಿಸಲಾಯಿತು. ನಂತರ ಭಕ್ತರಿಗೆ ಪ್ರಸಾದ ವಿನಿಯೋಗ ಮಾಡಲಾಯಿತು. ಧ್ವಜಸ್ತಂಭವು ಗೋಪುರ ಮತ್ತು ದೇವಾಲಯದ ಮಹಾಮಂಟಪದ ನಡುವಿನಲ್ಲಿ ಕಂಡುಬರುವ ಎತ್ತರದ ರಚನೆ. ಆಗಮ ನಿಯಮಗಳನ್ನು ಅನುಸರಿಸುವ ದೇವಾಲಯಗಳು ಸಾಮಾನ್ಯವಾಗಿ ಧ್ವಜಸ್ತಂಭವನ್ನು ಹೊಂದಿರುತ್ತವೆ. ದೇವಾಲಯದ ಉತ್ಸವಗಳಲ್ಲಿ ಧ್ವಜಸ್ತಂಭವು ಪ್ರಮುಖ ಪಾತ್ರ ವಹಿಸುತ್ತದೆ. ಧ್ವಜಸ್ತಂಭದ ಮೇಲೆ ಧ್ವಜವನ್ನು ಹಾರಿಸಲಾಗುತ್ತದೆ. ಧ್ವಜವು ಗಣೇಶನ ದೇವಾಲಯಗಳಲ್ಲಿ ಮೂಶಿಕ ವಾಹನದ ಪವಿತ್ರ ಚಿಹ್ನೆ ಒಳಗೊಂಡಿರುತ್ತದೆ ಎಂದು ದೇವಾಲಯದ ಪ್ರಕಟಣೆ ತಿಳಿಸಿದೆ.


ಈ ಪರಿಹಾರವನ್ನು ಕರ್ನಾಟಕದ ಮೇಲಿನ ಕಾಳಜಿಯಿಂದಲ್ಲ; 'ಸುಪ್ರೀಂ' ಚಾಟಿ ಬೀಸಿದ್ದರಿಂದ ನೀಡಲಾಗಿದೆ

ಪರಿಹಾರ ಬಿಡುಗಡೆಗಾಗಿ 'ಸುಪ್ರೀಂ'ಗೆ ಕೃತಜ್ಞತೆ ಸಲ್ಲಿಸಿದ ಸಿಎಂ

ಬೆಂಗಳೂರು, ಏ.27(ಕೆಎಂಶಿ)– ಕೇಂದ್ರ ಸರ್ಕಾರಕ್ಕೆ ಎಚ್ಚರಿಕೆ ನೀಡಿ ಕರ್ನಾಟಕಕ್ಕೆ ಸ್ವಲ್ಪವಾದರೂ ಬರ ಪರಿಹಾರ ಕೊಡಿಸಿದ ಸುಪ್ರೀಂಕೋರ್ಟ್‌ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಕೃತಜ್ಞತೆ ಸಲ್ಲಿಸಿದ್ದಾರೆ. ಈ ಸಂಬಂಧ ಟ್ವೀಟ್ ಮಾಡಿರುವ ಅವರು, ಎನ್‌ಡಿಆರ್‌ಎಫ್ ನಿಯಮಾವಳಿ ಪ್ರಕಾರ ರಾಜ್ಯಕ್ಕೆ 18,171 ಕೋಟಿ ರೂ. ನೀಡಬೇಕಿದ್ದರೂ ಕೇಂದ್ರ ಸರ್ಕಾರ ಕೇವಲ 3,498 ಕೋಟಿ ರೂ.ಗೆ ಅನುಮೋದನೆ ನೀಡಿ, 3,454 ಕೋಟಿ ರೂ. ಬಿಡುಗಡೆ ಮಾಡಿದೆ ಎಂದು ತಿಳಿಸಿದ್ದಾರೆ.

ಬರಪರಿಹಾರಕ್ಕಾಗಿ ಈ ಹಣ ಸಾಲದು, ಬಾಕಿ ಪರಿಹಾರಕ್ಕಾಗಿ ನಮ್ಮ ಹೋರಾಟ ಮುಂದುವರಿಯಲಿದೆ.

ಕೇಂದ್ರ ಸರ್ಕಾರ ಕರ್ನಾಟಕದ ಮೇಲೆ ಕಾಳಜಿಯಿಂದ ಈ ಬರ ಪರಿಹಾರ ನೀಡಿಲ್ಲ, ನಾವು ಸುಪ್ರೀಂಕೋರ್ಟ್ ಮೆಟ್ಟಿಲು ಹತ್ತಿ ನಮ್ಮಲ್ಲಿನ ಬರಸ್ಥಿತಿಯನ್ನು ಮನವರಿಕೆ ಮಾಡಿ ಕೊಟ್ಟಿದ್ದೆವು. ಅರ್ಜಿಯ ವಿಚಾರಣೆ ನಡೆಸಿದ ಸುಪ್ರೀಂಕೋರ್ಟ್‌ಗೆ, ರಾಜಕೀಯ ದುರುದ್ದೇಶದಿಂದ ಕೇಂದ್ರ ಕರ್ನಾಟಕಕ್ಕೆ ಅನ್ಯಾಯ ಮಾಡುತ್ತಿದೆ ಎಂದು ಮನವರಿಕೆಯಾಗಿದೆ. ನ್ಯಾಯಾಲಯ ವಿಚಾರಣೆ ವೇಳೆ ಚಾಟಿ ಬೀಸಿದ ನಂತರ ವಾರದ ಅವಧಿಯೊಳಗೆ ಬರ ಪರಿಹಾರ ನೀಡಲಾಗುವುದು ಎಂದು ಸುಪ್ರೀಂ ಕೋರ್ಟ್‌ಗೆ ಮಾತು ನೀಡಿತ್ತು. ಅದನ್ನು ಪಾಲಿಸಲಿಕ್ಕಾಗಿ ಒಲ್ಲದ ಮನಸ್ಸಿನಿಂದ ಈ ಪರಿಹಾರ ನೀಡಿದೆ ಎಂದಿದ್ದಾರೆ.



ಇದರಲ್ಲಿ ಬಿಜೆಪಿಯ ನಾಯಕರದ್ದಾಗಲಿ, ಕೇಂದ್ರ ಸರ್ಕಾರದ್ದಾಗಲಿ ಯಾವ ಪಾತ್ರವೂ ಇಲ್ಲ, ಇದು ಕೃಷಿ ಕ್ಷೇತ್ರ ಮತ್ತು ರಾಜ್ಯದ ರೈತರ ಮೇಲೆ ಸುಪ್ರೀಂಕೋರ್ಟ್ ಇಟ್ಟುಕೊಂಡಿರುವ ಕಾಳಜಿಯ ಫಲ.

ಸ್ವಲ್ಪವಾದರೂ ಪರಿಹಾರವನ್ನು ನೀಡದೆ ಇದ್ದರೆ ರೊಚ್ಚಿದ್ದಿರುವ ಕರ್ನಾಟಕದ ಜನ ಚುನಾವಣಾ ಪ್ರಚಾರಕ್ಕಾಗಿ ತಮ್ಮನ್ನು ರಾಜ್ಯಕ್ಕೆ ಕಾಲಿಡಲು ಬಿಡಲಾರರು ಎಂಬ ಭಯವೂ ಈ ಪರಿಹಾರ ಘೋಷಿಸಲು ಕಾರಣವಾಗಿದೆ. ಈ ಅಲ್ಪ ಪರಿಹಾರವನ್ನು ತಮ್ಮ ಸಾಧನೆ ಎಂದು ರಾಜ್ಯದ ಬಿಜೆಪಿ ನಾಯಕರು ಬಿಂಬಿಸಲು ಹೊರಟರೆ ರಾಜ್ಯದ ಜನತೆ ತಕ್ಕ ಉತ್ತರ ನೀಡಬೇಕೆಂದು ಮನವಿ ಮಾಡುತ್ತೇನೆ. ಬರ ಪರಿಹಾರದ ಹಿಂದಿನ ಕಾರಣಗಳೇನೇ ಇರಲಿ, ನೀಡಿರುವ ಪರಿಹಾರಕ್ಕಾಗಿ ಕೇಂದ್ರ ಸರ್ಕಾರಕ್ಕೆ ಕೃತಜ್ಞತೆ ಸಲ್ಲಿಸುತ್ತೇನೆ.

ಮುಂಬೈ ವಿರುದ್ಧ ಗೆಲುವು: ಡೆಲ್ಲಿ ಪ್ಲೇ ಆಫ್ ಜೀವಂತ



ದೆಹಲಿ, ಏ.27– ಕೊನೆವರೆಗೂ ಜಿದ್ದಾಜಿದ್ದಿನಿಂದ ಕೂಡಿದ್ದ ಪಂದ್ಯದಲ್ಲಿ ಡೆಲ್ಲಿ ಕ್ಯಾಪಿಟಲ್ಸ್, ಮುಂಬೈ ಇಂಡಿಯನ್ಸ್ ವಿರುದ್ಧ 10 ರನ್‌ಗಳ ಭರ್ಜರಿ ಜಯ ಸಾಧಿಸಿದೆ. ಈ ಗೆಲುವಿನೊಂದಿಗೆ ಡೆಲ್ಲಿ ಕ್ಯಾಪಿಟಲ್ಸ್ ತನ್ನ ಪ್ಲೇ ಆಫ್ ಕನಸನ್ನು ಜೀವಂತವಾಗಿರಿಸಿಕೊಂಡಿದೆ. ಇನ್ನೊಂದೆಡೆ ಮುಂಬೈ ಇಂಡಿಯನ್ಸ್ ತಂಡದ ಪ್ಲೇ ಆಫ್ ಕನಸು ಬಹುತೇಕ ಭಗ್ನವಾಗಿದೆ.

ಇಲ್ಲಿನ ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಡೆಲ್ಲಿ ಕ್ಯಾಪಿಟಲ್ಸ್ 20 ಓವರ್‌ಗಳಲ್ಲಿ ಕೇವಲ 4 ವಿಕೆಟ್ ನಷ್ಟಕ್ಕೆ 257 ರನ್ ಬಾರಿಸಿತ್ತು. 258 ರನ್‌ಗಳ ಬೃಹತ್ ಮೊತ್ತದ ಗುರಿ ಬೆನ್ನತ್ತಿದ ಮುಂಬೈ ಇಂಡಿಯನ್ಸ್ 20 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ 247 ರನ್ ಗಳಿಸಿ 10 ರನ್‌ಗಳ ವಿರೋಚಿತ ಸೋಲಿಗೆ ತುತ್ತಾಗಿದೆ.

ಕೊನೆ ಓವರ್‌ನಲ್ಲಿ ಮುಂಬೈ ಗೆಲುವಿಗೆ 25 ರನ್ ಅಗತ್ಯವಿತ್ತು. ಮುಕೇಶ್ ಕುಮಾರ್ ಬೌಲಿಂಗ್ ವೇಳೆ ತಿಲಕ್ ವರ್ಮಾ ಸ್ಟ್ರೈಕ್‌ನಲ್ಲಿದ್ದರು. ಮೊದಲ ಎಸೆತದಲ್ಲಿ 2 ರನ್ ಕದಿಯಲು ಯತ್ನಿಸಿ ತಿಲಕ್ ರನೌಟ್‌ಗೆ ತುತ್ತಾದರು. ಇದರೊಂದಿಗೆ ಮುಂಬೈ ತಂಡದ ಗೆಲುವಿನ ಕನಸೂ ಭಗ್ನವಾಯಿತು. ಕೊನೆಯವರೆಗೂ ಹೋರಾಡಿದ ಮುಂಬೈ 247 ರನ್ ಗಳಿಸಿತು.

ಬೃಹತ್ ಚೇಸಿಂಗ್ ಆರಂಭಿಸಿದ ಮುಂಬೈ ಆರಂಭದಲ್ಲೇ ಪ್ರಮುಖ ವಿಕೆಟ್ ಕಳೆದುಕೊಂಡಿತು. ಮಾಜಿ ನಾಯಕ ರೋಹಿತ್ ಶರ್ಮಾ 8 ರನ್‌ಗಳಿಗೆ ವಿಕೆಟ್ ಕೈಚೆಲ್ಲಿದರು. ಈ ಬೆನ್ನಲ್ಲೇ 20 ರನ್ ಗಳಿಸಿ ಇಶಾನ್ ಕಿಶನ್ ಸಹ ಪೆವಿಲಿಯನ್‌ಗೆ ಮರಳಿದರು. ನಂತರ ಸ್ಫೋಟಕ ಬ್ಯಾಟಿಂಗ್ ಆರಂಭಿಸಿದ್ದ ಸೂರ್ಯಕುಮಾರ್ ಯಾದವ್ 13 ಎಸೆತಗಳಲ್ಲಿ 26 ರನ್ ಬಾರಿಸಿ ಔಟಾದರು.

ಉಳಿದಂತೆ ಮುಂಬೈ ಪರ ತಿಲಕ್ ವರ್ಮಾ 32 ಎಸೆತಗಳಲ್ಲಿ ತಲಾ 4 ಸಿಕ್ಸರ್, ಬೌಂಡರಿ ಒಳಗೊಂಡ 63 ರನ್, ಹಾರ್ದಿಕ್ ಪಾಂಡ್ಯ 24 ಎಸೆತಗಳಲ್ಲಿ 3 ಸಿಕ್ಸರ್, 4 ಬೌಂಡರಿ ಒಳಗೊಂಡ 46, ಟಿಮ್ ಡೇವಿಡ್ 37 ರನ್ ಗಳಿಸಿದ್ದು ಬಿಟ್ಟರೆ ಉಳಿದ ಆಟಗಾರರು ಹೆಚ್ಚು ಹೊತ್ತು ಕ್ರೀಸ್‌ನಲ್ಲಿ ಉಳಿಯದ ಕಾರಣ ಮುಂಬೈ ವಿರೋಚಿತ ಸೋಲಿಗೆ ತುತ್ತಾಯಿತು. ಡೆಲ್ಲಿ ಕ್ಯಾಪಿಟಲ್ಸ್ ಪರ ಮುಕೇಶ್ ಕುಮಾರ್, ರಸಿಖ್ ಸಲಾಮ್ ತಲಾ 3, ಖಲೀಲ್ ಅಹ್ಮದ್ 2 ವಿಕೆಟ್ ಪಡೆದು ಮಿಂಚಿದರು.

ಇದಕ್ಕೂ ಮುನ್ನಾ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಡೆಲ್ಲಿ ಕ್ಯಾಪಿಟಲ್ಸ್ ಪರ ಫ್ರೇಸರ್ ಮೆಕ್‌ಗಾರ್ಕ್ ಹಾಗೂ ಅಭಿಷೇಕ್ ಪೋರೆಲ್ ಆರಂಭದಿಂದಲೇ ಸ್ಫೋಟಕ ಆಟವಾಡಿ ಮೊದಲ ವಿಕೆಟ್‌ಗೆ 114 ರನ್‌ಗಳ ಜೊತೆ ಯಾಟವಾಡುವ ಮೂಲಕ ಬುನಾದಿ ಹಾಕಿದರು. ಫ್ರೇಸರ್ ಮೆಕ್‌ಗಾರ್ಕ್ 27 ಎಸೆತಗಳಲ್ಲಿ 11 ಬೌಂಡರಿ, 6 ಸಿಕ್ಸ್ ಒಳಗೊಂಡ 84 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಅಭಿಷೇಕ್ ಪೋರೆಲ್ 36, ಶಾಯ್ ಹೋಪ್ 41, ರಿಷಭ್ ಪಂತ್ 29, ಟ್ರಿಸ್ಟನ್ ಸ್ಟಬ್ಸ್ 48, ಅಕ್ಷರ್ ಪಟೇಲ್ 11 ರನ್ ಗಳಿಸಿದರು. ಅಂತಿಮವಾಗಿ ಡೆಲ್ಲಿ 20 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 257 ರನ್ ಸಿಡಿಸಿತ್ತು. ಮುಂಬೈ ಪರ ಲ್ಯೂಕ್ ವುಡ್, ಜಸ್ಪ್ರೀತ್ ಬುಮ್ರಾ, ಪಿಯೂಷ್ ಚಾವ್ಲಾ, ಮೊಹಮ್ಮದ್ ನಬಿ ತಲಾ ಒಂದೊಂದು ವಿಕೆಟ್ ಪಡೆದು ಮಿಂಚಿದರು.

ಮುಂದುವರೆದ ದಿಗ್ವಿಜಯ: ಪ್ಲೇ ಆಫ್‌ಗೆ ರಾಜಸ್ಥಾನ್



ಲಕ್ನೋ, ಏ.27– ಪ್ರಸಕ್ತ ಸಾಲಿನ ಐಪಿಎಲ್‌ನಲ್ಲಿ ರಾಜಸ್ಥಾನ್ ರಾಯಲ್ಸ್ ತಂಡದ ದಿಗ್ವಿಜಯ ಮುಂದುವರೆದಿದ್ದು, ಆ ಮೂಲಕ ಮೊದಲ ತಂಡವಾಗಿ ಪ್ಲೇ ಆಫ್ ಪ್ರವೇಶಿಸಿದೆ.

ಇಲ್ಲಿನ ಭಾರತ್‌ರತ್ನ ಶ್ರೀಅಟಲ್ ಬಿಹಾರಿ ವಾಜಪೇಯಿ ಏಕನಾ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಲಕ್ನೋ 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 196 ರನ್ ಗಳಿಸಿತು. ಲಕ್ನೋ ನೀಡಿದ 197 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ರಾಜಸ್ಥಾನ್ ರಾಯಲ್ಸ್ 19 ಓವರ್‌ಗಳಲ್ಲಿ 3 ವಿಕೆಟ್ ನಷ್ಟಕ್ಕೆ 199 ರನ್ ಗಳಿಸಿ ಜಯದ ನಗೆ ಬೀರಿತು.

ಲಕ್ನೋ ಪರ ನಾಯಕ ಕೆ.ಎಲ್.ರಾಹುಲ್ 76, ದೀಪಕ್ ಹೂಡಾ 50, ನಿಕೋಲಸ್ ಪೂರನ್ 11, ಆಯುಷ್ ಬಡೋನಿ 18, ಕೃನಾಲ್ ಪಾಂಡ್ಯ 15 ರನ್ ಗಳಿಸಿದರು. ರಾಜಸ್ಥಾನ್ ಪರ ಸಂದೀಪ್ ಶರ್ಮಾ 2, ಟ್ರೆಂಟ್ ಬೋಲ್ಟ್, ಆವೇಶ್ ಖಾನ್ ಹಾಗೂ ಅಶ್ವಿನ್ ತಲಾ ಒಂದೊಂದು ವಿಕೆಟ್ ಪಡೆದರು.

ರಾಜಸ್ಥಾನ್ ಪರ ಯಶಸ್ವಿ ಜೈಸ್ವಾಲ್ 24, ಜೋಸ್ ಬಟ್ಲರ್ 34, ನಾಯಕ ಸಂಜು ಸ್ಯಾಮ್ಸನ್ 71, ರಿಯಾನ್ ಪರಾಗ್ 14, ಧ್ರುವ್ ಜುರೇಲ್ 52 ರನ್ ಗಳಿಸಿದರು. ಲಕ್ನೋ ಪರ ಯಶ್ ಠಾಕೂರ್, ಮಾರ್ಕಸ್ ಸ್ಟೋಯಿನ್ಸ್ ಹಾಗೂ ಅಮಿತ್ ಮಿಶ್ರಾ ತಲಾ ಒಂದೊಂದು ವಿಕೆಟ್ ಕಬಳಿಸಿದರು. ಸಂಜು ಸ್ಯಾಮ್ಸನ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಮೈಸೂರು–ಕೊಡಗು ಕ್ಷೇತ್ರದಲ್ಲಿ ಶೇ.30ರಷ್ಟು ಮತದಾರರು ಮತದಾನದಿಂದ ದೂರ!

ಮತದಾನ ಹೆಚ್ಚಳಕ್ಕೆ ಪರಿಣಾಮಕಾರಿ ಜಾಗೃತಿ, ಅಚ್ಚುಕಟ್ಟಾದ ವ್ಯವಸ್ಥೆ ಮಾಡಿದ್ದರೂ ಮನಸ್ಸು ಮಾಡದ ಮಹಾಜನ!!

ಮೈಸೂರು, ಏ.27(ಬಿಎಲ್‌ಯು)– ಮೈಸೂರು–ಕೊಡಗು ಲೋಕಸಭಾ ಕ್ಷೇತ್ರಕ್ಕೆ ನಿನ್ನೆ ನಡೆದ ಚುನಾವಣೆಯಲ್ಲಿ ಶೇಕಡ 70.62 ರಷ್ಟು ಮತದಾನವಾಗಿದೆ. ಉಳಿದ ಶೇಕಡ 30 ರಷ್ಟು ಮತದಾರರು ಮತದಾನದಿಂದ ದೂರ ಉಳಿದು, ಎಂದಿನಂತೆ ಬೇಜವಾಬ್ದಾರಿ ಮೆರೆದಿದ್ದಾರೆ.

ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದಲ್ಲಿ ಒಟ್ಟು 20,92,222 ಮತದಾರರಿದ್ದು, ಇವರಲ್ಲಿ 14,77,571 ಮತದಾರರು ತಮ್ಮ ಹಕ್ಕು ಚಲಾಯಿಸಿದ್ದಾರೆ. ಇವರಲ್ಲಿ 7,32,605 ಪುರುಷರು (ಶೇಕಡ 71.38). 7,44,927 ಮಹಿಳಾ ಮತದಾರರು ಮತದಾನ (ಶೇಕಡ 69.90) ಮಾಡಿದ್ದು, ಇತರೆ 39 ಮಂದಿ ಮತದಾನದ ಹಕ್ಕು ಚಲಾಯಿಸಿದ್ದು, ಇದು ಶೇಕಡ 21.20ರಷ್ಟಿದೆ.

ಈ ಮೂಲಕ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದಲ್ಲಿ ಶೇ. 70.62 ರಷ್ಟು ಮತದಾನವಾಗಿದೆ. ಆದರೆ ಈ ಬಾರಿ ಕನಿಷ್ಟ ಶೇಕಡ 85ರಷ್ಟು ಮತದಾನದ ಗುರಿ ಹೊಂದಿ, ಕ್ಷೇತ್ರದ ಚುನಾವಣಾ ಘಟಕ ವಿಶಿಷ್ಟ ಕಾರ್ಯಕ್ರಮ ರೂಪಿಸಿತ್ತು.

ಮತದಾನದ ಬಗ್ಗೆ ಅರಿವು ಮೂಡಿಸಲು ನಾನಾ ಕಸರತ್ತು ನಡೆಸಲಾಗಿತ್ತು. ಹಲವು ಕ್ಷೇತ್ರಗಳಲ್ಲಿ ಸಾಧನೆಗೈಯ್ದವರನ್ನು ಸ್ವೀಪ್ ರಾಯಭಾರಿಗಳಾಗಿ ಆಯ್ಕೆ ಮಾಡಿ ಅವರ ಮೂಲಕ ಮತದಾನದ ಬಗ್ಗೆ ಜಾಗೃತಿ ಮೂಡಿಸಲಾಗಿತ್ತು.

ನಗರ ಹಾಗೂ ತಾಲೂಕು ಕೇಂದ್ರಗಳ ಜನಸಂದಣಿ ಇರುವ ಸ್ಥಳಗಳಲ್ಲಿ ಮತದಾನದ ಬಗ್ಗೆ ಅರಿವು ಮೂಡಿಸುವ ಬೃಹತ್ ಬಲೂನ್ ಹಾರಿಸಲಾಗಿತ್ತು.

ಯುಗಾದಿ ಹಬ್ಬದ ಹಿಂದಿನ ದಿನ ಚುನಾವಣಾ ಹಬ್ಬ ಆಚರಿಸಲಾಗಿತ್ತು. ಬೀದಿ ನಾಟಕಗಳ ಮೂಲಕ ಮತದಾನದ ಮಹತ್ವ ಸಾರಲಾಗಿತ್ತು. ರೇಡಿಯೋ, ದೂರದರ್ಶನ ಸೇರಿದಂತೆ ಹಲವು ಮಾಧ್ಯಮಗಳ ಮೂಲಕ ಮತದಾನ ಮಾಡುವಂತೆ ಒತ್ತಿ ಹೇಳಲಾಗುತ್ತಿತ್ತು.

ಮತದಾನ ನಮ್ಮ ಹಕ್ಕು ಮಾತ್ರವಲ್ಲದೆ, ಜವಾಬ್ದಾರಿ ಕೂಡ. ಹೀಗೆ ಪ್ರಜಾಪ್ರಭುತ್ವದಲ್ಲಿ ಮತದಾನದ ಮಹತ್ವವನ್ನು ಮನವರಿಕೆ ಮಾಡಿಕೊಡಲಾಗಿತ್ತು.

ಮತದಾರ ಮತಗಟ್ಟೆಗೆ ಬಂದ ಸಂದರ್ಭದಲ್ಲಿ ಯಾವುದೇ ಕಾರಣಕ್ಕೂ ಮತದಾನ ಮಾಡದೆ ಹಿಂತಿರುಗದಂತೆ ಹಲವು ಕ್ರಮ ಕೈಗೊಳ್ಳಲಾಗಿತ್ತು. ಕ್ಲಸ್ಟರ್ ಮತಗಟ್ಟೆಗಳಲ್ಲಿ 3ಕ್ಕಿಂತ ಹೆಚ್ಚು ಬೂತ್‌ಗಳಿದ್ದಾಗ ಮತದಾರರಿಗೆ ಗೊಂದಲ ಆಗದಂತೆ ಸಲಹೆ ಹಾಗೂ ಮಾರ್ಗದರ್ಶನ ನೀಡಲು ಮತದಾನ ಸಹಾಯ ಕೇಂದ್ರ ತೆರೆಯಲಾಗಿತ್ತು.

ಇಷ್ಟೆಲ್ಲಾ ಅಚ್ಚುಕಟ್ಟಾದ ವ್ಯವಸ್ಥೆ ಮಾಡಿದ್ದರೂ ನಿರೀಕ್ಷಿತ ಪ್ರಮಾಣದಲ್ಲಿ ಮತದಾನ ಆಗಲಿಲ್ಲ. ಒಟ್ಟಾರೆ ಮತದಾರರಲ್ಲಿ ಶೇಕಡ 30ರಷ್ಟು ಮತದಾರರು ಮತದಾನದಿಂದ ದೂರ ಉಳಿದಿದ್ದರು. ಸರ್ಕಾರಿ ಕಚೇರಿಗಳಿಗೆ ರಜೆ ಘೋಷಣೆ ಮಾಡಲಾಗಿತ್ತು. ಖಾಸಗಿ ಸಂಸ್ಥೆಗಳು ವೇತನ ಸಹಿತ ರಜೆಯೊಂದಿಗೆ ಮತದಾನಕ್ಕೆ ಅವಕಾಶ ಕಲ್ಪಿಸಿದ್ದವು. ಆದರೂ ಕೂಡ ಶೇಕಡ 30ರಷ್ಟು ಜನ ಮತದಾನ ಮಾಡಲೇ ಇಲ್ಲ. ಏನೇ ಕೆಲಸವಿದ್ದರೂ ಸೂಕ್ತ ಸಮಯದಲ್ಲಿ ಬಂದು ಮತದಾನ ಮಾಡಬಹುದಿತ್ತು. ಆದರೆ ಮತದಾನ ಮಾಡದೆ ಬಹಳಷ್ಟು ಜನರು ಬೇಜವಾಬ್ದಾರಿ ಮೆರೆದಿದ್ದಾರೆ.

ತಮ್ಮ ದೇಶ, ಮತದಾನ ಹಾಗೂ ಪ್ರಜಾಪ್ರಭುತ್ವ ವ್ಯವಸ್ಥೆ ಬಗ್ಗೆ ಅಭಿಮಾನವಿರುವ ಕೆಲವರು ವಿದೇಶದಿಂದ ಬಂದು ಮತದಾನ ಮಾಡಿ ಮಾದರಿಯಾಗಿದ್ದಾರೆ. ಆದರೆ ಇಲ್ಲಿರುವವರೇ ಮತದಾನದಿಂದ ದೂರ ಉಳಿದಿದ್ದು, ನಾಚಿಕೇಡಿನ ಸಂಗತಿ.


ಮತದಾನ ದಿನದ ರಜೆ, ಮಾರನೇ ದಿನ ನಾಲ್ಕನೇ ಶನಿವಾರದ ರಜೆ ಹಾಗೂ ಭಾನುವಾರದ ರಜೆ ಇದ್ದ ಕಾರಣ ಮೈಸೂರಿನ ಶ್ರೀ ಚಾಮರಾಜೇಂದ್ರ ಮೃಗಾಲಯದಲ್ಲಿ ಪ್ರವಾಸಿಗರು ಅಧಿಕ ಸಂಖ್ಯೆಯಲ್ಲಿದ್ದರು.

ಮತದಾನ ಮಾಡಿ ಅಂದ್ರೆ ಟ್ರಿಪ್‌ಗೆ ಹೊರಟವ್ರೆ

ಕಡ್ಡಾಯ ಮತದಾನ ಮಾಡುವಂತೆ ಸರ್ಕಾರಿ ಕಚೇರಿಗಳು, ಶಾಲಾ ಕಾಲೇಜುಗಳಿಗೆ ರಜೆ ಘೋಷಣೆ ಮಾಡಲಾಗಿತ್ತು. ಆದರೆ ಶುಕ್ರವಾರದ ಎಲೆಕ್ಷನ್ ರಜೆ, ನಾಲ್ಕನೇ ಶನಿವಾರದ ರಜೆ, ಭಾನುವಾರದ ಎಂದಿನ ರಜೆ ಸೇರಿಸಿಕೊಂಡು ಬಹಳಷ್ಟು ಜನರು ಮೂರು ದಿನದ ಪಿಕ್‌ನಿಕ್‌ಗೆ ಪ್ರೋಗ್ರಾಂ ಫಿಕ್ಸ್ ಮಾಡಿದ್ದಾರೆ.

ಮತದಾನ ಮಾಡದ ಮೈಸೂರಿನ ಕೆಲವು ಜನರು ಬೇರೆ ಸ್ಥಳಗಳಿಗೆ ಪ್ರವಾಸಕ್ಕೆ ಹೊರಟಿದ್ದರೆ, ಬೇರೆ ಸ್ಥಳಗಳಲ್ಲಿರುವ ಜನರು ಮೈಸೂರಿಗೆ ಬಂದಿದ್ದರು. ಇದರಿಂದ ಮೈಸೂರಿನ ಶ್ರೀ ಚಾಮರಾಜೇಂದ್ರ ಮೃಗಾಲಯ, ಮೈಸೂರು ಅರಮನೆ ಸೇರಿದಂತೆ ಹಲವು ಸ್ಥಳಗಳಲ್ಲಿ ಪ್ರವಾಸಿಗರು ತುಂಬಿದ್ದರು. ಮೃಗಾಲಯದ ಬಳಿ ಪ್ರವಾಸಿಗರ ಸಂಖ್ಯೆ ಹೆಚ್ಚಾಗಿ ಟ್ರಾಫಿಕ್ ಜಾಮ್ ಉಂಟಾಗಿತ್ತು. ಈ ಸಂದರ್ಭದಲ್ಲಿ ಸಂಚಾರಿ ಪೊಲೀಸರು ಹರಸಾಹಸಪಟ್ಟು, ವಾಹನ ಸಂಚಾರ ಸುಗಮಗೊಳಿಸಿದ್ದರು.

ಕೊಡಗಿನ ಜನರ ಮತದಾನದ ಅಭಿಮಾನ

ಕೊಡಗು ಬೆಟ್ಟಗುಡ್ಡಗಳಿಂದ ಆವೃತ್ತವಾಗಿದೆ. ಮತದಾನ ಕೇಂದ್ರಕ್ಕೂ ಮನೆಗಳಿಗೂ ಬಹಳ ದೂರ ದೂರ. ಆದರೂ ಕೊಡಗಿನ ಜನರು ಉತ್ಸಾಹದಿಂದ ಮತದಾನ ಮಾಡಿದ್ದಾರೆ. ಆದರೆ ಕೇವಲ ಒಂದು ಕಿಲೋ ಮೀಟರ್ ಸನಿಹದಲ್ಲೆ ಮತಗಟ್ಟೆ ಇದ್ದರೂ ಮೈಸೂರಿನ ಕೆಲವು ಮತದಾರರು ಮತದಾನದಿಂದ ದೂರವುಳಿದಿದ್ದಾರೆ.

ಕೊಡಗಿನ ಮಡಿಕೇರಿಯಲ್ಲಿ ಶೇಕಡ 75.41, ವಿರಾಜಪೇಟೆಯಲ್ಲಿ ಶೇಕಡ 73.88ರಷ್ಟು ಮತದಾನವಾಗಿದೆ. ಆದರೆ ಮನೆಯ ಹತ್ತಿರದಲ್ಲೇ ಇದ್ದರೂ ಮೈಸೂರು ಕೃಷ್ಣರಾಜ ಹಾಗೂ ಚಾಮರಾಜ ಕ್ಷೇತ್ರದ ಬಹಳಷ್ಟು ಮತದಾರರು ಮತದಾನ ಮಾಡಿಲ್ಲ. ಕೃಷ್ಣರಾಜ ಕ್ಷೇತ್ರದಲ್ಲಿ ಶೇಕಡ 60.98, ಚಾಮರಾಜ ಕ್ಷೇತ್ರದಲ್ಲಿ ಶೇಕಡ 60.98 ರಷ್ಟು ಮತದಾನವಾಗಿದೆ. ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದಲ್ಲಿ ಈ ಎರಡು ಕ್ಷೇತ್ರದಲ್ಲಿ ಮತದಾನ ಪ್ರಮಾಣ ಬಹಳ ಕಡಿಮೆ ಇದೆ.

ಕಡ್ಡಾಯ ಮತದಾನಕ್ಕೆ ಕಾನೂನು ರೂಪಿಸಬೇಕು

ಶೇಕಡ 100ರಷ್ಟು ಮತದಾನ ಆಗಲು ಸರ್ಕಾರ ಕಡ್ಡಾಯ ಮತದಾನಕ್ಕೆ ಕಟ್ಟುನಿಟ್ಟಿನ ಕಾನೂನು ರೂಪಿಸಬೇಕು ಎಂದು ಬಹಳಷ್ಟು ಜನರು ಆಗ್ರಹಿಸಿದ್ದಾರೆ.

ಮತದಾನ ಮಾಡದ ಹೊರತು ಸರ್ಕಾರದ ಸವಲತ್ತು ಸಿಗುವುದಿಲ್ಲ ಎಂಬ ಕಟ್ಟುನಿಟ್ಟಿನ ಕಾನೂನು ಜಾರಿಗೊಳಿಸಿದರೆ ಸಹಜವಾಗಿಯೇ ಜನರು ಕಡ್ಡಾಯ ಮತದಾನ ಮಾಡುತ್ತಾರೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ಜನಪ್ರತಿನಿಧಿಗಳು ಸರಿ ಇಲ್ಲ, ಸರ್ಕಾರವೂ ಸರಿ ಇಲ್ಲ. ಮೂಲ ಸೌಕರ್ಯ ಕಲ್ಪಿಸಿಲ್ಲ ಎಂದು ಕೆಲವರು ಟೀಕೆ ಮಾಡುತ್ತಾರೆ. ಆದರೆ ಇಂತಹ ಮಾತುಗಳನ್ನಾಡುವವರೇ ಮತದಾನ ಮಾಡುವುದಿಲ್ಲ ಎಂದು ಕೆಲವರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ವೃದ್ಧರು, ಶತಾಯುಷಿಗಳು ಹಾಗೂ ವಿಕಲಚೇತನರು ಸುಡು ಬೇಸಿಗೆ ಬಿಸಿಲಿನಲ್ಲಿ ಉತ್ಸಾಹದಿಂದ ಮತದಾನ ಮಾಡಿದ್ದಾರೆ. ಆದರೆ ಗಟ್ಟಿ ಮುಟ್ಟಾಗಿದ್ದರೂ ಬಹಳಷ್ಟು ಜನರು ಮತದಾನ ಮಾಡದೆ ಬೇಜವಾಬ್ದಾರಿ ಮೆರೆದಿದ್ದಾರೆ.

ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದಲ್ಲಿ ಬೆಟ್ಟಿಂಗ್ ಭರಾಟೆ ಜೋರು

ಮೈಸೂರು, ಏ.27(ಬಿಎಲ್‌ಯು)– ತೀವ್ರ ಹಣಾಹಣಿ ಏರ್ಪಟ್ಟಿದ್ದ ಜಿದ್ದಾಜಿದ್ದಿನ ಕ್ಷೇತ್ರಗಳಲ್ಲಿ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರ ಕೂಡ ಒಂದು. ಈ ಹಿನ್ನೆಲೆ ಯಲ್ಲಿ ಮತದಾನ ಮುಗಿದ ಕೆಲವೇ ಸಮಯದಲ್ಲಿ ಬೆಟ್ಟಿಂಗ್ ಭರಾಟೆ ಜೋರಾಗಿದೆ.



ಮತದಾನ ಮುಗಿದ ನಂತರ ಶೇಕಡವಾರು ಮತದಾನ ಹಾಗೂ ಯಾವ ಯಾವ ಕ್ಷೇತ್ರದಲ್ಲಿ ಎಷ್ಟು ಮತದಾನವಾಗಿದೆ ಎಂಬ ಅಂಕಿ ಅಂಶ ಆಧರಿಸಿ ಕೆಲವರು ಸೋಲು–ಗೆಲುವಿನ ಲೆಕ್ಕಾಚಾರದಲ್ಲಿ ತೊಡಗಿದ್ದಾರೆ.

ಯಾವ ಕ್ಷೇತ್ರದಲ್ಲಿ ಕಾಂಗ್ರೆಸ್ ಮುಂದಿದೆ, ಯಾವ ಕ್ಷೇತ್ರದಲ್ಲಿ ಬಿಜೆಪಿ ಮುಂದಿದೆ, ಮತದಾನ ಕಡಿಮೆ ಆಗಿದ್ದರೆ ಯಾರಿಗೆ ಲಾಭ ಎಂಬ ಹಲವು ಲೆಕ್ಕಾಚಾರಗಳು ನಡೆಯುತ್ತಿವೆ. ಕೆಲವರು ರಾಜಕೀಯದ ಬಗ್ಗೆ ಅಷ್ಟಾಗಿ ತಲೆಕೆಡಿಸಿಕೊಳ್ಳುವುದಿಲ್ಲ. ಮತ್ತೆ ಕೆಲವರಿಗೆ ರಾಜಕೀಯ ಬೆಳವಣಿಗೆ ಬಗ್ಗೆ ತೀವ್ರ ಆಸಕ್ತಿ. ಹೀಗೆ ರಾಜಕಾರಣದ ಬಗ್ಗೆ ಆಸಕ್ತಿ ಹೊಂದಿರುವ ಕೆಲವರು ಬೆಟ್ಟಿಂಗ್ ಭರಾಟೆಯಲ್ಲಿ ತೊಡಗಿದ್ದಾರೆ. ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದಲ್ಲಿ ಕೆಲವರು ಬಿಜೆಪಿಯ ಯದುವೀರ್‌ಗೆ ಫೇವರೇಟ್ ಆಗಿ ಬೆಟ್ಟಿಂಗ್ ಕಟ್ಟುತ್ತಿದ್ದರೆ, ಮತ್ತೆ ಕೆಲವರು ಕಾಂಗ್ರೆಸ್‌ಗೆ ಫೇವರೇಟ್ ಆಗಿ ಬೆಟ್ಟಿಂಗ್ ಕಟ್ಟುತ್ತಿದ್ದಾರೆ. ಒಂದು ಸಾವಿರ ರೂ. ಪಣಕ್ಕಿಟ್ಟಾಗ ಸೋತವರು ಐದು ಸಾವಿರ ರೂ. ನೀಡಬೇಕು ಎಂದು ಮಧ್ಯಸ್ಥಿಕೆಯಲ್ಲಿ ಒಪ್ಪಂದವಾಗಿ ಬೆಟ್ಟಿಂಗ್ ನಡೆಯುತ್ತಿದೆ. ಒಂದು ರೀತಿ ಐಪಿಎಲ್ ಬೆಟ್ಟಿಂಗ್‌ನಂತೆ ಬೆಟ್ಟಿಂಗ್ ಆರಂಭವಾಗಿದೆ. ಜೂನ್ 4ಕ್ಕೆ ಮತ ಎಣಿಕೆ ನಡೆಯಲಿದ್ದು, ಇನ್ನು 38 ದಿನ ಬಾಕಿ ಇದೆ. ಈಗಾಗಲೇ ಬೆಟ್ಟಿಂಗ್ ಭರಾಟೆ ಜೋರಾಗಿದ್ದು, ಮತ ಎಣಿಕೆ ಹತ್ತಿರವಾಗುತ್ತಿದ್ದಂತೆ ಬೆಟ್ಟಿಂಗ್ ಮತ್ತಷ್ಟು ಕಾವೇರುತ್ತದೆ. ಕೆಲವರು ಹಣ ಕಟ್ಟಿದರೆ, ಕೆಲವರು ಬೈಕ್, ಸ್ಕೂಟರ್ ಸೇರಿದಂತೆ ಹಲವು ವಸ್ತುಗಳನ್ನು ಪಣಕ್ಕಿಡಲಿದ್ದಾರೆ.

ಮತದಾನಕ್ಕೆ ತೃತೀಯ ಲಿಂಗಿಗಳ ನಿರಾಸಕ್ತಿ!

ಮೈಸೂರು,ಏ.27(ಎಂಟಿವೈ)– ಲೋಕಸಭಾ ಚುನಾವಣೆಯಲ್ಲಿ ಮತದಾನ ಪ್ರಮಾಣ ಹೆಚ್ಚಳ ಹಾಗೂ ಕಡ್ಡಾಯ ಮತದಾನಕ್ಕೆ ಸ್ವೀಪ್ ಸಮಿತಿ ಹಲವು ಕಾರ್ಯಕ್ರಮಗಳ ಮೂಲಕ ಜಾಗೃತಿ ಮೂಡಿಸಿದರೂ ತೃತೀಯ ಲಿಂಗಿ ಮತದಾರರು ಮತದಾನಕ್ಕೆ ಹಿಂದೇಟು ಹಾಕಿದ್ದಾರೆ.

ಮೈಸೂರು–ಕೊಡಗು ಕ್ಷೇತ್ರದಲ್ಲಿ 184 ತೃತೀಯಲಿಂಗಿಗಳು ಪಟ್ಟಿಯಲ್ಲಿದ್ದು, ಗುರುತಿನ ಚೀಟಿಯನ್ನೂ ಪಡೆದಿದ್ದಾರೆ. ಕಳೆದ ಒಂದೂವರೆ ತಿಂಗಳಿಂದ ಸ್ವೀಪ್ ಸಮಿತಿ ಜಾಗೃತಿ ಕಾರ್ಯಕ್ರಮದ ಮೂಲಕ ಮತದಾನದ ಮಹತ್ವ ಸಾರಿತ್ತು. ಆದರೆ, ಶುಕ್ರವಾರ ನಡೆದ ಮತದಾನದಲ್ಲಿ 184 ತೃತೀಯ ಲಿಂಗಿ ಮತದಾರರಲ್ಲಿ ಕೇವಲ 39 ಮಂದಿ ಮತ ಚಲಾಯಿಸಿದ್ದಾರೆ. 145 ಮಂದಿ ತಮ್ಮ ಹಕ್ಕು ಚಲಾಯಿಸಲು ಹಿಂದೇಟು ಹಾಕಿದ್ದಾರೆ.


ಮಡಿಕೇರಿ ಕ್ಷೇತ್ರದಲ್ಲಿ 9 ಹಾಗೂ ವಿರಾಜಪೇಟೆಯಲ್ಲಿ 7 ಮಂದಿ ಹೆಸರು ನೋಂದಾಯಿಸಿದ್ದರೂ ಒಬ್ಬರೂ ಮತದಾನ ಮಾಡಿಲ್ಲ. 4 ಮತದಾರರಿದ್ದ ಪಿರಿಯಾಪಟ್ಟಣದಲ್ಲಿ ಇಬ್ಬರು ಮತ ಚಲಾಯಿಸಿದ್ದಾರೆ. 16 ಮತದಾರರಿದ್ದ ಹುಣಸೂರಲ್ಲಿ 8 ಮಂದಿ, 34 ಮತದಾರರಿದ್ದ ಚಾಮುಂಡೇಶ್ವರಿ ಕ್ಷೇತ್ರದಲ್ಲಿ 7 ಮಂದಿ, 28 ಮತದಾರರಿದ್ದ ಕೆ.ಆರ್.ಕ್ಷೇತ್ರದಲ್ಲಿ 4 ಮಂದಿ, 32 ಮತದಾರರಿರುವ ಚಾಮರಾಜ ಕ್ಷೇತ್ರದಲ್ಲಿ ಕೇವಲ 5 ಮಂದಿ, 54 ಮತದಾರರಿದ್ದ ನರಸಿಂಹರಾಜ ಕ್ಷೇತ್ರದಲ್ಲಿ 13 ಮಂದಿ ಮಾತ್ರ ಮತ ಚಲಾಯಿಸಿದ್ದಾರೆ. ಇವರನ್ನು ಸಮಾಜದ ಮುಖ್ಯವಾಹಿನಿಗೆ ತರುವ ನಿಟ್ಟಿನಲ್ಲಿ ತೃತೀಯ ಲಿಂಗಿಗಳಿಗೆ ಸರ್ಕಾರ ವಿವಿಧ ಕಾರ್ಯಕ್ರಮ ರೂಪಿಸಿ, ಜಾರಿಗೊಳಿಸಿದ್ದರೂ, ಮತದಾನ ಮಾಡಲು ಹಿಂಜರಿದಿದ್ದಾರೆ. 2019ರಲ್ಲಿ ನಡೆದ ಲೋಕಸಭಾ ಚುನಾವಣೆಯಲ್ಲಿ 153 ತೃತೀಯ ಲಿಂಗಿ ಮತದಾರರಲ್ಲಿ ಕೇವಲ 19 ಮಂದಿ ಮತ ಚಲಾಯಿಸಿದ್ದರು.

ಸ್ವಸ್ಥಾನಕ್ಕೆ ಮರಳಿದ ಭದ್ರತಾ ಸಿಬ್ಬಂದಿ

ಮೈಸೂರು,ಏ.27(ಎಂಟಿವೈ)– ಮೈಸೂರು–ಕೊಡಗು ಹಾಗೂ ಚಾಮರಾಜನಗರ ಲೋಕಸಭಾ ಕ್ಷೇತ್ರಗಳ ಚುನಾವಣೆಯಲ್ಲಿ ಭದ್ರತಾ ಕಾರ್ಯನಿರ್ವಹಿಸಲು ವಿವಿಧ ಜಿಲ್ಲೆಗಳಿಂದ ಆಗಮಿಸಿದ್ದ ಪೊಲೀಸರು ಶನಿವಾರ ಬೆಳಗ್ಗೆ ಸ್ವಸ್ಥಾನಕ್ಕೆ ಮರಳಿದರು.

ಸುಗಮ ಹಾಗೂ ಶಾಂತಿಯುತ ಮತದಾನಕ್ಕಾಗಿ ಮತಗಟ್ಟೆಗಳಲ್ಲಿ ಭದ್ರತಾ ಕಾರ್ಯಕ್ಕೆ ಹೊರ ಜಿಲ್ಲೆಗಳಿಂದ ಪೊಲೀಸರು ಹಾಗೂ ಹೋಮ್‌ಗಾರ್ಡ್‌ಗಳನ್ನು ಕರೆಸಿಕೊಳ್ಳಲಾಗಿತ್ತು. ಶುಕ್ರವಾರ ರಾತ್ರಿ ಚುನಾವಣೆ ಪೂರ್ಣಗೊಂಡ ಬಳಿಕ ಕೇಂದ್ರ ಸ್ಥಾನಕ್ಕೆ ವಾಪಸ್ಸಾಗಿದ್ದ ಭದ್ರತಾ ಸಿಬ್ಬಂದಿ, ಇಂದು ಸ್ವಸ್ಥಾನಕ್ಕೆ ವಾಪಸ್ಸಾದರು.

ಉತ್ತರ ಕರ್ನಾಟಕದ ವಿವಿಧ ಜಿಲ್ಲೆಗಳಿಂದ ಪೊಲೀಸ್ ಸಿಬ್ಬಂದಿಗಳನ್ನು ಚುನಾವಣಾ ಕರ್ತವ್ಯಕ್ಕೆ ಬಳಸಿಕೊಳ್ಳಲಾಗಿತ್ತು. ಇಂದು ಬೆಳಗ್ಗೆ ಕೆಲವರು ಚಾಮುಂಡಿಬೆಟ್ಟಕ್ಕೆ ತೆರಳಿ ಪೂಜೆ ಸಲ್ಲಿಸಿದ ಬಳಿಕ ತಮ್ಮ ಜಿಲ್ಲೆಗಳತ್ತ ಅವರಲ್ಲಿ ಬಹುತೇಕರು ಪ್ರಯಾಣ ಬೆಳೆಸಿದರೆ, ಮತ್ತೆ ಕೆಲವರು ಮುಂಜಾನೆಯೇ ಮರಳಿದರು.



ಎಂ.ಎಲ್.ಉಲ್ಲಾಸ್‌ಗೆ ಉನ್ನತ ಶ್ರೇಣಿ

ಮೈಸೂರು: ದ್ವಿತೀಯ ಪಿಯುಸಿ ವಿಜ್ಞಾನ ಪರೀಕ್ಷೆಯಲ್ಲಿ ಮೈಸೂರಿನ ಸದ್ವಿದ್ಯಾ ಪಿಯು ಕಾಲೇಜು ವಿದ್ಯಾರ್ಥಿ ಎಂ.ಎಲ್.ಉಲ್ಲಾಸ್ 580 ಅಂಕ ಗಳಿಸುವ ಮೂಲಕ ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಈತ ದೇವಿರಮ್ಮಣ್ಣಿ ಅಗ್ರಹಾರ ನಿವಾಸಿ, ವಿದ್ಯಾವಿಕಾಸ ಬಿ.ಇಡಿ ಶಿಕ್ಷಣ ಮಹಾವಿದ್ಯಾಲಯದ ಗಣಿತಶಾಸ್ತ್ರ ಉಪನ್ಯಾಸಕ ಅನಂತರಾಮು, ತಾಯಿ ಪುಷ್ಪಾವತಿ ದಂಪತಿ ಪುತ್ರ

ರಾಜ್ಯದಲ್ಲಿ ಮೊದಲ ಹಂತದ ಚುನಾವಣೆ; ಕಾಂಗ್ರೆಸ್‌ಗೆ ಅಧಿಕ ಸ್ಥಾನ

ಮುಖ್ಯಮಂತ್ರಿ ಸಿದ್ದರಾಮಯ್ಯ ಅತೀವ ವಿಶ್ವಾಸ

ಬೆಂಗಳೂರು,ಏ.27(ಕೆಎಂಶಿ)– ರಾಜ್ಯದಲ್ಲಿ ನಡೆದ ಮೊದಲ ಹಂತದ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಹೆಚ್ಚು ಸ್ಥಾನಗಳು ಲಭಿಸಲಿವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮತದಾನದ ನಂತರ ನಮ್ಮ ಪಕ್ಷದ ಅಭ್ಯರ್ಥಿಗಳು, ಜಿಲ್ಲಾ ಉಸ್ತುವಾರಿ ಸಚಿವರು ನೀಡಿರುವ ವರದಿ ಆಧಾರದ ಮೇಲೆ ನಾನು ಈ ಮಾತನ್ನು ಹೇಳುತ್ತಿದ್ದೇನೆ ಎಂದರು.

ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಜನತೆಗೆ ನೀಡಿದ್ದ ಐದು ಗ್ಯಾರಂಟಿ ಭರವಸೆಗಳನ್ನು ಕಾಲಮಿತಿಯಲ್ಲಿ ಅನುಷ್ಠಾನಗೊಳಿಸಿದ್ದು, ಲೋಕಸಭಾ ಚುನಾವಣೆಯಲ್ಲಿ ನಮ್ಮ ಕೈಹಿಡಿದಿದೆ ಎಂದು ನಂಬಿದ್ದೇನೆ. ನಮ್ಮ ಗ್ಯಾರಂಟಿ ಹಾಗೂ ಕೇಂದ್ರ ಸರ್ಕಾರದ ಒಡೆದು ಆಳುವ ನೀತಿ ಜನರಿಗೆ ಮನದಟ್ಟಾಗಿ ಈ ಬಾರಿ ಮತದಾರರು ನಮ್ಮ ಕೈಹಿಡಿದಿದ್ದಾರೆ. ಉತ್ತರ ಕರ್ನಾಟಕ ಭಾಗದ 14 ಕ್ಷೇತ್ರಗಳಿಗೆ ಮೇ 7ರಂದು ಎರಡನೇ ಹಂತದಲ್ಲಿ ಚುನಾವಣೆ ನಡೆಯುತ್ತಿದ್ದು, ಇಲ್ಲಿಯೂ ನಮ್ಮ ಅಭ್ಯರ್ಥಿಗಳೇ ಮೇಲುಗೈ ಸಾಧಿಸುತ್ತಾರೆ. ಮೊದಲ ಹಂತದ ಚುನಾವಣೆ ನಂತರ ಎರಡನೇ ಹಂತದ ಕಡೆ ನಾವು ಗಮನಹರಿಸಿದ್ದೇವೆ, ಈಗಾಗಲೇ ನಮ್ಮ ಪಕ್ಷದ ರಾಷ್ಟ್ರೀಯ ನಾಯಕ ರಾಹುಲ್ ಗಾಂಧಿ ಬಿರುಸಿನ ಪ್ರಚಾರ ಮಾಡಿದ್ದಾರೆ.



ನಮ್ಮ ಪಕ್ಷದ ಮುಖಂಡರು ಹಾಗೂ ಸಚಿವರು ಒಗ್ಗಟ್ಟಿನಿಂದ ಕೆಲಸ ಮಾಡಿ ಸರ್ಕಾರದ ಗ್ಯಾರಂಟಿಗಳನ್ನು ಜನರ ಮನೆ ಬಾಗಿಲಿಗೆ ತಲುಪಿಸುತ್ತಿದ್ದಾರೆ, ಇದು ನಮ್ಮ ಕೈಹಿಡಿಯಲಿದೆ ಎಂದಿದ್ದಾರೆ. ಕೇಂದ್ರ ಸರ್ಕಾರದ 10 ವರ್ಷಗಳ ವೈಫಲ್ಯ ಹಾಗೂ ನಮ್ಮ ಸರ್ಕಾರದ ಸಾಧನೆಗಳನ್ನು ಪ್ರಮುಖ ವಿಷಯವಾಗಿ ಚುನಾವಣೆಯಲ್ಲಿ ಪ್ರಸ್ತಾಪ ಮಾಡುತ್ತಿದ್ದೇವೆ, ಜನರು ಆಸಕ್ತಿಯಿಂದ ನಮ್ಮ ಮಾತುಗಳನ್ನು ಆಲಿಸಿ, ಉತ್ಸಾಹ ತೋರುತ್ತಿದ್ದಾರೆ.

ಮೋದಿ ಅವರ ಸರ್ಕಾರ ಆರ್ಥಿಕವಾಗಿ ಹಿಂದುಳಿದ ವರ್ಗಗಳಿಗೆ ಸಂವಿಧಾನ ತಿದ್ದುಪಡಿ ಮಾಡಿ ಅವರಿಗೂ 10% ಮೀಸಲಾತಿ ನೀಡಿದೆ. ಬಾಬಾ ಸಾಹೇಬ್ ಅಂಬೇಡ್ಕರ್ ಅವರು ರಚನೆ ಮಾಡಿರುವ ಮೂಲ ಸಂವಿಧಾನದಲ್ಲಿ ಅದು ಇಲ್ಲ, ಆದರೂ ಸಂವಿಧಾನ ತಿದ್ದುಪಡಿ ಮಾಡಿ ಮೀಸಲಾತಿ ನೀಡಿದೆ. ಹಿಂದುಳಿದವರಿಗೆ ನೀಡಲಾದ ಮೀಸಲಾತಿ ರದ್ದುಪಡಿಸಿ ಮುಸಲ್ಮಾನರಿಗೆ ನೀಡಲಾಗುತ್ತದೆ ಎಂಬುದು ಅಪ್ಪಟ ಸುಳ್ಳು. ರಾಜಕೀಯವಾಗಿ ಬಿಜೆಪಿಯವರು ಈ ರೀತಿ ಹೇಳುತ್ತಿದ್ದಾರೆ. ಮತಗಳನ್ನು ಧ್ರುವೀಕರಣ ಮಾಡುವ ಉದ್ದೇಶದಿಂದ ಮೋದಿ ಅವರು ಇಂತಹ ಹೇಳಿಕೆಗಳನ್ನು ನೀಡುತ್ತಿದ್ದು, ಅವರ ಸ್ಥಾನಕ್ಕೆ ಇದು ಶೋಭೆ ತರುವುದಿಲ್ಲ. ಎಲ್ಲ ಭಾರತೀಯರ ರಕ್ಷಣೆ ಮಾಡುವುದು ಪ್ರಧಾನಮಂತ್ರಿಗಳ ಕರ್ತವ್ಯ, ಮುಸಲ್ಮಾನರನ್ನು ಪ್ರತ್ಯೇಕಿಸಿ ಮತಗಳ ಧ್ರುವೀಕರಣ ಮಾಡುತ್ತಿರುವ ಮೋದಿ ಅವರ ಕಾರ್ಯ ಸಂವಿಧಾನಬಾಹಿರವಾದುದು. ಮೀಸಲಾತಿ ನೀಡಿಕೆ ಸಂವಿಧಾನಿಕವಾಗಿ ಸರಿಯೆಂದು ಸುಪ್ರೀಂಕೋರ್ಟ್ ತಿಳಿಸಿದ್ದರೂ, ಮೋದಿ ಅವರು ಹತಾಶೆಯಿಂದ ಇಂತಹ ಹೇಳಿಕೆಗಳನ್ನು ನೀಡುತ್ತಿದ್ದಾರೆ, ಮೀಸಲಾತಿ ವಿರೋಧಿಸುವ ಬಿಜೆಪಿಯವರ ಧೋರಣೆಯನ್ನು ಖಂಡಿಸುತ್ತೇನೆ, ಜನರಿಗೆ ತಪ್ಪು ಮಾಹಿತಿ ನೀಡುತ್ತಿರುವುದು ಸರಿಯಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಜೇನಿನಗೂಡು ನಾವೆಲ್ಲಾ ಬೇರೆಯಾದರೆ ಜೇನಿಲ್ಲ

● ದಶಕಗಳಿಂದ ತಪ್ಪದೆ ಮೈಸೂರು ಪ್ರವಾಸ ಮಾಡುತ್ತಿರುವ ಜೇನು ಕುಟುಂಬ ● ಒಂದೇ ಸ್ಥಳದಲ್ಲಿ 150ಕ್ಕೂ ಹೆಚ್ಚು ಜೇನುಗೂಡುಗಳು

ಎಂ.ಟಿ.ಯೋಗೇಶ್ ಕುಮಾರ್

ಮೈಸೂರು, ಏ.27– ಸಾಂಸ್ಕೃತಿಕ ನಗರಿ ಮೈಸೂರಿನ ಸೌಂದರ್ಯಕ್ಕೆ ಪ್ರವಾಸಿಗರು ಮಾತ್ರವಲ್ಲ ಜೇನು ನೊಣಗಳು ಮಾರು ಹೋಗಿವೆ.

ಕಳೆದ ನಾಲ್ಕೈದು ದಶಕಗಳಿಂದ ನೂರಾರು ಜೇನು ಕುಟುಂಬಗಳು ತಪ್ಪದೇ ಮೈಸೂರು ಪ್ರವಾಸ ಕೈಗೊಂಡು ಆರು ತಿಂಗಳ ವಾಸ್ತವ್ಯದ ನಂತರ ತಮ್ಮ ಕುಟುಂಬದ ಸಂಖ್ಯೆಯನ್ನು ವೃದ್ಧಿಸಿಕೊಂಡು ವಾಪಸ್ಸಾಗುವುದನ್ನು ರೂಢಿಸಿಕೊಂಡಿರುವುದು ವಿಶೇಷ.

ಮೈಸೂರಿನ ಹಾರ್ಡಿಂಗ್ ವೃತ್ತದ ಸಮೀಪ ಮಿರ್ಜಾ ರಸ್ತೆಗೆ ಹೊಂದಿಕೊಂಡಂತಿರುವ ತೋಟಗಾರಿಕಾ ಇಲಾಖೆಯ ಸಸ್ಯ ಕ್ಷೇತ್ರದಲ್ಲಿನ ಬೃಹತ್ ಕಾಡು ಹತ್ತಿ ಮರ(ಕಾಟನ್‌ವುಡ್)ವೇ ಈ ಜೇನು ಕುಟುಂಬಗಳ ನೆಚ್ಚಿನ ಹಾಗೂ ಸುರಕ್ಷಿತ ತಾಣವಾಗಿದೆ. ಐದಾರು ದಶಕಗಳಿಂದ ಎಲ್ಲಿಂದಲೋ ತಂಡೋಪ ತಂಡವಾಗಿ ಬರುವ ಜೇನು ಪರಿವಾರಗಳು ಈ ಮರದಲ್ಲಿ ನೆಲೆಸಿ, ಸಂತಾನೋತ್ಪತ್ತಿ ಮಾಡಿಕೊಂಡು 6 ತಿಂಗಳ ನಂತರ ವಾಪಸ್ಸಾಗುತ್ತಿವೆ. ಮನುಷ್ಯರು ಪೂರ್ವಜನರ ಮಾರ್ಗದರ್ಶನದಂತೆ ನಡೆಯುವ ರೀತಿಯಲ್ಲೇ ಜೇನು ನೊಣಗಳೂ ಕೂಡ ಆಯ್ದ ಕೆಲವು ಮರಗಳಲ್ಲಿ ಪ್ರತಿವರ್ಷವೂ ಗೂಡು ಕಟ್ಟುತ್ತಿರುವುದು ಅಚ್ಚರಿಯನ್ನುಂಟು ಮಾಡಿದೆ.

ಸುಮಾರು 35 ರಿಂದ 45 ಅಡಿ ಎತ್ತರದ ಒಂದೇ ಮರದಲ್ಲಿ 100ಕ್ಕೂ ಹೆಚ್ಚು ಜೇನುಗೂಡುಗಳಿದ್ದು, ಕುಟುಂಬಗಳು ಹೆಚ್ಚಾಗುತ್ತಿದ್ದಂತೆ ಅಕ್ಕಪಕ್ಕವಿರುವ 2–3 ಮರಗಳಿಗೆ ಜೇನು ಗೂಡುಗಳು ವಿಸ್ತರಿಸುತ್ತವೆ. ಪ್ರತಿ ವರ್ಷ ಗೂಡು ಕಟ್ಟಲು ಇದೇ ಮರವನ್ನು ಆಯ್ಕೆ ಮಾಡಿಕೊಳ್ಳುವ ಮೂಲಕ ತಮಗೂ ನೆನಪಿನ ಶಕ್ತಿ ಇದೆ ಎಂದು ಸಾಬೀತುಪಡಿಸುವಂತಿದೆ.

ಹೂವುಗಳ ಸೀಜ಼ನ್‌ಗೆ ವಲಸೆ: ಬಿಸಿಲಿನ ಬೇಗೆ ಆರಂಭವಾಗುತ್ತಿದ್ದಂತೆಯೇ ಯಾವುದೋ ಸ್ಥಳದಿಂದ ಮೈಸೂರಿಗೆ ಜೇನುನೊಣಗಳ ವಲಸೆ ಆರಂಭವಾಗುತ್ತದೆ. ಪ್ರತಿ ವರ್ಷ ಡಿಸೆಂಬರ್ ಎರಡನೇ ವಾರದಿಂದ ಜೇನುಗಳು ಪ್ರವಾಸ ಶುರು ಮಾಡುತ್ತವೆ. ಈ ಬಾರಿ ಫೆಬ್ರವರಿಯಲ್ಲಿ ಹಾರ್ಡಿಂಗ್ ವೃತ್ತದ ಬಳಿಯ ತೋಟಗಾರಿಕಾ ಇಲಾಖೆಯ ಸಸ್ಯ ಕ್ಷೇತ್ರಕ್ಕೆ ಬಂದಿವೆ. ಗಿಡಗಳಲ್ಲಿ ಹೂವು ಬಿಡುವ ಕಾಲ(ಸೀಜ಼ನ್)ದಲ್ಲೇ ಇಲ್ಲಿಗೆ ಆಗಮಿಸುತ್ತವೆ. ಸದ್ಯ 3–4 ಮರಗಳಲ್ಲಿ ಸುಮಾರು 120ಕ್ಕೂ ಹೆಚ್ಚು ಗೂಡುಗಳಿದ್ದು, ಜೂನ್ ವೇಳೆಗೆ ಈ ಸಂಖ್ಯೆ 150ರಿಂದ 160 ಆಗುವ ಸಾಧ್ಯತೆಯಿದೆ. ಅವುಗಳಲ್ಲಿ ಮಾನ್ಸೂನ್ ಆರಂಭವಾಗುತ್ತಿದ್ದಂತೆ ಕೆಲವು ಕುಟುಂಬಗಳು ಇಲ್ಲಿಂದ ಹೊರಡುತ್ತವೆ. ಮತ್ತಷ್ಟು ಕುಟುಂಬಗಳು ಮಾನ್ಸೂನ್ ಮುಗಿದ ನಂತರ ಪಯಣ ಬೆಳೆಸುತ್ತವೆ. ಸುಮಾರು 20 ಕುಟುಂಬಗಳು ವರ್ಷವಿಡೀ ಇದೇ ಮರದಲ್ಲಿರುತ್ತವೆ.

ಈ ಸ್ಥಳದ ಆಯ್ಕೆಗೆ ಕಾರಣ: ಸಂತಾನಾಭಿವೃದ್ಧಿಗೆ ಸುರಕ್ಷಿತ ಎಂಬ ಕಾರಣಕ್ಕೆ ಇಲ್ಲಿನ ಕಾಡುಹತ್ತಿ ಮರವನ್ನೇ ಆಯ್ಕೆ ಮಾಡಿಕೊಳ್ಳುತ್ತವೆ. ಗಾಳಿಯಿಂದ ಹಾಗೂ ಜನರಿಂದ ತೊಂದರೆಯಾಗುವುದಿಲ್ಲ. ಅಲ್ಲದೆ ಸಮೀಪದಲ್ಲೇ ಆಹಾರ, ಕುಡಿಯಲು ನೀರು ಸಿಗುತ್ತದೆ ಎಂದು ಹಲವು ದಶಕಗಳಿಂದ ಈ ಸ್ಥಳದಲ್ಲಿ ನೆಲೆಸುತ್ತವೆ.



ಸಸ್ಯಕ್ಷೇತ್ರದ ಕಾಟನ್‌ವುಡ್ ಮರಗಳಿಗೆ ಕಳೆದ ಹಲವು ವರ್ಷಗಳಿಂದ ಜೇನುನೊಣಗಳ ಕುಟುಂಬಗಳು ಬಂದು ಸುಮಾರು 6 ತಿಂಗಳು ನೆಲಸಿ, ವಾಪಸ್ಸಾಗುತ್ತವೆ. ಸುರಕ್ಷಿತ ಸ್ಥಳವಾಗಿರುವುದರಿಂದ ಪ್ರತಿವರ್ಷವೂ ಇಲ್ಲಿಗೆ ಬರುತ್ತವೆ. ಮನೆ, ಇನ್ನಿತರ ದೊಡ್ಡ ಕಟ್ಟಡ ಹಾಗೂ ಖಾಸಗಿ ಜಾಗದಲ್ಲಿ ಜೇನುಗೂಡುಗಳಿದ್ದರೆ ರಾಸಾಯನಿಕ ಸಿಂಪಡಿಸಿ, ಜೇನುನೊಣಗಳ ಮಾರಣ ಹೋಮ ಮಾಡಲಾಗುತ್ತಿದೆ. ಇದರಿಂದ ಮುಂದಿನ ದಿನಗಳಲ್ಲಿ ಕೃಷಿ, ತೋಟಗಾರಿಕಾ ಕ್ಷೇತ್ರದ ಮೇಲೆ ದುಷ್ಪರಿಣಾಮ ಬೀರುವುದು ಖಚಿತ. ಜೇನುಗಳಿಲ್ಲದಿದ್ದರೆ ಹಣ್ಣಿನ ಫಸಲು ಪಡೆಯಲು ಸಾಧ್ಯವಿಲ್ಲ. ಪ್ರಕೃತಿ ರಕ್ಷಣೆ ದೃಷ್ಟಿಯಿಂದಾದರೂ ಜೇನು ಸಂತತಿಯನ್ನು ಸಂರಕ್ಷಿಸಬೇಕು. ಇದರ ಬಗ್ಗೆ ಅರಿವು ಮೂಡಿಸಬೇಕು. ಈ ನಿಟ್ಟಿನಲ್ಲಿ ಮೈಸೂರು ಹಾಗೂ ಸುತ್ತಮುತ್ತ ಖಾಸಗಿ ಕಟ್ಟಡಗಳ ಮೇಲೆ ಕಟ್ಟಿರುವ ಜೇನುಗೂಡನ್ನು ಜೇನು ನೊಣ ಹಾಗೂ ಸ್ಥಳೀಯರಿಗೆ ತೊಂದರೆಯಾಗದಂತೆ ತೆರವುಗೊಳಿಸುವ ಕಾರ್ಯದಲ್ಲಿ ಮಗ್ನರಾಗಿದ್ದೇವೆ. ಮರ ಹಾಗೂ ಹೊಲ–ಗದ್ದೆಗಳ ಬಳಿ ಗೂಡು ಕಟ್ಟಿದರೆ ಅವುಗಳಿಗೆ ತೊಂದರೆ ಕೊಡಬಾರದು.

–ಪ್ರದೀಪ್, ಪ್ರಾಣಿ ಸಂರಕ್ಷಕ

ವಿವಿಧೆಡೆಯ ಗಿಡ–ಮರಗಳಲ್ಲಿ ಬಿಟ್ಟಿರುವ ಹೂವುಗಳಿಂದ ಪರಾಗ ಹೀರುತ್ತವೆ. ಹಣ್ಣುಗಳ ಸೀಜ಼ನ್ ಆರಂಭವಾಗುತ್ತಿದ್ದಂತೆಯೇ ಜೇನುನೊಣಗಳು ಸ್ವಸ್ಥಾನದತ್ತ ಪ್ರಯಾಣ ಬೆಳೆಸುತ್ತವೆ ಎಂಬುದು ತಜ್ಞರ ಅಭಿಪ್ರಾಯ.

ಕುಡಿಯಲು ನೀರು ಪೂರೈಕೆ: ಸಸ್ಯ ಕ್ಷೇತ್ರದ ಸಿಬ್ಬಂದಿ ಜೇನುನೊಣಗಳಿಗೆ ಅತಿಥಿ ಸತ್ಕಾರ ನೀಡುವುದು ಮತ್ತೊಂದು ವಿಶೇಷ. ಪ್ರತಿದಿನ ಜೇನುನೊಣಗಳಿಗೆ ಕುಡಿಯಲು ನೀರು ಪೂರೈಸುತ್ತಿದ್ದಾರೆ. ಕಿಡಿಗೇಡಿಗಳಿಂದ ಜೇನುಗೂಡಿಗೆ ಹಾನಿಯಾಗದಂತೆ ಕಟ್ಟೆಚ್ಚರ ವಹಿಸುತ್ತಾರೆ. ಗೂಡುಗಳಿಂದ ಜೇನು ತೆಗೆಯಲು ಹಲವು ಮಂದಿ ಪ್ರಯತ್ನಿಸಿದ್ದರಾದರೂ ಇಲ್ಲಿನ ಸಿಬ್ಬಂದಿ ಅವಕಾಶ ನೀಡಿಲ್ಲ. ಇಲ್ಲಿ ಗೂಡು ಕಟ್ಟುವ ಜೇನು ನೊಣಗಳು ಈವರೆಗೂ ಯಾರಿಗೂ ತೊಂದರೆ ನೀಡಿಲ್ಲ. ಆದರೆ ಆಕಸ್ಮಿಕವಾಗಿ ಒಂದೆರಡು ನೊಣಗಳು ಸಿಬ್ಬಂದಿಗೆ ಕಚ್ಚಿದರೂ ಅವುಗಳ ಒಕ್ಕಲೆಬ್ಬಿಸುವ ಚಿಂತನೆಯನ್ನೂ ಮಾಡದೆ ಪ್ರೀತಿ ತೋರುತ್ತಿದ್ದಾರೆ.

ಇಂದು ಕುಂಡ್ಯೋಳಂಡ ಕಪ್ ಹಾಕಿ ಫೈನಲ್

ಚೇದಂಡ, ನೆಲ್ಲಮಕ್ಕಡ ತಂಡಗಳ ನಡುವೆ ಸೆಣಸಾಟ


ನೆಲ್ಲಮಕ್ಕಡ ಮತ್ತು ಕುಪ್ಪಂಡ ತಂಡಗಳ ನಡುವಿನ ಹಣಾಹಣಿ


ಚೇದಂಡ ಮತ್ತು ಕುಲ್ಲೇಟಿರ ತಂಡಗಳ ನಡುವಿನ ಸೆಣಸಾಟ

ಮಡಿಕೇರಿ,ಏ.27– ನಾಪೋಕ್ಲುವಿನಲ್ಲಿ ಕೆಪಿಎಸ್ ಶಾಲೆಯ ಜನರಲ್ ತಿಮ್ಮಯ್ಯ ಕ್ರೀಡಾಂಗಣದಲ್ಲಿ ನಡೆಯುತ್ತಿರುವ 24ನೇ ವರ್ಷದ ಕೊಡವ ಕುಟುಂಬಗಳ ನಡುವಣ 'ಕುಂಡ್ಯೋಳಂಡ ಕಪ್ ಹಾಕಿ ಉತ್ಸವ'ದ ಕುತೂಹಲಕಾರಿ ಘಟ್ಟವನ್ನು ತಲುಪಿದೆ.

ಇಂದು ನಡೆದ ರೋಚಕ ಸೆಮಿ ಫೈನಲ್ ಪಂದ್ಯಗಳಲ್ಲಿ ಅರ್ಹ ಗೆಲುವು ಸಾಧಿಸಿದ ಚೇಂದಂಡ ಮತ್ತು ನೆಲ್ಲಮಕ್ಕಡ ತಂಡಗಳು ಫೈನಲ್ ಹಂತಕ್ಕೆ ಪದಾರ್ಪಣೆ ಮಾಡಿದ್ದು, ನಾಳೆ (ಏ.28) ಪ್ರತಿಷ್ಠಿತ 'ಚಾಂಪಿಯನ್' ಪಟ್ಟ ಅಲಂಕರಿಸಲು ಪೈಪೋಟಿ ನಡೆಸಲಿವೆ.

ಕ್ರೀಡಾಭಿಮಾನಿಗಳ ಸಮ್ಮುಖದಲ್ಲಿ ನಡೆದ ಮೊದಲ ಸೆಮಿಫೈನಲ್ ಪಂದ್ಯದಲ್ಲಿ ಚೇಂದಂಡ ತಂಡ 3–1 ಗೋಲುಗಳ ಅಂತರದಿಂದ ಎದುರಾಳಿ ಕುಲ್ಲೇಟಿರ ತಂಡವನ್ನು ಮಣಿಸಿತು. ದ್ವಿತೀಯ ಸೆಮಿಫೈನಲ್‌ನಲ್ಲಿ ನೆಲ್ಲಮಕ್ಕಡ ತಂಡ 4–2 ಗೋಲುಗಳ ಅಂತರದಿಂದ ಕುಪ್ಪಂಡ(ಕೈಕೇರಿ) ತಂಡವನ್ನು ಪರಾಭವಗೊಳಿಸಿತು. ಪರಾಜಿತ ಕುಲ್ಲೇಟಿರ ಮತ್ತು ಕುಪ್ಪಂಡ ಕೈಕೇರಿ ತಂಡಗಳು 3 ಹಾಗೂ 4ನೇ ಸ್ಥಾನಕ್ಕಾಗಿ ಭಾನುವಾರ ಪೈಪೋಟಿ ನಡೆಸಲಿವೆ.

ಚೇಂದಂಡ–ಕುಲ್ಲೇಟಿರ: ದಿನದ ಮೊದಲ ಕುತೂಹಲಕಾರಿ ಸೆಮಿಫೈನಲ್‌ನಲ್ಲಿ ಚೇಂದಂಡ ತಂಡದ ಮೋಕ್ಷಿತ್ ಉತ್ತಪ್ಪ ಪಂದ್ಯದ ಆರಂಭಿಕ 4ನೇ ನಿಮಿಷವೇ ಗೋಲು ಗಳಿಸಿ ತಂಡಕ್ಕೆ 1–0 ಮುನ್ನಡೆಯನ್ನು ದೊರಕಿಸಿಕೊಟ್ಟರು. ಪಂದ್ಯದ ದ್ವಿತೀಯ ಕ್ವಾರ್ಟರ್‌ನಲ್ಲಿ ಗೋಲುಗಳು ದಾಖಲಾಗಲಿಲ್ಲವಾದರು, ತೃತೀಯ ಕ್ವಾರ್ಟರ್‌ನ 34ನೇ ನಿಮಿಷ ಚೇಂದಂಡ ನಿಖಿನ್ ತಿಮ್ಮಯ್ಯ ಸೊಗಸಾದ ಗೋಲು ದಾಖಲಿಸಿ ತಂಡಕ್ಕೆ 2–0 ಗೋಲಿನ ಸ್ಪಷ್ಟ ಮುನ್ನಡೆಯನ್ನು ದೊರಕಿಸಿಕೊಟ್ಟರು. 4ನೇ ಕ್ವಾರ್ಟರ್‌ನ 48ನೇ ನಿಮಿಷ ಮತ್ತೊಮ್ಮೆ ಚೇಂದಂಡ ನಿಖಿನ್ ತಿಮ್ಮಯ್ಯ ಗೋಲು ಬಾರಿಸಿ ತಂಡಕ್ಕೆ ಗೆಲುವನ್ನು ಖಚಿತಪಡಿಸಿದರೆ, ಪಂದ್ಯದ ಕೊನೆಯ 59ನೇ ನಿಮಿಷ ಕುಲ್ಲೇಟಿರ ಶುಭಂ ಗೋಲೊಂದನ್ನು ಗಳಿಸುವಲ್ಲಿ ಯಶಸ್ವಿಯಾದರು. ಅಂತಿಮವಾಗಿ ಚೇಂದಂಡ ಗೆಲುವನ್ನು ಸಾಧಿಸಿ ಫೈನಲ್ ಪ್ರವೇಶಿಸಿತು.

ನೆಲ್ಲಮಕ್ಕಡ–ಕುಪ್ಪಂಡ(ಕೈಕೇರಿ): ದ್ವಿತೀಯ ಸೆಮಿಫೈನಲ್ ಪಂದ್ಯದ ಮೊದಲ ಕ್ವಾರ್ಟರ್‌ನಲ್ಲಿ ನೆಲ್ಲಮಕ್ಕಡ ಮತ್ತು ಕುಪ್ಪಂಡ ತಂಡಗಳ ನಡುವೆ ಜಿದ್ದಾಜಿದ್ದಿನ ಹೋರಾಟ ಕಂಡು ಬಂತಾದರು ಯಾವುದೇ ಗೋಲು ದಾಖಲಾಗಲಿಲ್ಲ ದ್ವಿತೀಯ ಕ್ವಾರ್ಟರ್‌ನ 20ನೇ ನಿಮಿಷ ನೆಲ್ಲಮಕ್ಕಡ ಪ್ರಧಾನ್ ಚಂಗಪ್ಪ ಮೊದಲ ಗೋಲನ್ನು ದಾಖಲಿಸಿದರು. 24ನೇ ನಿಮಿಷ ನೆಲ್ಲಮಕ್ಕಡ ಅಯ್ಯಪ್ಪ ಸೊಗಸಾದ ಗೋಲು ದಾಖಲಿಸಿ ತಂಡಕ್ಕೆ 2–0 ಗೋಲಿನ ಮುನ್ನಡೆ ದೊರಕಿಸಿಕೊಟ್ಟರು. ಇದಕ್ಕೆ ಪ್ರತಿಯಾಗಿ ಕುಪ್ಪಂಡ ಸೋಮಯ್ಯ 24ನೇ ನಿಮಿಷ ಗೋಲನ್ನು ಗಳಿಸುವುದರೊಂದಿಗೆ ದ್ವಿತೀಯ ಕ್ವಾರ್ಟರ್ ಮುಕ್ತಾಯಕ್ಕೆ ನೆಲ್ಲಮಕ್ಕಡ 2–1 ಗೋಲಿನ ಮುನ್ನಡೆ ಪಡೆಯಿತು.

ತೃತೀಯ ಕ್ವಾರ್ಟರ್‌ನ 32ನೇ ನಿಮಿಷ ಕುಪ್ಪಂಡ ಸೋಮಯ್ಯ ಆಕರ್ಷಕ ಸಮಬಲದ ಗೋಲು ದಾಖಲಿಸುವುದರೊಂದಿಗೆ ಪಂದ್ಯ ರೋಚಕತೆಯನ್ನು ಪಡೆಯಿತು. ನೆಲ್ಲಮಕ್ಕಡ ಸೋಮಯ್ಯ 34ನೇ ನಿಮಿಷ ಮತ್ತು 4ನೇ ಕ್ವಾರ್ಟರ್‌ನ 59ನೇ ನಿಮಿಷ ನೆಲ್ಲಮಕ್ಕಡ ಅಯ್ಯಪ್ಪ ಮಿಂಚಿನ ಗೋಲು ದಾಖಲಿಸುವುದರೊಂದಿಗೆ ನೆಲ್ಲಮಕ್ಕಡ 4–2 ಗೋಲಿನ ಗೆಲುವನ್ನು ದಾಖಲಿಸಿ, ಅಂತಿಮ ಪಂದ್ಯದಲ್ಲಿ ಚೇಂದಂಡ ತಂಡವನ್ನು ಎದುರಿಸುವ ಅರ್ಹತೆ ಪಡೆದುಕೊಂಡಿತು.

ಬಹುಮಾನದ ಸುರಿಮಳೆ

ಕುಂಡ್ಯೋಳಂಡ ಹಾಕಿ ನಮ್ಮೆಯಲ್ಲಿ ಪ್ರಥಮ ಸ್ಥಾನ ಪಡೆದು ಬೀಗುವ ತಂಡ 4 ಲಕ್ಷ ರೂ. ನಗದು ಸಹಿತ ಬೆಳ್ಳಿಯ ರೋಲಿಂಗ್ ಟ್ರೋಫಿಯನ್ನು ಪಡೆಯಲಿದೆ. ರನ್ನರ್ಸ್ ಸ್ಥಾನಕ್ಕೆ ತೃಪ್ತಿಪಡುವ ತಂಡ 3 ಲಕ್ಷ ರೂ. ನಗದು ಹಾಗೂ ಟ್ರೋಫಿ, 3 ಮತ್ತು 4ನೇ ಸ್ಥಾನ ಪಡೆಯುವ ತಂಡಗಳು ಕ್ರಮವಾಗಿ 2 ಮತ್ತು 1 ಲಕ್ಷ ರೂ. ನಗದು ಹಾಗೂ ಟ್ರೋಫಿಗಳನ್ನು ಪಡೆಯಲಿವೆ. ಅದರ ಜೊತೆಯಲ್ಲಿಯೇ ಹತ್ತಾರು ವೈಯಕ್ತಿಕ ಬಹುಮಾನಗಳನ್ನು ಆಟಗಾರರು ತಮ್ಮದಾಗಿಸಿಕೊಳ್ಳಲಿದ್ದಾರೆ.

ಏ.30ರಂದು ಸಂತ ಸೆಬಾಸ್ಟಿನ್ ರೋಮನ್ ಕ್ಯಾಥೋಲಿಕ್ ದೇವಾಲಯ ಲೋಕಾರ್ಪಣೆ



ಸುಂಟಿಕೊಪ್ಪ,ಏ.27– 7ನೇ ಹೊಸ ಕೋಟೆಯಲ್ಲಿ ನೂತನವಾಗಿ ನಿರ್ಮಾಣಗೊಂಡಿರುವ ಸಂತ ಸೆಬಾಸ್ಟಿನ್ ಅವರ ರೋಮನ್ ಕ್ಯಾಥೋಲಿಕ್ ದೇವಾಲಯ ವಿವಿಧ ಧಾರ್ಮಿಕ ವಿಧಿವಿಧಾನಗಳೊಂದಿಗೆ ಏ.30 ರಂದು ಲೋಕಾರ್ಪಣೆಗೊಳ್ಳಲಿದೆ.

ಮಂಗಳವಾರ ಅಪರಾಹ್ನ ನಡೆಯುವ ಕಾರ್ಯಕ್ರಮದಲ್ಲಿ ಬೆಳ್ತಂಗಡಿ ಧರ್ಮಕ್ಷೇತ್ರದ ಧರ್ಮಾಧ್ಯಕ್ಷ ಬಿಷಪ್ ಮಾರ್ ಲಾರೆನ್ಸ್ ಮುಕುಜಿ ಅವರು ಆಶೀರ್ವಚನ ನೀಡುವ ಮೂಲಕ ಲೋಕಾರ್ಪಣೆಗೊಳಿಸಲಿದ್ದಾರೆ. ಅವರ ಅಧ್ಯಕ್ಷತೆಯಲ್ಲಿ ನಡೆಯುವ ಸಭಾ ಕಾರ್ಯಕ್ರಮದಲ್ಲಿ ಮಡಿಕೇರಿ ಶಾಸಕ ಡಾ.ಮಂತರ್‌ಗೌಡ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ.

ಕಾರ್ಯಕ್ರಮದಲ್ಲಿ ಅತಿಥಿಗಳಾಗಿ ಬೆಳ್ತಂಗಡಿ ಧರ್ಮಕ್ಷೇತ್ರದ ಜೋಸೆಫ್ ವಲಿಯಪರಂಬಿಲ್, ಸಿದ್ದಾಪುರ ಸಂತ ಮೇರಿ ಚರ್ಚಿನ ವಲಯ ಧರ್ಮಗುರುಗಳಾದ ಜೋಜಿ ವಡಕ್ಕಿವೀಟಿ, ಮೈಸೂರಿನ ಸೆಂಟ್ ಪೌಲಸ್ ಪ್ರಾಂತ್ಯದ ಧರ್ಮಗುರು ಆಗಸ್ಟೀನ್ ಪಾಯಂಪಳ್ಳಿ, ತಲಚೇರಿಯ ಸಂತ ಜೋಸೆಫರ ಪ್ರಾಂತ್ಯದ ಧರ್ಮಗುರು ಡಾ. ತ್ರೇಸಾ ಪಾಲಕ್ಕಾಡ್, ಚೆರುಪುಜಾ ಪ್ರಾಂತ್ಯದ ಧರ್ಮಗುರು ಜೋಸ್ ವೆಲ್ಲಿಕಲ್, 7ನೇ ಹೊಸಕೋಟೆ ಗ್ರಾಮ ಪಂಚಾಯಿತಿ ಅಧ್ಯಕ್ಷ ಇ.ಬಿ. ಜೋಸೆಫ್ ಪಾಲ್ಗೊಳ್ಳಲಿದ್ದಾರೆಂದು ಧರ್ಮಗುರು ಸೆಬಾಸ್ಟೀನ್ ಪೂವತ್ತಿಗಲ್ ತಿಳಿಸಿದ್ದಾರೆ.

ಮಡಿಕೇರಿಯಲ್ಲಿ ಶ್ರೀ ಶಕ್ತಿ ಗಣಪತಿ ದೇವಸ್ಥಾನ ಪುನರ್ ಪ್ರತಿಷ್ಠಾಪನೆ

ಮಡಿಕೇರಿ,ಏ.27– ಮಡಿಕೇರಿ ನಗರದ ವಿದ್ಯಾನಗರ ಬಡಾವಣೆಯಲ್ಲಿ ನೂತನವಾಗಿ ನಿರ್ಮಾಣಗೊಂಡಿರುವ ಶ್ರೀಶಕ್ತಿ ಗಣಪತಿ ದೇವಸ್ಥಾನದಲ್ಲಿ ಪುನರ್ ಪ್ರತಿಷ್ಠಾಪನೆ ಹಾಗೂ ಬ್ರಹ್ಮಕಲಶೋತ್ಸವ ಮೂರು ದಿನಗಳ ಕಾಲ ಶ್ರದ್ಧಾಭಕ್ತಿಯಿಂದ ನಡೆಯಿತು.

ಸಾಮೂಹಿಕ ಪ್ರಾರ್ಥನೆ, ಸ್ವಸ್ತಿ ಪುಣ್ಯಾಹ, ವಾಚನ ಪ್ರಸಾದ ಸಂಗ್ರಹ ಸ್ಥಳ ಶುದ್ಧಿ ಸುದರ್ಶನ ಹೋಮ, ವಾಸ್ತು ಬಲಿ, ಪ್ರಸಾದ ಬಲಿ, ಪೂಜಾ ಪ್ರಸಾದ ವಿತರಣೆ, ಗಣಪತಿ ಹೋಮ, ಪ್ರಾಯಶ್ಚಿತ ಹೋಮ, ಹೋಮ ಕಲಶಾಭಿಷೇಕ, ಅನುಜ್ಞಾ ಕಲಶ ಪೂಜೆ, ಬಿಂಬಶುದ್ಧಿ, ಕಲಶಪೂಜೆ–ಕಲಶಾಭಿಷೇಕ, ಶಯ್ಯಪೂಜೆ, ಬಿಂಬ ಶಯ್ಯಾಗಮನ ಪೂಜೆ, ಕಳಶ ಮಂಡಲ ರಚನೆ ವಿಧಿ ವಿಧಾನಗಳು ಎರಡು ದಿನಗಳ ಕಾಲ ಜರುಗಿತು.

ಮೂರನೇ ದಿನ ಏ.26 ರಂದು ದೇವಾಲಯದಲ್ಲಿ ಶ್ರೀ ಶಕ್ತಿ ಗಣಪತಿ ದೇವರ



ಪುನರ್ ಪ್ರತಿಷ್ಠೆ ಮತ್ತು ಬ್ರಹ್ಮಕಲಶೋತ್ಸವವು ಬ್ರಹ್ಮಶ್ರೀ ವೇದವ್ಯಾಸ ತಂತ್ರಿ ಪೇರಾಜೆ ಅವರ ನೇತೃತ್ವದಲ್ಲಿ ಸಂಪನ್ನಗೊಂಡಿತು. ಬೆಳಗ್ಗೆ ಗಣಪತಿ ಹೋಮ, ಬ್ರಹ್ಮ ಕಳಶ ಪೂಜೆ, ಮಿಥುನ ಲಗ್ನದಲ್ಲಿ ಪ್ರತಿಷ್ಠೆ, ಕಲಶಾಭಿಷೇಕ, ಮಧ್ಯಾಹ್ನ ಮಹಾಪೂಜೆ, ಪ್ರಾರ್ಥನೆ, ಪ್ರಸಾದ ವಿತರಣೆ ಹಾಗೂ ಮಧ್ಯಾಹ್ನ ಅನ್ನ ಸಂತರ್ಪಣೆ ನಡೆಯಿತು. ಮಡಿಕೇರಿ ಕ್ಷೇತ್ರದ ಶಾಸಕ ಡಾ.ಮಂತರ್ ಗೌಡ ಸೇರಿದಂತೆ ನೂರಾರು ಭಕ್ತರು ಪ್ರತಿಷ್ಠಾಪನೆ ವಿಧಿ ವಿಧಾನಗಳಲ್ಲಿ ಪಾಲ್ಗೊಂಡಿದ್ದರು. ದೇವಾಲಯ ಸಮಿತಿ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಅರಮಣಮಾಡ ಕ್ರಿಕೆಟ್ ನಮ್ಮೆಯಲ್ಲಿ 11 ತಂಡಗಳು ಗೆಲುವು

ಗೋಣಿಕೊಪ್ಪ, ಏ.27– ವಿಜಯಲಕ್ಷ್ಮಿ ಕಾಲೇಜು ಮತ್ತು ಸರ್ಕಾರಿ ಪ್ರಾಥಮಿಕ ಶಾಲಾ ಮೈದಾನದಲ್ಲಿ ಅರಮಣಮಾಡ ಒಕ್ಕ ಮತ್ತು ಕೊಡವ ಕ್ರಿಕೆಟ್ ಅಕಾಡೆಮಿ ಆಯೋಜಿಸಿರುವ ಅರಮಣಮಾಡ ಕ್ರಿಕೆಟ್ ನಮ್ಮೆಯಲ್ಲಿ 11 ತಂಡಗಳು ಗೆಲುವು ಪಡೆದವು.

ಮಹಿಳಾ ವಿಭಾಗ; ಮಣವಟ್ಟೀರಕ್ಕೆ ಅಚ್ಚಕಾಳೇರ ವಿರುದ್ಧ 32 ರನ್‌ಗಳ ಗೆಲುವು ದಕ್ಕಿತು. ಮಣವಟ್ಟೀರ 5 ವಿಕೆಟ್ ನಷ್ಟಕ್ಕೆ 62 ರನ್, ಅಚ್ಚಕಾಳೇರ 2 ವಿಕೆಟ್‌ಗೆ 30 ರನ್ ದಾಖಲಿಸಿತು. ನಂದೇಟಿರಕ್ಕೆ ಕಟ್ಟೇರ (ಅರಮೇರಿ) ವಿರುದ್ಧ 2 ರನ್‌ಗಳ ರೋಚಕ ಗೆಲುವು ದೊರೆಯಿತು. ನಂದೇಟಿರ 2 ವಿಕೆಟ್ ನಷ್ಟಕ್ಕೆ 33 ರನ್ ದಾಖಲಿಸಿತು. ಕಟ್ಟೇರ 6 ವಿಕೆಟ್ ನಷ್ಟಕ್ಕೆ 31 ರನ್ ಗಳಿಸಲಷ್ಟೆ ಶಕ್ತವಾಯಿತು.

ಮಾಪಣಮಾಡ ತಂಡಕ್ಕೆ ಕೊಕ್ಕೇಂಗಡ ವಿರುದ್ಧ 21 ರನ್‌ಗಳ ಜಯ ಲಭಿಸಿತು. ಮಾಪಣಮಾಡ ನೀಡಿದ 68 ರನ್ ಗುರಿಯನ್ನು ಮುಟ್ಟುವಲ್ಲಿ ಕೊಕ್ಕೇಂಗಡ ಎಡವಿತು. ವಿಕೆಟ್ ನಷ್ಟವಿಲ್ಲದೆ 47 ರನ್ ಗಳಿಸಿ ಸೋಲಿಗೆ ಶರಣಾಯಿತು.

ಪುರುಷರ ವಿಭಾಗ ; ಪಟ್ಟಡಕ್ಕೆ ಬಾಚೀರ ವಿರುದ್ಧ 7 ವಿಕೆಟ್‌ಗಳ ಜಯ ದೊರೆಯಿತು. ಬಾಚೀರ 1 ವಿಕೆಟ್ ನಷ್ಟಕ್ಕೆ 91 ರನ್ ಗಳಿಸಿತು. ಬಾಚೀರ ರಾಜು 24, ಸ್ವಾಗತ್ 24 ರನ್ ಗಳಿಸಿದರು. ಪೋರುಡಾವು ಮಾತುಂಡವನ್ನು 8 ವಿಕೆಟ್‌ಗಳಿಂದ ಸೋಲಿಸಿತು. ಮಾತಂಡ 5 ವಿಕೆಟ್ ನಷ್ಟಕ್ಕೆ 58 ರನ್ ದಾಖಲಿಸಿತು. ಮಾತಂಡ ಬಿದ್ದಪ್ಪ 19, ವಿಮರ್ಷ್ 15 ರನ್ ಸೇರಿಸಿದರು. ಪೋರಂಗಡ ಭರತ್ 27 ರನ್ ನೆರವಿನಿಂದ 2 ವಿಕೆಟ್ ಕಳೆದುಕೊಂಡು 10 ಚೆಂಡು ಉಳಿದಿರುವಂತೆ ಗೆಲುವು ಪಡೆದುಕೊಂಡಿತು.

ದೇಯಂಡಕ್ಕೆ ಕೋಣೇರಿರ ವಿರುದ್ಧ 94 ರನ್‌ಗಳ ಭರ್ಜರಿ ಗೆಲುವು ದೊರೆಯಿತು. ದೇಯಂಡ 2 ವಿಕೆಟ್ ಕಳೆದುಕೊಂಡು 193 ರನ್ ದಾಖಲಿಸಿತು. ಕೋಣೇರಿರ 5 ವಿಕೆಟ್ ನಷ್ಟಕ್ಕೆ 99 ರನ್‌ಗಳಿಗೆ ಸೋಲೊಪ್ಪಿಕೊಂಡಿತು. ದೇಯಂಡ ಸಂಜು 153 ರನ್ ಸಿಡಿಸಿದರು. ಚಟ್ಟಂಡ 19 ರನ್‌ಗಳಿಂದ ಅಮ್ಮಣಕುಟ್ಟಂಡ ತಂಡವನ್ನು ಮಣಿಸಿತು. ಚಟ್ಟಂಡ 4 ವಿಕೆಟ್‌ಗೆ 133 ರನ್, ಅಮ್ಮಣಕುಟ್ಟಂಡವು 5 ವಿಕೆಟ್ ಕಳೆದುಕೊಂಡು 115 ರನ್‌ಗಳಷ್ಟೆ ದಾಖಲಿಸಿತು.

ಕೈಬಿಲೀರಕ್ಕೆ ಪಡಿಯೇಟಿರ ವಿರುದ್ಧ 9 ವಿಕೆಟ್‌ಗಳ ಜಯ ದೊರೆಯಿತು. ಪಡಿಯೇಟಿರ 6 ವಿಕೆಟ್‌ಗೆ 59 ರನ್, ಕೈಬಿಲೀರ 3.2 ಓವರ್‌ಗಳಲ್ಲಿ 1 ವಿಕೆಟ್ ನಷ್ಟಕ್ಕೆ ಗುರಿ ಮುಟ್ಟಿತು. ಕಾಂಚೇರಿರ ತಂಡಕ್ಕೆ ಹೊಟ್ಟೇಂಗಡ ವಿರುದ್ಧ 10 ವಿಕೆಟ್‌ಗಳ ಭರ್ಜರಿ ಗೆಲುವು ದೊರೆಯಿತು. ಹೊಟ್ಟೇಂಗಡ 5 ವಿಕೆಟ್‌ಗೆ 91 ರನ್ ಗಳಿಸಿತು. ಕಾಂಚೇರೀರ 4.5 ಓವರ್‌ಗಳಲ್ಲಿ ಕೀರ್ತನ್ ಬಾರಿಸಿದ 66 ರನ್‌ಗಳ ಕಾಣಿಕೆಯಿಂದ ಗೆದ್ದು ಬೀಗಿತು.

ಚೀಯಣಮಾಡಕ್ಕೆ ಕೊಕ್ಕೇಂಗಡ ವಿರುದ್ಧ 10 ವಿಕೆಟ್‌ಗಳ ಭರ್ಜರಿ ಗೆಲುವು ದೊರೆಯಿತು. ಕೊಕ್ಕೇಂಗಡ ಜಗತ್ 20, ದಿನು 20 ರನ್‌ಗಳ ನೆರವಿನಿಂದ 8 ವಿಕೆಟ್ ನಷ್ಟಕ್ಕೆ 68 ರನ್ ದಾಖಲಿಸಿತು.

ಶ್ರೀ ಕಾವೇರಿ ಆಶ್ರಮದ ಶತಾಯುಷಿ ವಿವೇಕಾನಂದ ಶರಣ ಸ್ವಾಮೀಜಿ ನಿಧನ

ವಿರಾಜಪೇಟೆ, ಏ.27– ವಿರಾಜಪೇಟೆಯ



ಅಪ್ಪಯ್ಯ ಸ್ವಾಮಿ ರಸ್ತೆಯಲ್ಲಿರುವ ಶ್ರೀ ಕಾವೇರಿ ಆಶ್ರಮದ ಶತಾಯುಷಿ ವಿವೇಕಾನಂದ ಶರಣ ಸ್ವಾಮಿ(102) ಅವರು ಶುಕ್ರವಾರ ರಾತ್ರಿ ಬ್ರಹ್ಮಲೀನ (ದೇಹತ್ಯಾಗ) ರಾಗಿದ್ದಾರೆ. ಕಳೆದ ಹಲವಾರು ವರ್ಷಗಳಿಂದ ಆಶ್ರಮದಲ್ಲಿ ಧಾರ್ಮಿಕ ಕಾರ್ಯಗಳನ್ನು ನಿತ್ಯ ನಿರಂತರವಾಗಿ ನಡೆಸುತ್ತ ಬಂದಿದ್ದರು.

ವಿವೇಕಾನಂದ ಶರಣ ಸ್ವಾಮೀಜಿ ಸನ್ಯಾಸಿ ದೀಕ್ಷೆ ಪಡೆದುಕೊಂಡಿದ್ದರು, ಸುಮಾರು 70 ವರ್ಷಗಳಿಂದಲೂ ಕಾವೇರಿ ಆಶ್ರಮದ ಅಭಿವೃದ್ಧಿಗೆ ಶ್ರಮಿಸುತ್ತಾ ಧಾರ್ಮಿಕ ಕಾರ್ಯಗಳು, ಕಲಾವಿದರಿಗೆ ಆಶ್ರಯ ನೀಡಿದ್ದರು. ಆಶ್ರಮದಲ್ಲಿ ನಿತ್ಯ ಮುಂಜಾನೆ ಯೋಗಬ್ಯಾಸ ನಡೆಯುತ್ತಿದ್ದು ಆಶ್ರಮದ ವತಿಯಿಂದ ಅನೇಕ ವಿದ್ಯಾರ್ಥಿಗಳಿಗೆ ಆಶ್ರಯದಾತರಾಗಿದ್ದರು. ಕೊಡಗಿನ ತಲಕಾವೇರಿಯಲ್ಲಿ ಶ್ರೀ ಕಾವೇರಿ ಸಂಕ್ರಮಣದ ಸಂದರ್ಭ ಶ್ರೀ ಕಾವೇರಿ ತೀರ್ಥ ತಂದು ಆಶ್ರಮದಲ್ಲಿ ಪೂಜೆ ಸಲ್ಲಿಸಿ ಬಳಿಕ ಭಕ್ತಾದಿಗಳಿಗೆ ಹಾಗೂ ಸಾರ್ವಜನಿಕರಿಗೆ ತೀರ್ಥ ವಿತರಣೆ ಮಾಡುತ್ತಿದ್ದರು.

ಅವರು ಧಾರ್ಮಿಕ ಕಾರ್ಯಗಳಿಗೆ ಆದಾರ ಸ್ಥಂಭವಾಗಿದ್ದರು. ಶರಣು ಸ್ವಾಮಿಜೀ ಅವರು ಇತ್ತೀಚೆಗೆ ಅನಾರೋಗ್ಯಕ್ಕೆ ತುತ್ತಾಗಿದ್ದರು. ಅವರ ಅಂತ್ಯಕ್ರಿಯೆ ಇಂದು ಶನಿವಾರ ಆಶ್ರಮದ ಆವರಣದಲ್ಲಿ ನಡೆಯಿತು.

ಚಾಮರಾಜನಗರ ಲೋಕಸಭಾ ಕ್ಷೇತ್ರದಲ್ಲಿ ಶೇ.76.81 ರಷ್ಟು ಮತದಾನ

ಚಾಮರಾಜನಗರ, ಏ.27– ಲೋಕಸಭಾ ಸಾರ್ವತ್ರಿಕ ಚುನಾವಣೆ–2024ರ ಸಂಬಂಧ 22–ಚಾಮರಾಜನಗರ (ಪ.ಜಾ) ಲೋಕಸಭಾ ಕ್ಷೇತ್ರವ್ಯಾಪ್ತಿಯಲ್ಲಿ ಶೇ. 76.81 ರಷ್ಟು ಮತದಾನವಾಗಿದ್ದು, ಅಂತಿಮ ಮತದಾನ ವಿವರ ಇಂತಿದೆ.

ಲೋಕಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಒಟ್ಟು 8,78,702 ಪುರುಷರು, 8,99,501 ಮಹಿಳೆಯರು, 107 ಇತರರು ಸೇರಿದಂತೆ ಒಟ್ಟು 17,78,310 ಮತದಾರರಿದ್ದಾರೆ. ಈ ಪೈಕಿ 6,82,961 ಪುರುಷರು, 6,82,952 ಮಹಿಳೆಯರು, 31 ಇತರೆ ಮಂದಿ ಸೇರಿದಂತೆ ಒಟ್ಟು 13,65,944 ಮತದಾರರು ತಮ್ಮ ಹಕ್ಕು ಚಲಾಯಿಸಿದ್ದಾರೆ.

ಹೆಚ್.ಡಿ. ಕೋಟೆ ವಿಧಾನಸಭಾ ಕ್ಷೇತ್ರದಲ್ಲಿ 1,14,041 ಪುರುಷರು, 1,14,560 ಮಹಿಳೆಯರು, 12 ಇತರರು ಸೇರಿದಂತೆ ಒಟ್ಟು 2,28,613 ಮತದಾರರಿದ್ದಾರೆ. ಇವರಲ್ಲಿ 88,146 ಪುರುಷರು, 87,738 ಮಹಿಳೆಯರು, 7 ಮಂದಿ ಇತರರು ಸೇರಿದಂತೆ ಒಟ್ಟು 1,75,891 ಮತದಾರರು ಮತದಾನ ಮಾಡಿದ್ದಾರೆ.

ನಂಜನಗೂಡು ವಿಧಾನಸಭಾ ಕ್ಷೇತ್ರದಲ್ಲಿ 1,10,369 ಪುರುಷರು, 1,12,381 ಮಹಿಳೆಯರು, 7 ಇತರರು ಸೇರಿದಂತೆ ಒಟ್ಟು 2,22,757 ಮತದಾರರಿದ್ದಾರೆ. ಈ ಪೈಕಿ 86,450 ಪುರುಷರು, 85,112 ಮಹಿಳೆಯರು, 3 ಮಂದಿ ಇತರರು ಸೇರಿದಂತೆ ಒಟ್ಟು 1,71,565 ಮತದಾರರು ಮತ ಚಲಾಯಿಸಿದ್ದಾರೆ.

ಅಂತಿಮ ಮತದಾನದ ವಿವರ



ವರುಣ ವಿಧಾನಸಭಾ ಕ್ಷೇತ್ರದಲ್ಲಿ 1,19,545 ಪುರುಷರು, 1,21,391 ಮಹಿಳೆಯರು, 13 ಇತರರು ಸೇರಿದಂತೆ ಒಟ್ಟು 2,40,949 ಮತದಾರರಿದ್ದಾರೆ. ಇವರಲ್ಲಿ 95,228 ಪುರುಷರು, 93,806 ಮಹಿಳೆಯರು, 6 ಇತರರು ಸೇರಿದಂತೆ ಒಟ್ಟು 1,89,040 ಮತದಾರರು ಮತ ಚಲಾಯಿಸಿದ್ದಾರೆ.

ಟಿ.ನರಸೀಪುರ ವಿಧಾನಸಭಾ ಕ್ಷೇತ್ರದಲ್ಲಿ 1,03,121 ಪುರುಷರು, 1,06,413 ಮಹಿಳೆಯರು, 13 ಇತರರು ಸೇರಿದಂತೆ ಒಟ್ಟು 2,09,547 ಮತದಾರರಿದ್ದಾರೆ. ಇವರಲ್ಲಿ 77,851 ಪುರುಷರು, 78,061 ಮಹಿಳೆಯರು, 1 ಇತರರು ಸೇರಿದಂತೆ ಒಟ್ಟು 1,55,913 ಮತದಾರರು ಮತ ಚಲಾಯಿಸಿದ್ದಾರೆ.

ಹನೂರು ವಿಧಾನಸಭಾ ಕ್ಷೇತ್ರದಲ್ಲಿ 1,12,880 ಪುರುಷರು, 1,11,793 ಮಹಿಳೆಯರು, 10 ಇತರರು ಸೇರಿದಂತೆ ಒಟ್ಟು 2,24,683 ಮತದಾರರಿದ್ದಾರೆ. ಇವರಲ್ಲಿ 80,972 ಪುರುಷರು, 80669 ಮಹಿಳೆಯರು, 3 ಇತರರು ಸೇರಿದಂತೆ ಒಟ್ಟು 1,61,644 ಮತದಾರರು ಮತ ಚಲಾಯಿಸಿದ್ದಾರೆ.

ಕೊಳ್ಳೇಗಾಲ ವಿಧಾನಸಭಾ ಕ್ಷೇತ್ರದಲ್ಲಿ 1,08,056 ಪುರುಷರು, 1,11,988 ಮಹಿಳೆಯರು, 21 ಇತರರು ಸೇರಿದಂತೆ ಒಟ್ಟು 2,20,065 ಮತದಾರರಿದ್ದಾರೆ. ಇವರಲ್ಲಿ 81,512 ಪುರುಷರು, 82,279 ಮಹಿಳೆಯರು, 8 ಇತರರು ಸೇರಿದಂತೆ ಒಟ್ಟು 1,63,799 ಮತದಾರರು ಮತ ಚಲಾಯಿಸಿದ್ದಾರೆ.

ಚಾಮರಾಜನಗರ ವಿಧಾನಸಭಾ ಕ್ಷೇತ್ರದಲ್ಲಿ 1,04,903 ಪುರುಷರು, 1,10,517 ಮಹಿಳೆಯರು, 15 ಇತರರು ಸೇರಿದಂತೆ ಒಟ್ಟು 2,15,435 ಮತದಾರರಿದ್ದಾರೆ. ಇವರಲ್ಲಿ 84,293 ಪುರುಷರು, 85,701 ಮಹಿಳೆಯರು, 1 ಇತರರು ಸೇರಿದಂತೆ ಒಟ್ಟು 1,69,995 ಮತದಾರರು ಮತ ಚಲಾಯಿಸಿದ್ದಾರೆ.

ಗುಂಡ್ಲುಪೇಟೆ ವಿಧಾನಸಭಾ ಕ್ಷೇತ್ರದಲ್ಲಿ 1,05,787 ಪುರುಷರು, 1,10,458 ಮಹಿಳೆಯರು, 16 ಇತರರು ಸೇರಿದಂತೆ ಒಟ್ಟು 2,16,261 ಮತದಾರರಿದ್ದಾರೆ. ಇವರಲ್ಲಿ 88,509 ಪುರುಷರು, 89,586 ಮಹಿಳೆಯರು, 2 ಇತರರು ಸೇರಿದಂತೆ ಒಟ್ಟು 1,78,097 ಮತದಾರರು ಮತ ಚಲಾಯಿಸಿದ್ದಾರೆ ಎಂದು 22–ಚಾಮರಾಜನಗರ (ಪ.ಜಾ) ಲೋಕಸಭಾ ಕ್ಷೇತ್ರದ ಚುನಾವಣಾಧಿಕಾರಿ ಹಾಗೂ ಜಿಲ್ಲಾಧಿಕಾರಿ ಶಿಲ್ಪನಾಗ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕ್ಷೇತ್ರಾದ್ಯಂತ ಸೋಲು–ಗೆಲುವಿನ ಲೆಕ್ಕಾಚಾರ ಶುರು

ಚಾಮರಾಜನಗರ, ಏ.27– ಲೋಕಸಭಾ ಚುನಾವಣೆಯ ಮತದಾನದ ಪ್ರಕ್ರಿಯೆಯು ಮುಕ್ತಾಯಗೊಂಡ ಬೆನ್ನಲ್ಲೇ ಕ್ಷೇತ್ರ ವ್ಯಾಪ್ತಿಯ ಎಲ್ಲಾ 8 ವಿಧಾನಸಭಾ ಕ್ಷೇತ್ರಗಳಾದ್ಯಂತ ಸೋಲು–ಗೆಲುವಿನ ಲೆಕ್ಕಾಚಾರ ಚರ್ಚೆ ರೂಪದಲ್ಲಿ ಎಲ್ಲೆಡೆ ಮಾರ್ದನಿಸುತ್ತಿದೆ.

ಮತದಾನ ಮುಗಿದರೂ ಜನರು ಇನ್ನೂ ಅದರ ಗುಂಗಿನಿಂದ ಹೊರ ಬಂದಿಲ್ಲ. ಅಂಗಡಿ–ಮುಂಗಟ್ಟು, ಹೊಟೇಲ್, ರಸ್ತೆ, ಬಸ್ ನಿಲ್ದಾಣ, ಪಾರ್ಕ್ ಸೇರಿದಂತೆ ಎಲ್ಲೇ ನಾಲ್ಕು ಜನ ಸೇರಿದರೂ ಚುನಾವಣೆಯದೇ ಮಾತು. ಮತದಾನ ಹೇಗೆ ನಡೆದಿದೆ?, ಯಾರ ಪರವಾಗಿ ಅಧಿಕ ಮತಗಳು ಚಲಾವಣೆಯಾಗಿವೆ?, ಯಾರು ಗೆಲ್ಲುತ್ತಾರೆ? ಎಂಬ ಪ್ರಶ್ನೆಗಳು ಎಲ್ಲೆಡೆ ಗರಿಗೆದರುತ್ತಿವೆ.

ಚಾಮರಾಜನಗರ ಲೋಕಸಭಾ ಕ್ಷೇತ್ರದ ಚುನಾವಣಾ ಕಣದಲ್ಲಿದ್ದ ಒಟ್ಟು 14 ಅಭ್ಯರ್ಥಿಗಳ ಭವಿಷ್ಯ ಏನಾಗಲಿದೆ ಎಂಬ ಲೆಕ್ಕಾಚಾರ ಮುನ್ನಲೆಗೆ ಬಂದಿದ್ದು, ಗ್ರಾಮೀಣ ಪ್ರದೇಶಗಳು ಸೇರಿದಂತೆ ಹಲವೆಡೆ ಬೆಟ್ಟಿಂಗ್ ನಡೆಯುತ್ತಿದೆ. ಪ್ರಮುಖವಾಗಿ ಚಾಮರಾಜನಗರ, ವರುಣಾ ಹಾಗೂ ತಿ. ನರಸೀಪುರ ವಿಧಾನಸಭಾ ಕ್ಷೇತ್ರಗಳಲ್ಲಿ ಯಾವ ಪಕ್ಷಕ್ಕೆ ಹೆಚ್ಚು ಮತದಾನವಾಗಿದೆ ಎಂಬುದು ತೀವ್ರ ಕುತೂಹಲ ಮೂಡಿಸಿದೆ. ಪ್ರಸ್ತುತ ಎಲ್ಲರ ಚಿತ್ತ ಜೂನ್ 4ರ ಮತ ಎಣಿಕೆಯತ್ತ ಕೇಂದ್ರಿಕೃತಗೊಂಡಿದೆ.

ಜಿಲ್ಲಾಡಳಿತ ಮತ ಎಣಿಕೆಗೆ ಎಲ್ಲಾ ರೀತಿಯ ಸಿದ್ಧತೆಯನ್ನು ಮಾಡಿಕೊಂಡಿದ್ದು, ನಗರದ ಹೊರವಲಯದ ಬೇಡರಪುರದಲ್ಲಿರುವ ಸರ್ಕಾರಿ ಎಂಜಿನಿಯರಿಂಗ್ ಕಾಲೇಜಿನಲ್ಲಿ ಎಣಿಕೆ ಕಾರ್ಯ ನಡೆಯಲಿದೆ.

ಬೂತ್ ಮಟ್ಟದಲ್ಲಿ ಲೆಕ್ಕಾಚಾರ: ಚಾಮರಾಜನಗರ ಲೋಕಸಭಾ ವ್ಯಾಪ್ತಿಯ 8 ವಿಧಾನಸಭಾ ಕ್ಷೇತ್ರಗಳಿಗೆ ಶುಕ್ರವಾರ ಮತದಾನ ಅಂತ್ಯಗೊಳ್ಳುತ್ತಿದ್ದಂತೆ ಈಗ ಬೂತ್ ಮಟ್ಟದಲ್ಲಿ ನಡೆದಿರುವ ಶೇಕಡವಾರು ಮತ ಚಲಾವಣೆಯ ಲೆಕ್ಕವಿಟ್ಟುಕೊಂಡು ತಾಳೆ ಹಾಕುವ ಕೆಲಸದಲ್ಲಿ ರಾಜಕೀಯ ಪಕ್ಷಗಳ ಮುಖಂಡರು ಮಗ್ನರಾಗಿದ್ದಾರೆ.

ಇಡೀ ದಿನ ಕ್ಷೇತ್ರದ ಮತಗಟ್ಟೆಗಳಲ್ಲಿ ಕಾಣಿಸಿಕೊಂಡ ಮತದಾರರನ್ನೇ ನೋಡಿ ಲೆಕ್ಕ ಹಾಕುವ ಕೆಲಸವೂ ನಡೆದಿದೆ. ತಮ್ಮ ಪಕ್ಷದ ಮತದಾರರೆಂದು ಗುರುತಿಸಿಕೊಂಡಿರುವ ರಾಜಕೀಯ ಪಕ್ಷಗಳಿಗೆ ಶೇ.60ರಿಂದ 70ರಷ್ಟು ಲೆಕ್ಕ ಸಿಗುವುದೇ ಇಲ್ಲಿಂದ. ಇನ್ನುಳಿದ ಲೆಕ್ಕವನ್ನು ಚಲಾವಣೆಯಾದ ಮತಗಳ ಆಧಾರದ ಮೇಲೆ ಹಾಕುತ್ತಾರೆ. ಹೀಗಾಗಿ ಬೂತ್‌ಮಟ್ಟದಲ್ಲಿ ಬೆಳಗ್ಗೆಯಿಂದ ಸಂಜೆಯವರೆಗೂ ಮತದಾರರ ಪಟ್ಟಿ ಹಿಡಿದು ಕುಳಿತಿದ್ದ ಪಕ್ಷದ ಕಾರ್ಯಕರ್ತರು ಕೊಡುವ ಲೆಕ್ಕದ ಮೇಲೆ ಅರ್ಥಿಗಳು ಸೋಲು–ಗೆಲುವಿನ ಲೆಕ್ಕ ಹಾಕುತ್ತಾರೆ.

ಜೊತೆಗೆ ತಟಸ್ಥ ಮತದಾರರೆಂದು ಗುರುತಿಸಿಕೊಂಡಿರುವರರ ಸ್ಪಂದನೆ, ಯಾವ ಪಕ್ಷ, ಯಾವ ಅಭ್ಯರ್ಥಿ ಪರವಾಗಿತ್ತೆಂಬುದನ್ನು ಅವರದೇ ಆದ ಮೂಲಗಳು ಕೊಡುವ ವರದಿಗಳ ಆಧಾರದ ಮೇಲೆ ಅಭ್ಯರ್ಥಿಗಳು ಲೆಕ್ಕಾಚಾರ ಮಾಡುತ್ತಾರೆ. ಈ ರೀತಿ ನಾನಾ ಲೆಕ್ಕಾಚಾರಗಳು ಮತ ಎಣಿಕೆವರೆಗೂ ನಡೆಯುತ್ತಲೇ ಇರುತ್ತವೆ.

ದೇವಸ್ಥಾನಗಳ ಭೇಟಿ: ಮತದಾನ ಮುಕ್ತಾಯಗೊಂಡ ಬೆನ್ನಲ್ಲೇ ಅಭ್ಯರ್ಥಿಗಳು ಜಿಲ್ಲೆಯ ಪ್ರಮುಖ ದೇವಾಲಯಗಳಿಗೆ ಭೇಟಿ ನೀಡುವ ಮೂಲಕ ದೇವರ ಮೊರೆ ಹೋಗಿದ್ದಾರೆ. ಕೆಲವು ಅಭ್ಯರ್ಥಿಗಳು ಹಾಗೂ ಅವರ ಬೆಂಬಲಿಗರು ದೇವಸ್ಥಾನಗಳಲ್ಲಿ ವಿಶೇಷ ಪೂಜೆ ಮಾಡಿಸುತ್ತಿದ್ದಾರೆ.

ಭಾರತೀಯ ಆಹಾರ ನಿಗಮ ಸಲಹಾ ಸಮಿತಿಗೆ ಅನಿಲ್ ಕುಮಾರ್ ನೇಮಕ

ಕೊಳ್ಳೇಗಾಲ, ಏ.27– ಭಾರತೀಯ ಆಹಾರ ನಿಗಮದ ಕರ್ನಾಟಕ ರಾಜ್ಯ ಸಮಿತಿಯ ಸಲಹಾ ಮಂಡಳಿಗೆ ನೂತನ ಸದಸ್ಯರಾಗಿ ತಾಲೂಕು ಪಂಚಾಯ್ತಿ ಮಾಜಿ ಸದಸ್ಯ ಅನಿಲ್ ಕುಮಾರ್ ನೇಮಕಗೊಂಡಿದ್ದಾರೆ



ಇತ್ತೀಚೆಗೆ ದೆಹಲಿಯ ಕೃಷಿ ಭವನದ ಭಾರತ ಸರ್ಕಾರದ ಕಾರ್ಯದರ್ಶಿ ಅಜಯ್ ಕುಮಾರ್ ಸಿಂಗ್ ಅವರು, ಅನಿಲ್ ಕುಮಾರ್ ನೇಮಕಾತಿ ಆದೇಶ ಹೊರಡಿಸಿದ್ದು, 2024ರಿಂದ 2026ರ ತನಕ ಸಲಹಾ ಸಮಿತಿ ಸದಸ್ಯರಾಗಿ ಆಯ್ಕೆ ಮಾಡಿ ಆದೇಶಿಸಲಾಗಿದೆ. ಅನಿಲ್ ಅವರು ಕೊಳ್ಳೇಗಾಲ ತಾಪಂನ ಮಾಜಿ ಸದಸ್ಯರಾಗಿ, ಬಿಜೆಪಿ ಜಿಲ್ಲಾ ಕಾರ್ಯದರ್ಶಿಯಾಗಿ ಸಲ್ಲಿಸಿದ ಸೇವೆ ಗುರುತಿಸಿ ಬಿಜೆಪಿಯ ನಾಯಕರುಗಳ ಶಿಫಾರಸ್ಸಿನ ಮೇರೆಗೆ ಅನಿಲ್ ಕುಮಾರ್ ಅವರಿಗೆ ಈ ಸದಸ್ಯ ಸ್ಥಾನ ಒಲಿದಿದೆ.

ಭದ್ರತಾ ಕೊಠಡಿ ಸೇರಿದ ಮತಯಂತ್ರ


ವಿದ್ಯುನ್ಮಾನ ಮತಯಂತ್ರಗಳು, ವಿವಿ ಪ್ಯಾಟ್‌ಗಳನ್ನು ಬೇಡರಪುರದಲ್ಲಿರುವ ಸರ್ಕಾರಿ ಇಂಜಿನಿಯರಿಂಗ್ ಕಾಲೇಜಿನ ಭದ್ರತಾ ಕೊಠಡಿಗಳಲ್ಲಿ ಭಾರಿ ಭದ್ರತೆಯಲ್ಲಿ ಇರಿಸಲಾಗಿದೆ.

ಚಾಮರಾಜನಗರ, ಏ.27– ಚಾಮರಾಜನಗರ ಲೋಕಸಭಾ ಕ್ಷೇತ್ರದ 2000 ಮತಗಟ್ಟೆಗಳಲ್ಲಿ ಶುಕ್ರವಾರ ಮತದಾನ ಪೂರ್ಣಗೊಂಡ ಬಳಿಕ ಎಲ್ಲ ವಿದ್ಯುನ್ಮಾನ ಮತಯಂತ್ರಗಳು ಮತ್ತು ವಿವಿ ಪ್ಯಾಟ್‌ಗಳನ್ನು ತಂದು ಚಾಮರಾಜನಗರದ ಹೊರವಲಯದ ಬೇಡರಪುರದಲ್ಲಿರುವ ಸರ್ಕಾರಿ ಇಂಜಿನಿಯರಿಂಗ್ ಕಾಲೇಜಿನ ಭದ್ರತಾ ಕೊಠಡಿಗಳಲ್ಲಿ ಭಾರಿ ಭದ್ರತೆಯಲ್ಲಿ ಇರಿಸಲಾಗಿದೆ.

ಶುಕ್ರವಾರ ಬೆಳಗ್ಗೆ 7 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ಮತದಾನ ನಡೆಯಿತು. ಕ್ಷೇತ್ರದ ಒಟ್ಟು 17,78,310 ಮತದಾರರ ಪೈಕಿ 13,65,944 ಮಂದಿ ಮತ ಚಲಾಯಿಸಿದ್ದಾರೆ. ಒಟ್ಟು ಶೇಕಡ 76.81ರಷ್ಟು ದಾಖಲೆಯ ಮತದಾನವಾಗಿದೆ.

2000 ಮತಗಟ್ಟೆಗಳಲ್ಲಿ ನಡೆದ ಮತದಾನಕ್ಕೆ 2,559 ಬ್ಯಾಲೆಟ್ ಯೂನಿಟ್ (ಬಿಯು), 2,618 ಕಂಟ್ರೋಲ್ ಯೂನಿಟ್ (ಸಿಯು), 2,792 ವಿವಿ ಪ್ಯಾಟ್ ಹಂಚಿಕೆ ಮಾಡಲಾಗಿದೆ. ಜಿಲ್ಲೆಯ ಒಟ್ಟು 983 ಮತಗಟ್ಟೆಗಳಿಗೆ 1,196 ಪಿ.ಆರ್.ಒ., 1,196 ಎ.ಪಿ.ಆರ್.ಒ., 2,392 ಪಿ.ಒ ಸೇರಿದಂತೆ ಒಟ್ಟು 4,784 ಅಧಿಕಾರಿ ಸಿಬ್ಬಂದಿ ನಿಯೋಜಿಸಲಾಗಿತ್ತು.

ಭಾರಿ ಭದ್ರತೆ: ಡಿಮಸ್ಟರಿಂಗ್ ಕೇಂದ್ರಗಳಿಂದ ಬಿಗಿ ಪೊಲೀಸ್ ಭದ್ರತೆಯಲ್ಲಿ ಮತಯಂತ್ರ ಮತ್ತು ವಿವಿ ಪ್ಯಾಟ್‌ಗಳನ್ನು ಚಾಮರಾಜನಗರದ ಹೊರವಲಯದ ಬೇಡರಪುರದಲ್ಲಿರುವ ಸರ್ಕಾರಿ ಇಂಜಿನಿಯರಿಂಗ್ ಕಾಲೇಜಿಗೆ ತಂದು ಭದ್ರತಾ ಕೊಠಡಿಯಲ್ಲಿ ಇರಿಸಲಾಗಿದ್ದು, ಪೊಲೀಸರ ಸರ್ಪಗಾವಲಿನ ವ್ಯವಸ್ಥೆ ಮಾಡಲಾಗಿದೆ. ಜೂನ್ 4 ರಂದು ಮತ ಎಣಿಕೆ ನಡೆಯಲಿದ್ದು, ಚಾಮರಾಜನಗರ ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಿರುವ ವಿವಿಧ ಪಕ್ಷಗಳ ಒಟ್ಟು 14 ಅಭ್ಯರ್ಥಿಗಳ ಭವಿಷ್ಯ ನಿರ್ಧಾರವಾಗಲಿದೆ.

ವಿಜೃಂಭಣೆಯ ಆಂಜನೇಯ ಓಕಳಿ ಉತ್ಸವ



ಚಾಮರಾಜನಗರದ ಶಂಕರಪುರ ಬಡಾವಣೆಯ ಶ್ರೀರಾಮ ಮಂದಿರದಲ್ಲಿ ಶ್ರೀ ರಾಮನವಮಿ ಅಂಗವಾಗಿ ವಿಜೃಂಭಣೆಯಿಂದ ಆಂಜನೇಯ ಓಕಳಿ ನಡೆಯಿತು.

ಚಾಮರಾಜನಗರ ಏ.27– ಚಾಮರಾಜನಗರದ ಶಂಕರಪುರ ಬಡಾವಣೆಯ ಶ್ರೀರಾಮ ಮಂದಿರದಲ್ಲಿ ಶ್ರೀ ರಾಮ ನವಮಿ ಅಂಗವಾಗಿ ವಿಜೃಂಭಣೆಯಿಂದ ಆಂಜನೇಯ ಉತ್ಸವ ಮತ್ತು ಓಕಳಿ ಕಾರ್ಯಕ್ರಮ ಜರುಗಿತು.


ಶ್ರೀ ರಾಮ ಮಂದಿರದ ಮುಂಭಾಗ ಹಾಗೂ ಶಂಕರಪುರ ಬಡಾವಣೆಯ ರಸ್ತೆಯಲ್ಲಿ ಮನೆಮನೆಯ ಮುಂಭಾಗ ಬಣ್ಣದ ನೀರನ್ನು ಪರಸ್ಪರ ಎರಚುವ ಮೂಲಕ ಶ್ರೀ ಆಂಜನೇಯ ಓಕಳಿ ಕಾರ್ಯಕ್ರಮ ವೈಭವದಿಂದ ಜರಗಿತು.

ಅರಿಶಿನ,ಕುಂಕುಮ, ಶ್ರೀಗಂಧ ಪನ್ನೀರು, ತುಳಸಿ, ದಾಸಿವಾಳ, ಬೇವಿನ ಎಲೆ, ಮಾವಿನ ಎಲೆ, ಪಾರಿಜಾತ ಎಲೆ, ಸೀಬೆ ಎಲೆ, ಮಲ್ಲಿಗೆ ಎಲೆ ಮುಂತಾದ ಪರಿಸರ ಯುಕ್ತ ಎಲೆಗಳ ರಸ ಹಾಗೂ ಶುದ್ಧ ಬಣ್ಣದ ಓಕಳಿ ನೀರನ್ನು ತಯಾರಿಸಿ ಪ್ರತಿ ಮನೆಗಳಲ್ಲೂ ಪರಸ್ಪರ ವಯೋಮಾನ ಭೇದವಿಲ್ಲದೆ ಪರಸ್ಪರ ಎರಚಿ ಸಂಭ್ರಮದಿಂದ ಓಕಳಿಯ ಕಾರ್ಯಕ್ರಮ ನೋಡುಗರಿಗೆ ಹಾಗೂ ಭಾಗವಹಿಸಿದವರಿಗೆ ಪರಮಾನಂದವನ್ನು ಉಂಟುಮಾಡಿತು.

ಶ್ರೀ ರಾಮ ಮಂದಿರದ ಪ್ರತಾಪ್, ಸತೀಶ್, ಕೇಶವಮೂರ್ತಿ, ರಾಜಗೋಪಾಲ್, ವತ್ಸಲ ರಾಜಗೋಪಾಲ್, ರಂಗನಾಥ್ ವಿಜಯಲಕ್ಷ್ಮಿ, ಸರಸ್ವತಿ, ರಾಧಾಕೃಷ್ಣ ಸುದರ್ಶನ್ , ಮುರುಗೇಶ್, ನವೀನ ಉಮೇಶ್, ರವಿ, ಶ್ರೇಯಸ್ ರಘುನಾಥ್, ಕಾರ್ತಿಕ್, ರಮೇಶ್ ಶ್ರೀಮತಿ ಶರಣ್ಯ, ಶ್ರಾವ್ಯ ಋಗ್ವೇದಿ,ಸಾನಿಕ, ಸುಮನ್, ವರ್ಷಿಣಿ, ಶ್ರೇಯಸ್, ಮಾಲಾ, ವಾಣಿ ,ಪದ್ಮಿನಿ ಮೇಘನಾ, ಮಕ್ಕಳು ಹಾಗೂ ಯುವಕ ಮಿತ್ರರು ಇದ್ದರು.

ಮಾರಮ್ಮ ನಿಧನ

ಯಳಂದೂರು, ಏ.27– ತಾಲೂಕಿನ



ವೈ.ಕೆ.ಮೋಳೆ ಗ್ರಾಮದ ಉಪ್ಪಾರ ಬಡಾವಣೆಯ ನಿವಾಸಿಯಾದ ಆಧಿತ್ಯ ಮತ್ತು ಶ್ರೀ ದೊಡ್ಡಮ್ಮತಾಯಿ ಟ್ರೇಡರ್ ಮಾಲೀಕ ಇಂದ್ರಾಜು ರವರ ಅಜ್ಜಿ ಮತ್ತು ಕೆಪಿಟಿಸಿಎಲ್ ಇಂಜಿನಿಯರ್ ಎಂ.ವೆಂಕಟೇಶ್ ಕುಮಾರ್ ಅವರ ಅಜ್ಜಿ ಮತ್ತು ಗ್ರಾಪಂ ಸದಸ್ಯ ನಾಗಮ್ಮ ದೊಡ್ಡಪುಟ್ಟರವರ ಅಜ್ಜಿ ಮಾರಮ್ಮ (88) ಅನಾರೋಗ್ಯ ನಿಮಿತ್ತ ಶನಿವಾರ ನಿಧನರಾದರು.

ಮೃತರು ಐದು ಜನಪುತ್ರರು ಒಬ್ಬ ಪುತ್ರಿ ಸೇರಿದಂತೆ ಅಪಾರ ಬಂಧುಬಳಗವನ್ನು ಅಗಲಿದ್ದಾರೆ ಅಂತ್ಯಕ್ರಿಯೆಯು ಭಾನುವಾರ ಸ್ವಗ್ರಾಮದ ಮೃತರ ಜಮೀನಿನಲ್ಲಿ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬ ಮೂಲಗಳು ತಿಳಿಸಿದ್ದಾರೆ.

ಸದ್ಯ ಮೈಸೂರಲ್ಲಿ ಕುಡಿಯುವ ನೀರಿನ ಸಮಸ್ಯೆ ಇಲ್ಲ

ಕೆಆರ್‌ಎಸ್‌ನಲ್ಲಿ ನೀರು ಸಂಗ್ರಹ ಪರಿಶೀಲನೆ ನಂತರ ಜೆಪಿ ವಿಶ್ವಾಸ



ಕಾವೇರಿ ಕ್ರಿಯಾ ಸಮಿತಿ ಅಧ್ಯಕ್ಷ ಜಯಪ್ರಕಾಶ್ ಕೆಆರ್‌ಎಸ್ ಅಣೆಕಟ್ಟೆಗೆ ಭೇಟಿ ನೀಡಿದ್ದರು.

ಮೈಸೂರು, ಏ.27(ಎಸ್‌ಬಿಡಿ)– ಮೈಸೂರಿನಲ್ಲಿ ಸದ್ಯಕ್ಕೆ ಗಂಭೀರ ಕುಡಿಯುವ ನೀರಿನ ಸಮಸ್ಯೆ ಉಂಟಾಗುವುದಿಲ್ಲ ಎಂದು ಕಾವೇರಿ ಕ್ರಿಯಾ ಸಮಿತಿ ಅಧ್ಯಕ್ಷ ಎಸ್.ಜಯಪ್ರಕಾಶ್(ಜೆಪಿ) ಹೇಳಿದ್ದಾರೆ. ಕೆಆರ್‌ಎಸ್‌ಗೆ ಭೇಟಿ ನೀಡಿ, ನೀರಿನ ಪ್ರಮಾಣದ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಂದ ಮಾಹಿತಿ ಪಡೆದು ಅವರು ಪತ್ರಿಕಾ ಹೇಳಿಕೆ ನೀಡಿದ್ದಾರೆ.


ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳು ಅಣೆಕಟ್ಟೆಯಲ್ಲಿ 81.9 ಅಡಿ ನೀರಿದ್ದು ಸದ್ಯಕ್ಕೆ ಮೈಸೂರು ನಗರದಲ್ಲಿ ಕುಡಿಯುವ ನೀರಿಗೆ ಸಮಸ್ಯೆಯಾಗುವುದಿಲ್ಲ ಎಂದಿದ್ದಾರೆ. ಆದರೆ ಬೆಂಗಳೂರು ನಗರದ ಜನತೆ ಹಾಗೂ ಮಂಡ್ಯ ಜಿಲ್ಲೆ ರೈತರಿಗೆ ತುಂಬಾ ತೊಂದರೆಯಾಗಿರುವುದು ದುರದೃಷ್ಟಕರ ಎಂದು ಜೆಪಿ ಬೇಸರ ವ್ಯಕ್ತಪಡಿಸಿದ್ದಾರೆ. ತಮಿಳುನಾಡಿಗೆ ನೀರು ಹರಿಸುವ ಉದ್ದೇಶಕ್ಕಾಗಿಯೇ ಕೆಆರ್‌ಎಸ್ ಅಣೆಕಟ್ಟೆ ನಿರ್ಮಿಸಲಾಗಿದೆ ಎಂದು ಕಾವೇರಿ ನ್ಯಾಯ ಮಂಡಳಿ ಭಾವಿಸಿದಂತಿದೆ. ಆದ್ದರಿಂದಲೇ ಕರ್ನಾಟಕದ ಜನ, ರೈತರ ಹಿತದೃಷ್ಟಿ ಪರಿಗಣಿಸದೆ ಅವೈಜ್ಞಾನಿಕವಾಗಿ ಘನಘೋರ ತೀರ್ಪು ನೀಡುತ್ತಿದೆ. ಕಾವೇರಿ ನೀರಿನ ವಿಷಯವಾಗಿ ಶಾಶ್ವತ ಪರಿಹಾರಕ್ಕಾಗಿ ರಾಷ್ಟ್ರಪತಿ ಹಾಗೂ ಪ್ರಧಾನಮಂತ್ರಿಗಳಿಗೆ ಮನವಿ ಮಾಡಿದ್ದು, ಸಕಾರಾತ್ಮಕ ನಿರ್ಣಯಕ್ಕೆ ಆಗ್ರಹಿಸುತ್ತೇವೆ ಎಂದು ತಿಳಿಸಿದ್ದಾರೆ. ಕೆಆರ್‌ಎಸ್ ಭೇಟಿ ವೇಳೆ ಜಯಪ್ರಕಾಶ್ ಜೊತೆ ಜಿ.ನಾಗರಾಜು, ನಾಗೇಶ್ ಗೌಡ, ಸಂಜಯ್ ಅರಸ್ ಹಾಗೂ ಜನಾರ್ಧನ್ ಇದ್ದರು.

ಪ್ರಜ್ವಲ್ ರೇವಣ್ಣ ಅಶ್ಲೀಲ ವಿಡಿಯೋ ಪ್ರಕರಣದ ತನಿಖೆಗೆ ವಿಶೇಷ ತನಿಖಾ ತಂಡ ರಚನೆ

ಮುಖ್ಯಮಂತ್ರಿ ಸಿದ್ದರಾಮಯ್ಯ ಟ್ವೀಟ್ ಮೂಲಕ ಮಾಹಿತಿ

ಬೆಂಗಳೂರು, ಏ. 27– ಹಾಸನ ಸಂಸದ ಪ್ರಜ್ವಲ್ ರೇವಣ್ಣ ವಿಡಿಯೋ ಪ್ರಕರಣದ ತನಿಖೆಗೆ ವಿಶೇಷ ತನಿಖಾ ತಂಡ ರಚನೆಯಾಗಲಿದೆ. ರಾಜ್ಯ ಸರ್ಕಾರದಿಂದ ಇದೀಗ ಆದೇಶ ಹೊರಬಿದ್ದಿದೆ. ಪ್ರಜ್ವಲ್ ರೇವಣ್ಣ ಅವರದ್ದು ಎನ್ನಲಾದ ಅಶ್ಲೀಲ ವಿಡಿಯೋ ತುಣುಕುಗಳು ಈಗಾಗಲೇ ವಾಟ್ಸಾಪ್ ಸೇರಿದಂತೆ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿರುವುದು ಮೇಲ್ನೋಟಕ್ಕೆ ಕಂಡು ಬರುತ್ತಿದೆ. ಈ ಹಿನ್ನೆಲೆಯಲ್ಲಿ ಎಸ್‌ಐಟಿ ತನಿಖೆ ನಡೆಸುವಂತೆ ಮಹಿಳಾ ಆಯೋಗದ ಅಧ್ಯಕ್ಷೆ ಡಾ. ನಾಗಲಕ್ಷ್ಮಿ ಚೌಧರಿ ರಾಜ್ಯ ಸರ್ಕಾರಕ್ಕೆ ಪತ್ರ ಬರೆದಿದ್ದರು. ಈ ಹಿನ್ನೆಲೆಯಲ್ಲಿ ತನಿಖೆಗೆ ಸರ್ಕಾರ ವಿಶೇಷ ತನಿಖಾ ತಂಡ ರಚನೆ ಮಾಡಿದೆ. ಈ ಕುರಿತಂತೆ ಸಿಎಂ ಸಿದ್ದರಾಮಯ್ಯ ಟ್ವೀಟ್ ಮಾಡಿ, ಮಾಹಿತಿ ನೀಡಿದ್ದಾರೆ.

ಪ್ರಜ್ವಲ್ ರೇವಣ್ಣ ಅವರದ್ದು ಎನ್ನಲಾದ ವಿಡಿಯೋಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಇದರ ಬಗ್ಗೆ ಸೂಕ್ತ ತನಿಖೆ ಕೈಗೊಳ್ಳುವಂತೆ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ. ನಾಗಲಕ್ಷ್ಮಿ ಚೌಧರಿ ಸಿಎಂ ಸಿದ್ದರಾಮಯ್ಯ ಹಾಗೂ ಗೃಹಸಚಿವ ಡಾ. ಜಿ. ಪರಮೇಶ್ವರ್‌ಗೆ ಪತ್ರ ಬರೆದಿದ್ದರು. ಇದೀಗ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿರುವ ರಾಜ್ಯ ಸರ್ಕಾರ, ಇದರ ತನಿಖೆಗೆ ವಿಶೇಷ ತನಿಖಾ ತಂಡ ರಚಿಸಿದೆ.


Siddaramaiah
@siddaramaiah

ಪ್ರಜ್ವಲ್ ರೇವಣ್ಣ ಅವರ ಅಶ್ಲೀಲ ವಿಡಿಯೋ ಪ್ರಕರಣಕ್ಕೆ ಸಂಬಂಧಿಸಿದಂತೆ ವಿಶೇಷ ತನಿಖಾ ತಂಡ ರಚಿಸಲು ಸರ್ಕಾರ ತೀರ್ಮಾನಿಸಿದೆ.

ಹಾಸನ ಜಿಲ್ಲೆಯಲ್ಲಿ ಅಶ್ಲೀಲ ವೀಡಿಯೋ ತುಣುಕುಗಳು ಹರಿದಾಡುತ್ತಿದ್ದು, ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿರುವುದು ಮೇಲ್ನೋಟಕ್ಕೆ ಕಂಡು ಬರುತ್ತಿದೆ.
ಈ ಹಿನ್ನೆಲೆಯಲ್ಲಿ ಎಸ್.ಐ.ಟಿ ತನಿಖೆ ನಡೆಸುವಂತೆ ಮಹಿಳಾ ಆಯೋಗದ ಅಧ್ಯಕ್ಷರು ಸರ್ಕಾರಕ್ಕೆ ಪತ್ರ ಬರೆದಿದ್ದರು. ಅವರ ಮನವಿಗೆ ಸ್ಪಂದಿಸಿ ಈ ನಿರ್ಣಯ ಕೈಗೊಳ್ಳಲಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಟ್ವೀಟ್ ಮೂಲಕ ಮಾಹಿತಿ

ಟ್ವೀಟ್ ಮೂಲಕ ಮಾಹಿತಿ ನೀಡಿದ ಸಿಎಂ ಸಿದ್ದರಾಮಯ್ಯ: ಈ ಬಗ್ಗೆ ಸಿಎಂ ಸಿದ್ದರಾಮಯ್ಯ ಟ್ವೀಟ್ ಮಾಡಿ, ಅಧಿಕೃತವಾಗಿ ಮಾಹಿತಿ ನೀಡಿದ್ದಾರೆ. ಪ್ರಜ್ವಲ್ ರೇವಣ್ಣ ಅವರ ಅಶ್ಲೀಲ ವಿಡಿಯೋ ಪ್ರಕರಣಕ್ಕೆ ಸಂಬಂಧಿಸಿದಂತೆ ವಿಶೇಷ ತನಿಖಾ ತಂಡ ರಚಿಸಲು ಸರ್ಕಾರ ತೀರ್ಮಾನಿಸಿದೆ. ಹಾಸನ ಜಿಲ್ಲೆಯಲ್ಲಿ ಅಶ್ಲೀಲ ವೀಡಿಯೋ ತುಣುಕುಗಳು ಹರಿದಾಡುತ್ತಿದ್ದು, ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿರುವುದು ಮೇಲ್ನೋಟಕ್ಕೆ ಕಂಡು ಬರುತ್ತಿದೆ. ಈ ಹಿನ್ನೆಲೆಯಲ್ಲಿ ಎಸ್.ಐ.ಟಿ ತನಿಖೆ ನಡೆಸುವಂತೆ ಮಹಿಳಾ ಆಯೋಗದ ಅಧ್ಯಕ್ಷರು ಸರ್ಕಾರಕ್ಕೆ ಪತ್ರ ಬರೆದಿದ್ದರು. ಅವರ ಮನವಿಗೆ ಸ್ಪಂದಿಸಿ ಈ ನಿರ್ಣಯ ಕೈಗೊಳ್ಳಲಾಗಿದೆ ಎಂದು ಸಿಎಂ ಟ್ವೀಟ್ ಮಾಡಿದ್ದಾರೆ.

ಟೀಂ ಮೈಸೂರು ಸಸ್ಯ ಸಂರಕ್ಷಣೆ



ಮೈಸೂರು, ಏ.27(ಎಸ್‌ಪಿಎನ್)– ನಾವು ನೆಟ್ಟ ಸಸಿಗಳು ಮರವಾಗಬೇಕು. ಮೈಸೂರು ಹಸಿರು ನಗರವಾಗಬೇಕು ಎನ್ನುವ ದೃಷ್ಟಿಕೋನದಿಂದ ಟೀಂ ಮೈಸೂರು, ಗ್ರೀನ್ ಮೈಸೂರು ತಂಡದ ಸದಸ್ಯರು ಎಫ್.ಕೆ.ಇರಾನಿ ರಸ್ತೆಯಲ್ಲಿರುವ ಸುಮಾರು 50 ಗಿಡಗಳಿಗೆ ನೀರು ಹಾಕಿ, ಪೋಷಿಸುವ ಕಾರ್ಯಕ್ರಮ ಸತತ 11ನೇ ವಾರವೂ ಮುಂದುವರೆದಿದೆ.

ಸತತ ಐದು ವರ್ಷಗಳಿಂದ ಈ ಕಾರ್ಯ ಮುಂದುವರೆದಿದ್ದು, ಈ ಹಿಂದೆ ಮೈಸೂರಿನ ವಿಶ್ವ ಮಾನವ ಜೋಡಿ ರಸ್ತೆ, ರಿಂಗ್ ರಸ್ತೆ, ಕನಕದಾಸನಗರ, ದಟ್ಟಗಳ್ಳಿ, ಕೋರ್ಟ್ ರಸ್ತೆಗಳಲ್ಲಿ ಗಿಡ ನೆಟ್ಟು ಸತತ ಮೂರು ವರ್ಷಗಳ ಕಾಲ ನೀರು ಹಾಕಿ, ಪೋಷಣೆ ಮಾಡಿದ್ದೇವೆ. ಮೈಸೂರು ನಗರ ಹಸಿರು ನಗರವಾಗಿಸುವ ನಿಟ್ಟಿನಲ್ಲಿ ನಮ್ಮ ತಂಡ ಕೆಲಸ ಮಾಡುತ್ತಿದೆ ಎನ್ನುತ್ತಾರೆ ಟೀಂ ಮೈಸೂರು ತಂಡದ ಗೋಕುಲ್ ಗೋವರ್ಧನ್.

ಮೈಸೂರು–ಹುಣಸೂರು ರಸ್ತೆಯ ಕಲಾಮಂದಿರ ಮುಂಭಾಗದ ರಸ್ತೆಯಲ್ಲಿ ಕಳೆದೆರಡು ವರ್ಷಗಳ ಹಿಂದೆ ಸಸಿಗಳನ್ನು ನೆಟ್ಟು, ಈ ಗಿಡಗಳಿಗೆ ಬೇಸಿಗೆಯಲ್ಲಿ 2 ವರ್ಷ ನೀರು ಹಾಕಿ ಪೋಷಿಸಿದ್ದೇವೆ. ಕೆಲವರು ಪರಿಸರ ದಿನಾಚರಣೆ ದಿನದಂದು ಒಂದು ಗಿಡ ನೆಟ್ಟು, ನಂತರ ಆ ಗಿಡ ಬೆಳೆಯುತ್ತಿದೆಯೇ, ಇಲ್ಲವೇ ಎಂಬುದನ್ನು ಗಮನಿಸುವುದಿಲ್ಲ. ಆದರೆ, ನಮ್ಮ ತಂಡದ ಸದಸ್ಯರು ಕಡಿಮೆ ಗಿಡ ನೆಟ್ಟರೂ ಆ ಗಿಡಗಳು ಪೂರ್ಣ ಪ್ರಮಾಣದಲ್ಲಿ ಬೆಳೆಯುವವರೆಗೂ ನೀರು ಹಾಕಿ, ಪೋಷಿಸುವುದು ಧ್ಯೆಯವಾಗಿದೆ.

ಅಲ್ಲದೆ, ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜು ಮುಂಭಾಗದ ಸುಮಾರು 70 ಗಿಡಗಳನ್ನು ನೆಟ್ಟು ಪ್ರತಿ ಶನಿವಾರ, ಭಾನುವಾರ ಟ್ಯಾಂಕರ್‌ನಿಂದ ನೀರು ಹಾಕಿ, ಪೋಷಿಸುತ್ತಿದ್ದೇವೆ. ಈ ಗಿಡಗಳನ್ನು ಮೂರು ವರ್ಷಗಳವರೆಗೆ ಪೋಷಿಸುವುದು ನಮ್ಮ ಕರ್ತವ್ಯ ಎಂದು ಭಾವಿಸಿ, ನೀರು ಹಾಕುವ ಕಾರ್ಯ ಮುಂದುವರೆಸಿದ್ದೇವೆ. ಅಲ್ಲದೆ, ನಮ್ಮ ತಂಡದ ಕಾರ್ಯವನ್ನು ಮೆಚ್ಚಿ 75 ವರ್ಷದ ಹಿರಿಯರೊಬ್ಬರು ಕೈಜೋಡಿಸಿದ್ದಾರೆ.

ಮೈಸೂರಿನಲ್ಲಿ ಪರಿಸರ ಉಳಿಸುವ ನಿಟ್ಟಿನಲ್ಲಿ ಟೀಂ ಮೈಸೂರು ತಂಡದ ಅನಿಲ್ ಜೈನ್, ಹಿರಿಯಣ್ಣ, ಲಿಂಗರಾಜು, ಸತ್ಯನಾರಾಯಣ್, ಬಾಲು, ಸೃಜನ್, ತಿಲಕ್, ಮಂಜು, ರಾಘವೇಂದ್ರ, ಹೇಮಂತ್, ಜಯಂತ್, ಕು.ನೇಹ ನೈನಾ ಹಾಗೂ ಕಾವೇರಿ ಪ್ರತಿವಾರ ಸಾಥ್ ನೀಡುತ್ತಿದ್ದಾರೆ ಎಂದು ಗೋಕುಲ್ ಗೋವರ್ಧನ್ ಮಾಹಿತಿ ನೀಡಿದರು.

ಸದ್ಯದಲ್ಲೇ ಕತ್ತರಿ: ಒಂದು ವಿಷಾದಕರ ಸಂಗತಿ ಎಂದರೆ ಟೀಂ ಮೈಸೂರು ಬೆಳೆಸುತ್ತಿರುವ ಸಾಕಷ್ಟು ಗಿಡಗಳಿಗೆ ಕೆಲವೇ ವರ್ಷದಲ್ಲಿ ಕತ್ತರಿ ಬೀಳಲಿದೆ. ಕಾರಣ, ಇವರು ವಿದ್ಯುತ್ ಲೈನ್ ಅಡಿ ನೆಟ್ಟಿರುವ ಸಸಿಗಳು ಬೆಳೆಯುತ್ತಿದ್ದಂತೆ, ಅವು ವಿದ್ಯುತ್ ಲೈನ್‌ಗೆ ತಾಗುವುದರಿಂದ ಅನಿವಾರ್ಯವಾಗಿ ಕತ್ತರಿ ಪ್ರಯೋಗವಾಗಲಿದೆ. ಇದರ ಅರಿವಿದ್ದು, ಇಂತಹ ಸ್ಥಳಗಳಲ್ಲಿ ನೆಟ್ಟಿರುವುದರ ಸಾರ್ಥಕತೆ ಏನು? ಎಂದು ಜನ ಪ್ರಶ್ನಿಸುತ್ತಿದ್ದಾರೆ.

ನ್ಯಾಯಾಧೀಶರು, ನ್ಯಾಯವಾದಿಗಳು ರಥದ ಎರಡು ಚಕ್ರಗಳಿದ್ದಂತೆ

●ಕರ್ನಾಟಕ ಹೈಕೋರ್ಟ್ ನ್ಯಾಯಮೂರ್ತಿ ಎಂ.ಜಿ.ಉಮಾ ●ತಾಲೂಕು, ಜಿಲ್ಲಾ ಮಟ್ಟದ ನ್ಯಾಯಾಲಯಗಳ ನ್ಯಾಯಾಧೀಶರು, ನ್ಯಾಯವಾದಿಗಳ ಪಾತ್ರ ಹಿರಿದು



ಮೈಸೂರಿನ ಜಿಲ್ಲಾ ನ್ಯಾಯಾಲಯ ಆವರಣದ ಮೈಸೂರು ವಕೀಲರ ಸಂಘದಲ್ಲಿ ಶನಿವಾರ ಹಮ್ಮಿಕೊಂಡಿದ್ದ ವಾರ್ಷಿಕೋತ್ಸವ ಮತ್ತು ಸಂಗೀತ ಕಾರ್ಯಕ್ರಮವನ್ನು ಕರ್ನಾಟಕ ಹೈಕೋರ್ಟ್ ನ್ಯಾಯಮೂರ್ತಿಗಳಾದ ಎಂ.ಜಿ.ಉಮಾ ಉದ್ಘಾಟಿಸಿದರು.

ಮೈಸೂರು,ಏ.27(ಪಿಎಂ)– ನ್ಯಾಯಾಧೀಶರು ಮತ್ತು ನ್ಯಾಯವಾದಿಗಳು ಒಂದು ರಥದ ಎರಡು ಚಕ್ರಗಳಿದ್ದಂತೆ. ಈ ಇಬ್ಬರು ಅತ್ಯಂತ ಸಮರ್ಥ ಹಾಗೂ ಜವಾಬ್ದಾರಿಯಿಂದ ಕರ್ತವ್ಯ ನಿರ್ವಹಿಸಿ ನ್ಯಾಯದಾನ ಮಾಡಬೇಕು ಎಂದು ಕರ್ನಾಟಕ ಹೈಕೋರ್ಟ್ ನ್ಯಾಯಮೂರ್ತಿಗಳಾದ ಎಂ.ಜಿ.ಉಮಾ ಹೇಳಿದರು.

ಮೈಸೂರಿನ ಜಿಲ್ಲಾ ನ್ಯಾಯಾಲಯ ಆವರಣದ ಮೈಸೂರು ವಕೀಲರ ಸಂಘದ ಅಂಗಳದಲ್ಲಿ ಸಂಘದ ವತಿಯಿಂದ ಸಿವಿಲ್ ನ್ಯಾಯಾಲಯಗಳಿಗೆ ಬೇಸಿಗೆ ರಜೆ ಪ್ರಾರಂಭದ ಪ್ರಯುಕ್ತ ಶನಿವಾರ ಹಮ್ಮಿಕೊಂಡಿದ್ದ ವಾರ್ಷಿಕೋತ್ಸವ ಹಾಗೂ ಸಂಗೀತ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಸುಪ್ರಿಂಕೋರ್ಟ್ ಮತ್ತು ಹೈಕೋರ್ಟ್ ಮೆಟ್ಟಿಲೇರುವ ಪ್ರಕರಣಗಳು ಕೆಲವೇ ಕೆಲವು. ಏಕೆಂದರೆ ಶೇ.75ರಷ್ಟು ಕಕ್ಷಿದಾರರಿಗೆ ಆ ಮಟ್ಟಕ್ಕೆ ಹೋಗುವ ಚೈತನ್ಯ ಇರುವುದಿಲ್ಲ. ಆದ್ದರಿಂದ ತಾಲೂಕು ಮತ್ತು ಜಿಲ್ಲಾ ಹಂತದ ನ್ಯಾಯಾಲಯಗಳ ನ್ಯಾಯಾಧೀಶರು, ನ್ಯಾಯವಾದಿಗಳು ಅತ್ಯಂತ ಜವಾಬ್ದಾರಿಯಿಂದ ಕರ್ತವ್ಯ ನಿರ್ವಹಿಸಿ, ನ್ಯಾಯ ದಾನ ಮಾಡಬೇಕು ಎಂದರು.

ಪ್ರಕರಣಗಳಿಗೆ ಸಂಬಂಧಿಸಿದಂತೆ ಟ್ರಯಲ್ ಕೋರ್ಟ್‌ನಲ್ಲಿ (ತಾಲೂಕು, ಜಿಲ್ಲಾ ಹಂತದ ಕೋರ್ಟ್‌ಗಳು) ಹಾಕಿದ ಅಡಿಪಾಯವು ಸುಪ್ರೀಂಕೋರ್ಟ್‌ವರೆಗೆ ಹೋದರೂ ಬದಲಾಗಲು ಸಾಧ್ಯವಿಲ್ಲ. ವಕೀಲರ ಚಾಕಚಕ್ಯತೆಯಿಂದ ಪ್ರಕರಣ ತಿರುವು ಪಡೆಯಬಹುದು. ಇಲ್ಲವೇ ಕೆಲವೊಂದು ವಿಷಯಗಳನ್ನು ಕೆಳಹಂತದ ಕೋರ್ಟ್ ಗಮನಕ್ಕೆ ತೆಗೆದುಕೊಳ್ಳದ ಸಂದರ್ಭದಲ್ಲಿ ಪ್ರಕರಣ ಗೆಲ್ಲಬಹುದು. ಇದರ ಹೊರತಾಗಿ ಕೆಳಹಂತದ ಕೋರ್ಟ್‌ನಲ್ಲಿ ಹಾಕಿದಂತಹ ಅಡಿಪಾಯ, ಎವಿಡೆನ್ಸ್ (ಪುರಾವೆ) ಬದಲಾಗದು. ಆದ್ದರಿಂದ ತಾಲೂಕು ಮತ್ತು ಜಿಲ್ಲಾ ಕೋರ್ಟ್‌ಗಳಲ್ಲಿ ಕೆಲಸ ನಿರ್ವಹಿಸುವ ನ್ಯಾಯಾಧೀಶರು, ವಕೀಲರ ಜವಾಬ್ದಾರಿ ಅತ್ಯಂತ ಮಹತ್ವದ್ದು ಎಂದು ತಿಳಿಸಿದರು.

ಕಕ್ಷಿದಾರರಿಗೆ ಟ್ರಯಲ್ ಕೋರ್ಟ್‌ಗಳ ನ್ಯಾಯಾಧೀಶರು ಎಂದರೆ ಸುಪ್ರೀಂಕೋರ್ಟ್‌ನ ನ್ಯಾಯಮೂರ್ತಿಗಳೇ ಇದ್ದಂತೆ. ಏಕೆಂದರೆ ನ್ಯಾಯ ಬಯಸಿ ಮೊದಲು ಅವರು ಬರುವುದು ಅದೇ ನ್ಯಾಯಾಲಯಕ್ಕೆ ಇದನ್ನು ಗಮನಕ್ಕೆ ಇಟ್ಟುಕೊಂಡು ನ್ಯಾಯಾಧೀಶರು ಮತ್ತು ನ್ಯಾಯವಾದಿಗಳು ಅತ್ಯಂತ ಸಮನ್ವಯದಿಂದ ಕೆಲಸ ಮಾಡಿದರೆ ನ್ಯಾಯಾಂಗ ಸಂಸ್ಥೆಯಲ್ಲಿ ಕೆಲಸ ಮಾಡಿದ್ದಕ್ಕೆ ಒಂದು ಸಾರ್ಥಕತೆ ಬರಲಿದೆ ಎಂದರು.

ಭಾರತೀಯ ನ್ಯಾಯಾಂಗ ವ್ಯವಸ್ಥೆ ಎಂದರೆ ಒಬ್ಬ ಕಟ್ಟಕಡೆಯ ಸಾಮಾನ್ಯ ಮನುಷ್ಯನಿಗೂ ನ್ಯಾಯದಾನ ದೊರೆಯುತ್ತದೆ ಎಂಬ ಮಾತಿದೆ. ಅದು ವಾಸ್ತವದಲ್ಲಿ ಜಾರಿಗೊಳಿಸಲು ನಾವು ನಿಸ್ವಾರ್ಥತೆಯಿಂದ ಕೆಲಸ ಮಾಡಬೇಕಾಗುತ್ತದೆ. ಆ ಮೂಲಕ ನಮ್ಮ ನ್ಯಾಯಾಂಗದ ಶ್ರೇಷ್ಠತೆಯನ್ನು ಉಳಿಸಿ ಬೆಳೆಸುವುದು ನಮ್ಮ ಹೊಣೆಯಾಗಿದೆ. ಕೋರ್ಟ್‌ನಲ್ಲಿ ನಡೆದುಕೊಳ್ಳುವ ರೀತಿ, ವಾದ ಮಂಡಿಸುವ ರೀತಿ–ನೀತಿ ಬಗ್ಗೆ ಕಿರಿಯ ವಕೀಲರಿಗೆ ತಿಳುವಳಿಕೆ ಕೊಡುವ ಜವಾಬ್ದಾರಿ ಹಿರಿಯ ವಕೀಲರ ಮೇಲಿದೆ ಎಂದು ತಿಳಿಸಿದರು.

ಇಂದು ಬಹಳಷ್ಟು ಯುವಕ–ಯುವತಿಯರು ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ನ್ಯಾಯಾಧೀಶರಾಗಿ ನೇಮಕ ಆಗುತ್ತಿದ್ದಾರೆ. ಅದರಲ್ಲಿ ಬಹುಶಃ ಅರ್ಧಕ್ಕಿಂತಲೂ ಹೆಚ್ಚು ಯುವತಿಯರೇ ಆಗಿದ್ದಾರೆ. ನಮ್ಮ ಕಾಲದಲ್ಲಿ ಮಹಿಳೆಯರು ನ್ಯಾಯಾಧೀಶರಾಗುವುದು ಕಡಿಮೆ ಇತ್ತು. ನಾವೆಲ್ಲರೂ ಕೂಡಿ ಕೆಲಸ ಮಾಡಬೇಕು. ಭಾರತೀಯ ನ್ಯಾಯಾಂಗ ವ್ಯವಸ್ಥೆಯ ಮೇಲಿರುವ ನಂಬಿಕೆ–ವಿಶ್ವಾಸವನ್ನು ಉಳಿಸಿ ಬೆಳೆಸಬೇಕು ಎಂದರು.

ಕಿರಿಯ ವಕೀಲರು ಫ್ಯಾಕ್ಟ್ಸ್ ಅನ್ನು ಸಂಪೂರ್ಣವಾಗಿ ನೋಡಿಕೊಂಡು ಕೋರ್ಟ್‌ಗೆ ಬರಬೇಕು. ಲಾನಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಇದ್ದರೂ ಪರವಾಗಿಲ್ಲ. ಆದರೆ ಫ್ಯಾಕ್ಟ್ಸ್‌ನಲ್ಲಿ ಬಹಳಷ್ಟು ಸಿದ್ಧತೆ ಇರಬೇಕು. ಟ್ರಯಲ್ ಕೋರ್ಟ್‌ಗಳಲ್ಲಿ ಪ್ರಾಕ್ಟೀಸ್ ಮಾಡುವಂತಹ ವಕೀಲರಿಗೆ ಇಂದು ಅತಿ ದೊಡ್ಡ ಅನುಕೂಲವೆಂದರೆ ಕಕ್ಷಿದಾರರೊಂದಿಗೆ ನೇರವಾಗಿ ಮಾತನಾಡುವುದಾಗಿದೆ. ಇದನ್ನು ಸಮರ್ಥವಾಗಿ ಬಳಸಿಕೊಳ್ಳಬೇಕು. ಫ್ಯಾಕ್ಟ್ಸ್‌ನಲ್ಲಿ ಸಂಪೂರ್ಣ ಸಿದ್ಧವಾಗಿದ್ದರೆ, ಆಗ ಆತ್ಮವಿಶ್ವಾಸ ಬರುತ್ತದೆ. ಇದರಿಂದ ನೀವು ಯಾವುದೇ ಪ್ರಕರಣ ಸಂಬಂಧ ವಾದ ಮಾಡಿದರೆ ಅಥವಾ ಎವಿಡೆನ್ಸ್ ನಡೆಸಿಕೊಟ್ಟರೆ ಖಂಡಿತ ಅರ್ಧ ಅದರಲ್ಲಿ ಜಯಸಿದಂತೆಯೇ ಸರಿ ಎಂದು ಕಿರಿಯ ವಕೀಲರಿಗೆ ಸಲಹೆ ನೀಡಿದರು.

2008ರಲ್ಲಿ ನಾನು ಮೈಸೂರಿಗೆ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶೆಯಾಗಿ ನೇಮಕಗೊಂಡಾಗ, ಮೊದಲಿಗೆ ವಕೀಲರ ಸಂಘ ನನ್ನನ್ನು ಆತ್ಮೀಯವಾಗಿ ಬರಮಾಡಿಕೊಂಡಿತ್ತು. ಆಗ ನಾನು ಕ್ರಿಮಿನಲ್‌ನಲ್ಲಿ ಹೆಚ್ಚಾಗಿ ಪ್ರಾಕ್ಟೀಸ್ ಮಾಡಿರಲಿಲ್ಲ. ಬಹಳಷ್ಟು ಸಿವಿಲ್ ಅಡ್ವೋಕೇಸಿ ಮಾತ್ರ ಮಾಡಿದ್ದೆ. ಆದ್ದರಿಂದ ಆಗ ಮೂರು ತಿಂಗಳವರೆಗೆ ಹಿಂಜರಿಕೆ ಇತ್ತು. ಈ ನಿಟ್ಟಿನಲ್ಲಿ ಅಂದು ಪ್ರಧಾನ ಜಿಲ್ಲಾ ಸತ್ರ ನ್ಯಾಯಾಧೀಶರಾಗಿದ್ದ ಷಡ್ಕರ್ ಅವರ ಬೆಂಬಲ ಮರೆಯಲು ಸಾಧ್ಯವಿಲ್ಲ. ಮೂರು ವರ್ಷ ಕಳೆಯುವ ಹೊತ್ತಿಗೆ ನಾನು ಸೆಷನ್ಸ್ ಜಡ್ಜ್ ಆಗಿ ಎಲ್ಲಿ ಬೇಕಾದರೂ ಕೆಲಸ ಮಾಡುವ ಧೈರ್ಯ ತಂದುಕೊಟ್ಟಿದ್ದು ಮೈಸೂರು ನ್ಯಾಯಾಲಯ ಎಂದು ಸ್ಮರಿಸಿದರು.

ಅತ್ಯಂತ ಸೌಹಾರ್ದ ವಾತಾವರಣದಲ್ಲಿ ಇಲ್ಲಿ ಕರ್ತವ್ಯ ನಿರ್ವಹಿಸಿದೆ. ಮೂರು ವರ್ಷ ಮುಗಿಯುವ ಹೊತ್ತಿಗೆ ಹಲವು ಪ್ರಕರಣಗಳನ್ನು ಅತ್ಯಂತ ಸಮಂಜಸವಾಗಿ ನಿರ್ವಹಿಸಿದ್ದೇನೆ ಎಂಬ ಆತ್ಮ ತೃಪ್ತಿಯಿಂದ 2011 ಮೇನಲ್ಲಿ ಇಲ್ಲಿಂದ ವರ್ಗಾವಣೆಗೊಂಡು, ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶೆಯಾಗಿ ಬಳ್ಳಾರಿಯಲ್ಲಿ ಅಧಿಕಾರ ವಹಿಸಿಕೊಂಡೆ ಎಂದು ಹಳೇ ನೆನಪಿಗೆ ಜಾರಿದರು.

ನಂತರ ವಕೀಲರಾದ ಕೆ.ಎಂ.ಆನಂದ್, ಕೆ.ವಿ.ವಾಸು, ಅಭಿಲಾಷ ಸೇರಿದಂತೆ ಇನ್ನಿತರ ವಕೀಲರು ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟರು. ಭಾವಗೀತೆ ಹಾಗೂ ಚಲನಚಿತ್ರ ಗೀತೆಗಳನ್ನು ಸಾದರಪಡಿಸಲಾಯಿತು. ಮೈಸೂರು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಪ್ರಭಾವತಿ ಎಂ.ಹಿರೇಮಠ್, ಕರ್ನಾಟಕ ರಾಜ್ಯ ವಕೀಲರ ಪರಿಷತ್ ಸದಸ್ಯ ಬಿ.ಆರ್.ಚಂದ್ರಮೌಳಿ, ಮೈಸೂರು ವಕೀಲರ ಸಂಘದ ಅಧ್ಯಕ್ಷ ಎಸ್.ಲೋಕೇಶ್, ಕಾರ್ಯದರ್ಶಿ ಎ.ಜಿ.ಸುಧೀರ್, ಉಪಾಧ್ಯಕ್ಷ ಎಂ.ವಿ.ಚಂದ್ರಶೇಖರ್, ಲಾಗೈಡ್ ಕನ್ನಡ ಕಾನೂನು ಮಾಸ ಪತ್ರಿಕೆ ಪ್ರಧಾನ ಸಂಪಾದಕ ಹೆಚ್.ಎನ್.ವೆಂಕಟೇಶ್ ಸೇರಿದಂತೆ ನ್ಯಾಯಾಧೀಶರು, ನ್ಯಾಯವಾದಿಗಳು ಹಾಜರಿದ್ದರು.

ಕಲೆ ಆರಾಧಕರು ಉತ್ತಮ ಜೀವನ ರೂಢಿಸಿಕೊಳ್ಳುವರು

ರಂಗಭೂಮಿ ಹಿರಿಯ ಕಲಾವಿದ ಕೆರೆಹಳ್ಳಿ ಬಿ.ದೊರೆಸ್ವಾಮಿ ವಿಶ್ವಾಸ

ಮೈಸೂರು, ಏ.27(ಎಸ್‌ಬಿಡಿ)– ಉತ್ತಮ ಜೀವನಕ್ಕೆ ಕಲೆ ದಾರಿದೀಪ ಆಗಬಲ್ಲದು ಎಂದು ರಂಗಭೂಮಿ ಹಿರಿಯ ಕಲಾವಿದ ಕೆರೆಹಳ್ಳಿ ಬಿ.ದೊರೆ ಸ್ವಾಮಿ ಅಭಿಪ್ರಾಯಿಸಿದರು.

ಮೈಸೂರಿನ ಆಲನಹಳ್ಳಿ ಬಡಾವಣೆಯ ಶ್ರೀ ವಿನಾಯಕ ದೇವಸ್ಥಾನದಲ್ಲಿ ಶ್ರೀ ಪತಂಜಲಿ ಯೋಗ ಶಿಕ್ಷಣ ಸಮಿತಿ ವತಿ ಯಿಂದ ಆಯೋಜಿಸಿರುವ ಮಕ್ಕಳ ಬೇಸಿಗೆ ಶಿಬಿರದಲ್ಲಿ ಕುದೇರು ಮಠದ ವೀರಶೈವ ಸಮಾನ ಮನಸ್ಕರ ಸ್ನೇಹ ಬಳಗದಿಂದ ರಂಗಭೂಮಿ ಮಹತ್ವ ಪ್ರಸ್ತುತಪಡಿಸಿದ ವೇಳೆ ಅವರು ಮಾತನಾಡಿದರು.

ಕಲೆ ಎಲ್ಲರನ್ನೂ ಕೈ ಬೀಸಿ ಕರೆಯು ತ್ತದೆ. ಆದರೆ ಶ್ರದ್ಧೆ, ನಿಷ್ಠೆಯಿಂದ ಅಭ್ಯಾಸ ಮಾಡುವವರನ್ನು ಮಾತ್ರ ಪ್ರೀತಿಯಿಂದ ಅಪ್ಪಿಕೊಳ್ಳುತ್ತದೆ. ಕಲೆ ಕೇವಲ ಮನರಂಜನೆ ಹಾಗೂ ಜೀವನೋಪಾಯದ ಮಾರ್ಗವಲ್ಲ. ಅದು ಸನ್ಮಾರ್ಗದ ಬೆಳಕು. ಕಲೆ ಆರಾಧಿಸುವವರು ದುಶ್ಚಟಗಳಿಂದ ದೂರವಿದ್ದು ಒಳ್ಳೆಯ ಬದುಕು ಕಟ್ಟಿಕೊಳ್ಳ ಬಹುದು. ಅದರಲ್ಲೂ ಮೂಲ ರಂಗಭೂಮಿ ಅತ್ಯಂತ ಪರಿಣಾಮಕಾರಿ. ಆದ್ದರಿಂದ ಬೇಸಿಗೆ ರಜೆಯಲ್ಲಿ ಮಕ್ಕಳಿಗೆ ರಂಗಭೂಮಿ ನಂಟು ಬೆಳೆಸಬೇಕು. ಹಾಡುಗಾರಿಕೆ, ಅಭಿನಯ, ಸಂಭಾಷಣೆ ಕ್ರಮ ಎಲ್ಲವನ್ನೂ ಶ್ರದ್ಧೆಯಿಂದ ಕಲಿ ಯುವ ಅವಕಾಶ ಕಲ್ಪಿಸಿಕೊಡಬೇಕು. ಮಕ್ಕಳಲ್ಲಿ ರಂಗಭೂಮಿ ಅರಿವು ಬಿತ್ತುವ ಮೂಲಕ ಅದನ್ನು ಮುಂದಿನ ಪೀಳಿಗೆಗೆ ಕೊಂಡೊಯ್ಯಬೇಕು ಎಂದು ಆಶಿಸಿದರು.

ರಂಗಭೂಮಿ ನಿರ್ದೇಶಕ ಬೀರಿ ಹುಂಡಿ ಗೋವಿಂದ ರಾಜು ಮಾತನಾಡಿ, ಇಂದಿನ ಇಂಟರ್‌ನೆಟ್ ಪರ್ವದಲ್ಲಿ ರಂಗಭೂಮಿ ಕಲೆ ನಶಿಸುವ ಆತಂಕ ನಿರ್ಮಾಣವಾಗಿದೆ.



ಈ ಪರಿಸ್ಥಿತಿಯಲ್ಲಿ ಮಕ್ಕಳಿಗೆ ರಂಗಭೂಮಿ ಕಲೆ, ಇತಿಹಾಸ, ಮಹತ್ವದ ಬಗ್ಗೆ ತಿಳಿಸಿ ಕೊಡುತ್ತಿರುವುದು ಸ್ತುತ್ಯಾರ್ಹ. ಹಲವು ಕಲಾವಿದರು ರಂಗಭೂಮಿ ಮೂಲಕ ಸಿನಿಮಾ ರಂಗದಲ್ಲಿ ಜನಪ್ರಿಯ ತಾರೆಗಳಾಗಿರುವ ಉದಾ ಹರಣೆಗಳ ಮೂಲಕ ಸರಳವಾಗಿ ಮಕ್ಕಳಿಗೆ ಅರ್ಥ ಮಾಡಿಸಿದ್ದು, ಇವರಿಗೆ ರಂಗ ಗೀತೆಗಳ ಅಭ್ಯಾಸ ಮಾಡಿ ಸಿದ್ದು ಖುಷಿಯ ವಿಚಾರ ಎಂದರು.

ಶ್ರೀ ಪತಂಜಲಿ ಯೋಗ ಶಿಕ್ಷಣ ಸಮಿತಿ, ಮೈಸೂರು ಎನ್‌ಆರ್ ವಲಯ ಹಾಗೂ ವೀರಶೈವ ಸಮಾನ ಮನಸ್ಕರ ಸ್ನೇಹ ಬಳಗದ ಸಹಯೋಗದಲ್ಲಿ ರಂಗಭೂಮಿ ನಿರ್ದೇಶಕ ಬೀರಿಹುಂಡಿ ಗೋವಿಂದ ರಾಜು, ಹಿರಿಯ ಕಲಾವಿದರಾದ ಕೆರೆಹಳ್ಳಿ ದೊರೆಸ್ವಾಮಿ, ಚಿಕ್ಕಹಳ್ಳಿ ಪುಟ್ಟಣ್ಣ ಹಾಗೂ ನಿವೃತ್ತ ಡಿವೈಎಸ್ಪಿ ಶಿವಬಸಪ್ಪ ಸಾರಥ್ಯದಲ್ಲಿ ರಂಗಭೂಮಿ ಮಹತ್ವ, ಹಾಡುಗಾರಿಕೆ, ಅಭಿನಯ ಕುರಿತು ಮಕ್ಕಳಿಗೆ ತಿಳಿಸಿಕೊಡ ಲಾಯಿತು. ಇದೇ ವೇಳೆ ಸಕಹಳ್ಳಿ ಮಹ ದೇವಸ್ವಾಮಿ, ಹೊಸಕೋಟೆ ನಂದೀಶ್, ಕೆರೆಹಳ್ಳಿ ಲೋಹಿತ್, ಬಾಗಳಿ ಮಹೇಶ್, ಹೊಸಕೋಟೆ ಪ್ರಭುಸ್ವಾಮಿ, ಸುಂದ್ರಪ್ಪ ಮುಂತಾದ ರಂಗಭೂಮಿ ಕಲಾವಿದರು ಪೌರಾಣಿಕ ನಾಟಕಗಳ ಮಹತ್ವವನ್ನು ತಿಳಿಸಿಕೊಟ್ಟು, ಅನೇಕ ರಂಗಗೀತೆಗಳನ್ನು ಹಾಡಿದರು. ಈ ಸಂದರ್ಭದಲ್ಲಿ ಹಿರಿಯ ಯೋಗ ಬಂಧು ವಿಠಲ್ ರಾಜಣ್ಣ, ಸಂತೋಷ್, ಹನುಮಂತ್ ಮುಂತಾ ದವರು ಉಪಸ್ಥಿತರಿದ್ದರು.

ಮಣಿಪುರದಲ್ಲಿ ಮತ್ತೆ ಹಿಂಸಾಚಾರ: ಉಗ್ರರ ದಾಳಿಗೆ ಇಬ್ಬರು ಯೋಧರು ಹುತಾತ್ಮ

ಬಿಷ್ಣುಪುರ: ಮಣಿಪುರದಲ್ಲಿ ಶನಿವಾರ ಕುಕಿ ಉಗ್ರರು ನಡೆಸಿದ ದಾಳಿಯಲ್ಲಿ ಕೇಂದ್ರೀಯ ಮೀಸಲು ಪೊಲೀಸ್ ಪಡೆಯ (CRPF) ಇಬ್ಬರು ಯೋಧರು ಹುತಾತ್ಮರಾಗಿ ಇಬ್ಬರು ಗಾಯಗೊಂಡಿರುವ ಘಟನೆ ನಡೆದಿದೆ.

ಮತ್ತೊಂದು ಘಟನೆಯಲ್ಲಿ ಮಣಿಪುರದಲ್ಲಿ ಎರಡು ಗುಂಪುಗಳ ನಡುವೆ ಗುಂಡಿನ ಚಕಮಕಿ ನಡೆದು ಒಬ್ಬರು ಸ್ಥಳದಲ್ಲೇ ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಚುರಾಚಂದ್‌ಪುರ ಜಿಲ್ಲೆಯ ಗಡಿಯಲ್ಲಿರುವ ಬಿಷ್ಣುಪುರ್ ಜಿಲ್ಲೆಯ ಮೊಯಿರಾಂಗ್ ಮತಗಟ್ಟೆ ವ್ಯಾಪ್ತಿಯ ನರನ್‌ಸೇನಾ ಪ್ರದೇಶದಲ್ಲಿ ಕಳೆದ ಮಧ್ಯರಾತ್ರಿಯಿಂದ ಆರಂಭಗೊಂಡ ಉಗ್ರರ ಜೊತೆಗಿನ ದಾಳಿ ಬೆಳಗಿನ ಜಾವ 2:15ರವರೆಗೆ ಮುಂದುವರೆದು ಸಿಆರ್‌ಪಿಎಫ್ ಸಿಬ್ಬಂದಿ ಮೇಲೆ ಕುಕಿ ಉಗ್ರರು ದಾಳಿ ನಡೆಸಿದ್ದಾರೆ.

ದಾಳಿಯಲ್ಲಿ ಹುತಾತ್ಮರಾದ ಸಿಬ್ಬಂದಿಗಳಲ್ಲಿ ಒಬ್ಬರು ಸಬ್ ಇನ್ಸ್‌ಪೆಕ್ಟರ್ ಎಂದು ಗುರುತಿಸಲಾಗಿದೆ ಗಾಯಾಳುಗಳನ್ನು ಆಸ್ಪತ್ರೆಗೆ ಸಾಗಿಸಲಾಯಿತು. ಹುತಾತ್ಮ ಸಿಬ್ಬಂದಿ ರಾಜ್ಯದ ಬಿಷ್ಣುಪುರ್ ಜಿಲ್ಲೆಯ ನರಸೇನಾ ಪ್ರದೇಶದಲ್ಲಿ ನಿಯೋಜಿಸಲಾದ ಸಿಆರ್‌ಪಿಎಫ್ 128 ಬೆಟಾಲಿಯನ್‌ನವರು.

ಆರಾಮದಾಯಕ ಗೆಲುವು ನನ್ನದಾಗಲಿದೆ; ಮೈಸೂರು, ಕೊಡಗಲ್ಲಿ ಪ್ರತ್ಯೇಕ ಕಚೇರಿ ತೆರೆಯುತ್ತೇನೆ...!

ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ ಅತೀವ ವಿಶ್ವಾಸ

ಮೈಸೂರು, ಏ.27(ಎಂಕೆ)– ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಮತದಾರರು ನಮ್ಮ ಪಕ್ಷದ ಪರವಾಗಿ ಮತ ನೀಡಿದ್ದಾರೆಂಬ ಆತ್ಮವಿಶ್ವಾಸವಿದ್ದು, ಆರಾಮದಾಯಕ ಗೆಲುವು ನನ್ನದಾಗಲಿದೆ ಎಂದು ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ ವಿಶ್ವಾಸ ವ್ಯಕ್ತಪಡಿಸಿದರು.

ಮೈಸೂರು ಜೆಎಲ್‌ಬಿ ರಸ್ತೆಯ ಕಾಂಗ್ರೆಸ್ ಕಚೇರಿಯಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಜಾತಿ–ಧರ್ಮವೆಂದು ಯಾರನ್ನು ಟೀಕಿಸದೆ ಅಭಿವೃದ್ಧಿಯನ್ನು ಮುಂದಿಟ್ಟುಕೊಂಡು ಚುನಾವಣೆ ಎದುರಿಸಿದ್ದು, ಮತದಾರರು ನಮ್ಮ ಪಕ್ಷದ ಪರವಾಗಿ ಮತ ನೀಡಿದ್ದಾರೆಂಬ ವಿಶ್ವಾಸವಿದೆ ಎಂದರು.

ಕ್ಷೇತ್ರದಲ್ಲಿ ಮತದಾನದ ಪ್ರಮಾಣ ಹೆಚ್ಚಾಗಿರುವುದು ನಮಗೆ ಪೂರಕ ವಾತಾವರಣ ಸೃಷ್ಟಿಸುವುದರ ಜೊತೆಗೆ ಪ್ರಜಾಪ್ರಭುತ್ವಕ್ಕೆ ಪುಷ್ಟಿ ತರುವಂತಹದ್ದಾಗಿದೆ. ಅಲ್ಪಸಂಖ್ಯಾತರು ಹೆಚ್ಚಿನ ಸಂಖ್ಯೆಯಲ್ಲಿ ಮತದಾನ ಮಾಡಿದ್ದಾರೆ. ಮುಖ್ಯವಾಗಿ ಎಲ್ಲಾ ಜಾತಿ–ಸಮುದಾಯದವರು ಜಾತಿ, ಭೇದ ಮರೆತು ಅಭಿವೃದ್ಧಿಯ ಮುಖ ನೋಡಿದ್ದಾರೆ. ಅಲ್ಲದೆ ಶೇ.85 ರಷ್ಟು ಮಹಿಳೆಯರು ನನಗೆ ಮತ ನೀಡಿದ್ದಾರೆ ಎಂದು ಹೇಳಿದರು.



ಕಾಂಗ್ರೆಸ್ ಕಚೇರಿಯಲ್ಲಿ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ ಪತ್ರಿಕಾಗೋಷ್ಠಿ ನಡೆಸಿದರು.

ಬಿಜೆಪಿ ಕುತಂತ್ರ: ಬಿಜೆಪಿಯವರು ಈ ಚುನಾವಣೆಯಲ್ಲಿ ಬಹಳಷ್ಟು ಕಸರತ್ತು ನಡೆಸಿದ್ದಾರೆ. ಹಾಲಿ ಸಂಸದರಿಗೆ ಟಿಕೆಟ್ ತಪ್ಪಿಸಿ, ರಾಜಕಾರಣವೇ ಬೇಡವೆಂದು ಕೂತಿದ್ದವರನ್ನು ಚುನಾವಣೆಗೆ ನಿಲ್ಲಿಸಿದರು. ಮೋದಿ ಮತ್ತು ಮಹಾರಾಜರ ನೆಪದಲ್ಲಿ ಜನರನ್ನು ಸೆಳೆಯುವ ಕುತಂತ್ರ ನಡೆಸಿದ್ದಾರೆಯೇ ಹೊರತು ಅಭಿವೃದ್ಧಿಯ ಬಗ್ಗೆ ಒಂದೇ ಒಂದು ಮಾತನಾಡಿಲ್ಲ. ಮೈಸೂರಿನ ಚುನಾವಣಾ ಪ್ರಚಾರ ಸಭೆಗೆ ಬಂದಿದ್ದ ಪ್ರಧಾನಿ ಮೋದಿ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಕಾಂಗ್ರೆಸ್ ಅನ್ನು ಬೈಯ್ಯುವುದರಲ್ಲೇ ತಮ್ಮ ಭಾಷಣದ ಹೆಚ್ಚಿನ ಸಮಯವನ್ನು ಕಳೆದರೆ ಹೊರತು ಈ ಕ್ಷೇತ್ರದಲ್ಲಿ ಅಭಿವೃದ್ಧಿ ಬಗ್ಗೆ ಏನನ್ನೂ ಮಾತನಾಡಿಲ್ಲ. ಹೀಗಾಗಿ ಜನರಿಗೂ ಯಾರು ಸೂಕ್ತ ವೆಯಬುದು ಅರ್ಥವಾಗಿದೆ ಎಂದು ಹೇಳಿದರು.

ಎರಡು ಕಡೆ ಕಚೇರಿ ತೆರೆಯುತ್ತೇನೆ: ಸಂಸದನಾಗಿ ಆಯ್ಕೆಯಾದ ಬಳಿಕ ಕೊಡಗು ಹಾಗೂ ಮೈಸೂರಿನಲ್ಲಿ ಪ್ರತ್ಯೇಕ ಕಚೇರಿ ತೆರೆಯುತ್ತೇನೆ. ಸ್ಥಳೀಯ ಶಾಸಕರು, ಪಕ್ಷದ ಮುಖಂಡರೊಂದಿಗೆ ಸೇರಿ ಕ್ಷೇತ್ರದ ಅಭಿವೃದ್ಧಿ ಮಾಡಲು ಬದ್ಧನಾಗಿದ್ದೇನೆ. ಕೇಂದ್ರದಲ್ಲಿ ಇಂಡಿಯಾ ಒಕ್ಕೂಟ ಅಧಿಕಾರಕ್ಕೆ ಬರಲಿದ್ದು, ಕರ್ನಾಟಕಕ್ಕೆ ದೊರಕಬೇಕಾದ ತೆರಿಗೆ ಹಣವನ್ನು ತೆಗೆದುಕೊಂಡು ಬಂದೇ ಬರುತ್ತೇವೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಚುನಾವಣಾ ಪ್ರಚಾರದಲ್ಲಿ ಬಾಗಿ: ನಿನ್ನೆಯಷ್ಟೇ ಮತದಾನ ಮುಗಿದಿದ್ದು, ಸ್ವಲ್ಪ ರಿಲ್ಯಾಕ್ಸ್ ಆಗಿದ್ದೇನೆ. ಇದೇ ವೇಳೆ ಕೆಲವು ವೈಯಕ್ತಿಕ ಕೆಲಸಗಳನ್ನು ಮುಗಿಸಿಕೊಳ್ಳುತ್ತಿದ್ದೇನೆ. ಕುಟುಂಬದೊಂದಿಗೆ ಮೂರು ದಿನ ಪ್ರವಾಸಕ್ಕೆ ತೆರಳಿ, ವಿಶ್ರಾಂತಿ ಪಡೆಯಲಿದ್ದು, ಮೇ.7ರಂದು ನಡೆಯುವ ಎರಡನೇ ಹಂತದ ಚುನಾವಣೆಯಲ್ಲಿನ ಕಾಂಗ್ರೆಸ್ ಅಭ್ಯರ್ಥಿಗಳ ಪರವಾಗಿ ಕೆಲಸ ಮಾಡಲು ತಂಡದೊಂದಿಗೆ ತೆರಳಲಿದ್ದೇನೆ ಎಂದು ತಿಳಿಸಿದರು.

ಧನ್ಯವಾದ: ಸಾಮಾನ್ಯ ಕಾರ್ಯಕರ್ತನಾಗಿದ್ದ ನನಗೆ ಪಕ್ಷ ಟಿಕೆಟ್ ನೀಡಿದೆ. ಅದಕ್ಕಾಗಿ ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಹಾಗೂ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಧನ್ಯವಾದ ಸಲ್ಲಿಸುತ್ತೇನೆ. ಮುಖ್ಯಮಂತ್ರಿಗಳನ್ನು ಸಾಯುವವರೆಗೂ ಮರೆಯಲು ಸಾಧ್ಯವಿಲ್ಲ. ಮುಂದೆ ಅವರು ಹೇಳಿದ್ದನ್ನು ಪಾಲಿಸಿಕೊಂಡಿರುತ್ತೇನೆ. ಬೆಂಬಲಿಸಿದ ಪಕ್ಷದ ಮುಖಂಡರು, ತೆರೆಮರೆಯಲ್ಲಿ ದುಡಿದ ಕಾರ್ಯಕರ್ತರನ್ನು ನೆನಪಿನಲ್ಲಿಟ್ಟುಕೊಳ್ಳುತ್ತೇನೆ. ಒಂದೇ ಒಂದು ಸಣ್ಣ ಅಹಿತಕರ ಘಟನೆ ನಡೆಯದಂತೆ ಚುನಾವಣೆ ನಡೆಸಿದ ಆಯೋಗದ ಕಾರ್ಯ ಅಭಿನಂದನಾರ್ಹ ಎಂದರು. ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಮುಖಂಡರಾದ ಶಿವಣ್ಣ, ಮಹೇಶ್, ಗಿರೀಶ್, ನಾಗೇಶ್, ಬಿ.ಎಂ.ರಾಮು ಉಪಸ್ಥಿತರಿದ್ದರು.

ನನ್ನ ಜಾತಿಯ ಬಗ್ಗೆ ಪ್ರಶ್ನಿಸಿ ಹಿಂದಿನ ಸಂಸದ ಪ್ರತಾಪ ಸಿಂಹ ಅವರು ನನ್ನನ್ನು ಬೈದರು. ಚುನಾವಣೆಗೆ ಎರಡು ದಿನವಿರುವಾಗ ಕ್ಷೇತ್ರದಲ್ಲಿ ಕಾಣೆಯಾಗಿದ್ದಾರೆ. ಮುಂದಿನ ಐದು ವರ್ಷವೂ ಕ್ಷೇತ್ರದಲ್ಲಿ ಅವರು ಕಾಣುವುದು ಅನುಮಾನ. ನನ್ನ ಗೆಲುವಿನ ಬಳಿಕ ಅವರು ಎಲ್ಲೇ ಇದ್ದರೂ ಭೇಟಿ ಮಾಡಿ ಸಲಹೆ ಪಡೆಯುತ್ತೇನೆ. ತಲೆ ಮೇಲೆ ಹೊಡೆದಂತೆ ಸುಳ್ಳು ಹೇಳುವುದೇಗೆ ಎಂಬುದರ ಬಗ್ಗೆಯೂ ಕೇಳುತ್ತೇನೆ.

– ಎಂ.ಲಕ್ಷ್ಮಣ, ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ

ವಾರದ ಮಿತ್ರ
ಸಾಪ್ತಾಹಿಕ ಪುರವಣಿ

ಪುಟ 10

ಮೈಸೂರು ಮಿತ್ರ

ಭಾನುವಾರ 28–4–2024

ಮೈಸೂರು ಮಿತ್ರ 45

ತೃತೀಯ ಬಹುಮಾನ



ಆರ್.ಪವನ್‌ಕುಮಾರ್
ವಿಳಾಸ: ನಂ.163, 2ನೇ ಕ್ರಾಸ್, ಜೈನ್ ಟೆಂಪಲ್ ಹತ್ತಿರ, ರಂಗನಾಥನಗರ, ಶ್ರೀರಂಗಪಟ್ಟಣ 571438 ಮೊ: 99458 42882

ಪರಮೂ



ಪರಮೂಗೆ ಆಗಷ್ಟೇ ನಿದ್ದೆ ಹತ್ತಿತ್ತು ರಾತ್ರಿಯಿಡೀ ಎಷ್ಟು ಒದ್ದಾಡಿದರು ತಲೆ ತುಂಬಿದ್ದ ಚಿಂತೆ ನಿದ್ದೆಗೆ ಅವಕಾಶ ನೀಡಿರಲಿಲ್ಲ. ಐದರ ಜಾವ ಸಮೀಪಿಸುವಾಗ ಚಿಂತೆಯ ತೀವ್ರತೆ ಕಮ್ಮಿಯಾದಂತೆ ಕಣ್ಣುಗಳು ಎಳೆಯ ತೊಡಗಿದವು. ಅವನು ಕಣ್ಮುಚ್ಚಿದ ಅರ್ಧ ತಾಸಿಗೆ ಫೋನ್ ಬಡಿದುಕೊಳ್ಳಲು ಆರಂಭಿಸಿತು. ಮೊದಲ ಕಾಲ್‌ಗೆ ಅವನ ನಿದ್ದೆಯನ್ನು ಮುರಿಯಲು ಸಾಧ್ಯವಾಗದೆ, ಅದೂ ಮತ್ತೆ ಮುಂದುವರೆಯಲು ಪರಮೂ ಕಷ್ಟಪಟ್ಟು ಕೀಪ್ಯಾಡ್ ಫೋನ್ ಕೈಗೆ ಎತ್ತಿಕೊಂಡ. ಸ್ಕ್ರೀನ್ ಮೇಲೆ ಅವನ ಕಣ್ಣುಗಳು ಓಡಿದವು. ಆ ಕರೆ ರೇಂಜರ್ ಸಾಹೇಬರ ಹೊರತು ಬೇರೆಯವರದಾಗಿದ್ದರೆ ಕ್ಷಣದಲ್ಲಿ ತುಂಡರಿಸಿ ನಿದ್ದೆಗೆ ಶರಣಾಗುತ್ತಿದ್ದ. ಈಗ ಹಾಗೆ ಮಾಡುವಂತಿರಲಿಲ್ಲ. ಎತ್ತಿ ಉತ್ತರಿಸಲೇಬೇಕಿತ್ತು. ಈ ರೇಂಜರ್‌ಗೆ ಪರಮೂನ ಮೇಲೆ ಕೆಲವು ಕ್ಷುಲ್ಲಕ ಕಾರಣಗಳಿಂದಾಗಿ ಸಾಕಷ್ಟು ಅಸಮಾಧಾನವಿತ್ತು. ಅವಕಾಶವಾದಾಗತಿಲ್ಲ. ಅದನ್ನು ಅವನು ಪರಮೂನ ಮೇಲೆ ತೀರಿಸಿಕೊಳ್ಳುತ್ತಿದ್ದ. ಪರಮೂಗೆ ಮಾತ್ರ ಅವನೆಂದರೆ ಭಯ, ಭಕ್ತಿಗಳು ಹಾಗೆ ಇದ್ದವು. 'ಎಷ್ಟಾದ್ರು ಸಾಹೇಬ್ರು ಅಲ್ವೂರ‍್ರಾ' ಎಂದು ಮುಂದಿನ ಸಾಲಿನಲ್ಲಿ ಎರಡ್ಮೂರು ಹಲ್ಲುಗಳ ಉದರಿದ್ದ ಬಾಯಿ ತೆರೆದು ನಗೆ ಬೀರುತ್ತಿದ್ದ. ಇದರಿಂದ ಸುಕ್ಕುಗೊಳ್ಳುತ್ತಿದ್ದ ಅವನ ಮುಖವು, ಆಳಾಕ್ಕಿಳಿದ ಕಣ್ಣುಗಳು, ದಪ್ಪಗೆ ಚೂಪಾಗಿದ್ದ ಮೂಗು ಇವನನ್ನೂ ಒಂದು ವಿಚಿತ್ರ ಪ್ರಾಣಿಯಂತೆ ಬಿಂಬಿಸುತ್ತಿದ್ದವು. ತಡ ಮಾಡದೆ ಕರೆ ಸ್ವೀಕರಿಸಿದವನಿಗೆ ಅತ್ತಲಿನಿಂದ ರೇಂಜರ್ ಸಾಹೇಬ್ರು "ಹ್ಹೇ ಪರಮ, ಅದ್ಯಾವುದೋ ಅಡ್ನಾಡಿ ನನ್ಮಗ್ನ್ ಆನೆ ಬೆಳ್ಳಬೆಳ್ಳಿಗ್ಗೆ ಪೇಟೆ ಬೀದಿಗೆ ನುಗ್ಗಿದಿಯಂತೆ ಅದ್ನೇ ಹೋಗಿ ನೋಡೋ" ಎಂದು ಫೋನಿನಲ್ಲೆ ವಿಷ ಉಗುಳುತ್ತಿದ್ದರೆ, ಇತ್ತ ಕಡೆಯಿಂದ ಪರಮೂ ಇದೇನಾಯಿತು ಎಂದು ತಿಳಿಯದೆ ಗೊಂದಲಕ್ಕೀಡಾದ. ರೇಂಜರ್ ಪರಮೂನಿಂದ ಯಾವೊಂದು ಮಾತನ್ನು ಅಪೇಕ್ಷಿಸದೆ ಇಲ್ಲಿಗೆ ತನ್ನ ಕರ್ತವ್ಯ ಮುಗಿಯಿತೆಂಬಂತೆ ಕರೆ ತುಂಡರಿಸಿದ್ದ. ಪರಮೂಗೆ ಈಗ ಪ್ರಜ್ಞೆ ಬಂದಂತಾಗಿ ಮಲಗಿದ್ದಲ್ಲಿಂದ ಎದ್ದು ಕುಳಿತ. ಸಾಹೇಬರು ಹೇಳಿದ ವಾಕ್ಯಗಳು ಪೂರ್ತಿ ಅಲ್ಲದೆ ಹೋದರು ಒಂದು ಹಂತಕ್ಕೆ ಕಿವಿಯಲ್ಲಿ ರಿಂಗಣಿಸುತ್ತಿದ್ದವು.

ಫಾರೆಸ್ಟ್ ಡಿಪಾರ್ಟ್‌ಮೆಂಟ್‌ನಲ್ಲಿ ಗಾರ್ಡಾಗಿ ಕೆಲಸ ಮಾಡುವ ಪರಮೂ ಅರ್ಥಾತ್ ಪರಮಶಿವಯ್ಯ ತನ್ನ ಜೀವಮಾನದ ಮುಕ್ಕಾಲು ಭಾಗ ಅಲ್ಲೇ ಕಳೆದಿದ್ದ. ಅವನ ರಿಟೈರ್‌ಗೆ ಇನ್ನೂ ಒಂದು ವರ್ಷ ಬಾಕಿಯಿತ್ತು ವಯೋಸಹಜವಾಗಿ ಬಾಧಿಸುತ್ತಿದ್ದ ಕೆಲವು ಕಾಯಿಲೆಗಳು, ಕ್ಷೀಣಿಸುತ್ತಿದ್ದ ದೇಹದ ಶಕ್ತಿ, ಬಂದ ಹೊಸ ರೇಂಜರ್ ಸಾಹೇಬರ ಅಬ್ಬರ, ಆರ್ಭಟ ಪರಮೂಗೆ ಈ ಕೆಲಸ ಸಾಕೆನಿಸುವಂತೆ ಮಾಡಿತ್ತು. ಅವನ ಹುದ್ದೆಗೆ ಬೇಡ, ಇಷ್ಟು ವರ್ಷಗಳ ಸೇವೆಗೂ ಇಲ್ಲಿ ಯಾವುದೇ ಬೆಲೆ ಇರಲಿಲ್ಲ. ಅವನಿಗಿಂತ ಹದಿನೈದು, ಇಪ್ಪತ್ತು ವರ್ಷಕ್ಕೆ ಕಿರಿಯರಾದವರು ಹಿರಿಯ ಹುದ್ದೆ ಏರಿದ ಕಾರಣಕ್ಕೆ ಪರಮೂನ ನ್ಯಾಷನಲ್ ವೇಸ್ಟ್ ಎಂದು ಭಾವಿಸಿ ನಡೆಸಿಕೊಳ್ಳುತ್ತಿದ್ದರು. ಇದರಿಂದ ಬೇಸತ್ತ ಪರಮೂ ಸುಮ್ಮನೆ ವಾಲೆಂಟರಿ ಬರೆದು ಮನೆಯಲ್ಲಿರುವ ಎಂದು ಪ್ರತಿ ಸಾರಿ ಯೋಚಿಸುತ್ತಿದ್ದನಾದರು, ಅದನ್ನು ಕಾರ್ಯ ರೂಪಕ್ಕೆ ತರುವಲ್ಲಿ ಮಾತ್ರ ಬಹಳ ಹಿಂದೇಟಾಕುತ್ತಿದ್ದ. ಅವನ ಮನೆಯಲ್ಲಿ ಇಬ್ಬರು ಹೆಣ್ಣುಮಕ್ಕಳು ಮತ್ತು ಒಬ್ಬ ಗಂಡು ಮಗನಿದ್ದು, ಹೆಂಡತಿ ಎಂದೂ ಕಾಲವಾಗಿದ್ದಳು. ದೊಡ್ಡ ಮಗಳನ್ನು ಒಬ್ಬ ಸರ್ಕಾರಿ ನೌಕರನಿಗೆ ಕೊಟ್ಟು ಮದುವೆ ಮಾಡಿದ್ದ ಪರಮೂ, ಎರಡನೇ ಮಗಳಿಗೂ ಅಂಥದ್ದೆ ವರನನ್ನು ತಲಾಶ್ ಮಾಡುವ ಕಾರ್ಯದಲ್ಲಿ ಹೈರಾಣಗಿದ್ದ. ಎರಡನೇ ಮಗಳು ಅವನಂತೆ ಅಷ್ಟು ಎತ್ತರವಿಲ್ಲದೆ, ಸ್ವಲ್ಪ ಬೊಜ್ಜಿನ ದೇಹದಿಂದ ಸುಂದರಳಲ್ಲದೆ ಹೋದರು, ಬಣ್ಣದಲ್ಲಿ ಅಮ್ಮನನ್ನು ಹೋಲುತ್ತಿದ್ದಳು. ಈ ಕಾರಣಕ್ಕೆ ಇವರು ಡಿಮ್ಯಾಂಡ್ ಮಾಡುವ ಗಂಡುಗಳು ಹೆಣ್ಣನ್ನು ಒಪ್ಪಲು ಎಳೆದಾಡುತ್ತಿದ್ದರು. ಹೆಣ್ಣು ಸುಮಾರಾದರು ಪರವಾಗಿಲ್ಲ ವರೋಪಚಾರ ಜೋರಾಗಿರಲೆಂದು ಬಯಸಿದವರ ಬೇಡಿಕೆಗಳನ್ನು ಪೂರೈಸುವಲ್ಲಿ ಪರಮೂ ಸೋಲುತ್ತಿದ್ದ. ಅವರೆಲ್ಲಾ ಇವನು ಇಷ್ಟು ವರ್ಷ ಫಾರೆಸ್ಟ್ ಡಿಪಾರ್ಟ್‌ಮೆಂಟ್‌ನಲ್ಲಿ ದುಡಿದಿದ್ದಾನೆಂದರೆ ಸಾಕಷ್ಟು ಪೇರಿಸಿಟ್ಟಿರುವನೆಂದು ನಂಬಿದ್ದರು. ಪರಮೂ ಒಬ್ಬ ಸಾಧಾರಣ ಗಾರ್ಡ್ ಆದರೂ ಸರ್ಕಾರಿ ಇಲಾಖೆ ಎಂದ ಮೇಲೆ ಏನಾದರು ಒಂದಷ್ಟು ಮಾಡಿರಬೇಕೆಂಬುದು ಬರುವವರ ವಾದವಾಗಿತ್ತು. ಪರಮೂ "ನಾನು ಗಂಜಿ ಕಾಸಿಗೆ ಕೆಲ್ಸಕ್ಕೆ ಸೇರಿದ್ದು, ಮುಂದೆ ಮನೆ, ಮಕ್ಕಳು, ಸಂಸಾರ ಅಂತಾ ಖರ್ಚು, ವೆಚ್ಚಗಳಾಗಿ ಒಂದು ನೆಲೆ ಮಾಡಿಕೊಳ್ಳೊವಲ್ಲಿಗೆ ಇಷ್ಟಾಗಿದೆ. ನೀವು ಕೇಳಿದಷ್ಟು ಕೊಡಲಾರನಾದ್ರು, ನನ್ನ ಕೈ ಮೀರಿ ಕೊಟ್ಟು ಅಚ್ಚುಕಟ್ಟಾಗಿ ಮದುವೆ ಮಾಡಿಕೊಡಬಲ್ಲೆ" ಎಂದು ವಿನೀತನಾಗಿ ಪ್ರಾರ್ಥಿಸಿಕೊಂಡರು, ಅವರಿಗೆ ಇದರಿಂದ ಜಾರಿಕೊಳ್ಳಲು ಹಲವಾರು ಕಾರಣಗಳಿರುತ್ತಿತ್ತು.

ಹೀಗೆ ಪರಮೂನ ಎರಡನೇ ಮಗಳನ್ನು ಬಂದು ನೋಡಿ ಹೋದ ಗಂಡುಗಳ ಸಂಖ್ಯೆಗೆ ವರ್ಷಗಳು ಉಳಿದಂತೆ ಲೆಕ್ಕವೇ ಇರಲಿಲ್ಲ. ಇನ್ನೂ ಮಗ ಪಿ.ಯು.ಸಿ. ಮುಗಿಸಿಕೊಂಡನಾದರು, ಡಿಗ್ರಿಯಲ್ಲಿ ಪ್ರತಿ ವರ್ಷ ಮೂರು, ನಾಲ್ಕು ವಿಷಯಗಳ ಉಳಿಸಿಕೊಂಡು ಮಹಾದಂಡಯಾತ್ರೆ ಮಾಡಿದ ಕಾರಣಕ್ಕೆ ಅದು ಈ ಜನ್ಮಕ್ಕೆ ಮುಗಿಯುವಂತಿರಲಿಲ್ಲ. ಅವನು ಇದರ ಆಸೆಯನ್ನು ಅಲ್ಲಿಗೆ ಬಿಟ್ಟವನು ಪೇಟೆಯ ಪ್ರಿಂಟಿಂಗ್ ಪ್ರೆಸ್ ಒಂದರಲ್ಲಿ ಕೆಲಸಕ್ಕಿದ್ದ. ಪರಮೂ ಅವನಿಗೆ ಪಿ.ಯು.ಸಿ. ಅರ್ಹತೆಯಿಂದ ಕರೆಯಲಾಗುವ ಎಲ್ಲಾ ಸರ್ಕಾರಿ ನೌಕರಿಗಳಿಗೂ ತಪ್ಪದೇ ಅರ್ಜಿಗಳ ಹಾಕಿಸುತ್ತ ಅವನ ಪರೀಕ್ಷೆಗೆ ಬೇಕಾದ ಸಿದ್ಧತೆಗಳ ನಡೆಸಲು ಬೇಡಿಕೊಳ್ಳುವಾಗ ಅಪ್ಪನ ಈ ಚಿತ್ರಹಿಂಸೆಗೆ ಮಗ ಸಾಕಷ್ಟು ಪರೀಕ್ಷೆಗಳ ಬರೆದು, ಬರೆದು ಒಂದರಲ್ಲೂ ಆಯ್ಕೆಯಾಗದೆ ರೋಸಿ ಹೋದವನು "ಬರೀ ಸರ್ಕಾರಿ ಕೆಲ್ಸದಲ್ಲಿದ್ರಷ್ಟೇ ಅನ್ನ ಉಣ್ಣೋದ ಜನ. ಮಿಕ್ಕವರೆಲ್ಲಾ ಏನ್ ಮಣ್ಣು ತಿನ್ನಂತಾರ?" ಎಂದು ರಾಂಗ್ ಆಗಲು ಪರಮೂಗೆ ಮಗನ ಎದುರಿಸುವ ಶಕ್ತಿ ಉಡುಗಿ ಹೋಗುತ್ತಿತ್ತು. ಈ ಸರ್ಕಾರಿ ವ್ಯವಸ್ಥೆ ಮೊದಲಿನಂತಿಲ್ಲವೆಂಬುದು ಪರಮೂಗೆ ತಿಳಿಯದ ವಿಚಾರವೇನಲ್ಲ. ಆದರೂ ಅವನೊಳಗೆ ಏನೋ ಒಂದು ಬಲವಾದ ನಂಬಿಕೆ. ಯಾವುದೇ ರೀತಿಯ ಲಂಚ ನೀಡದೆ, ಶಿಫಾರಸ್ಸುಗಳಿರದೆ ಮಗ ಸರ್ಕಾರಿ ನೌಕರಿ ಪಡೆಯಬಹುದೆಂದು. ಮಗ ಇದಕ್ಕೆ ತದ್ವಿರುದ್ಧ ಇವರೆಡು ಇರದೆ ಯಾವುದೇ ಕಾರಣಕ್ಕೂ ಸರ್ಕಾರಿ ನೌಕರಿ ದಕ್ಕುವುದಿಲ್ಲವೆಂದು. ಅಪ್ಪ, ಮಗನ ಈ ಹಗ್ಗ ಜಗ್ಗಾಟದಲ್ಲಿ ಮನೆ ಮುಂದಿನ ಹಲಸಿನ ಮರದಲ್ಲಿ ಎಷ್ಟೋ ಎಲೆಗಳು ಚಿಗುರಿ–ಉದುರಿಯಾಗಿತ್ತು.

ಎರಡನೇ ಮಗಳ ಮದುವೆ ಮತ್ತು ಮಗನ ಭವಿಷ್ಯ ಪರಮೂ ಬದುಕಿನ ಆದ್ಯತೆಯಾಗಿತ್ತು. ದಿನೇದಿನೆ ಹದಗೆಡುತ್ತಿದ್ದ ತನ್ನ ಆರೋಗ್ಯದ ನಡುವೆಯು ಕೆಲಸಕ್ಕೆ ವಾಲೆಂಟರೀ ರಿಟೈರ್‌ಮೆಂಟ್ ಬರೆಯದೆ, ಮೇಲಿನ ಅಧಿಕಾರಿಗಳ ಮರ್ಜಿನಲ್ಲಿ ಬದುಕುತ್ತ ಅವರಿಂದಾಗುವ ಸಣ್ಣಪುಟ್ಟ ಅವಮಾನಗಳ ಸಹಿಸುತ್ತ ಕಾಲದೂಡಲು ಕಾರಣ ಅವನ ಸುಪ್ತ ಮನದೊಳಗಿದ್ದ ಒಂದು ವಿಕ್ಷಿಪ್ತ ಬಯಕೆ. ಇದು ಮಗ ಪ್ರತಿ ಬಾರಿ ಪರೀಕ್ಷೆ ಬರೆದು ಸರ್ಕಾರಿ ನೌಕರಿ ಪಡೆಯಲು ವಿಫಲನಾದಂತೆಲ್ಲ ಪರಮೂನ ಒಳಗೆ ಆಳವಾಗಿ ಬೇರೂರಿತ್ತು. ತಾನು ಸರ್ವೀಸ್‌ನಲ್ಲಿದ್ದಾಗಲೇ ಸತ್ತರೆ ತನ್ನ ಕೆಲಸ ಮಗನಿಗೆ ಸಿಗಬಹುದೆಂಬ ಅವನ ತರ್ಕ ಈ ವಾಲೆಂಟರೀ ರೀಟೈರ್‌ನಾ ಮುಂದೂಡುತ್ತಾ ಬಂದಿತ್ತು ಆ ಕಾರಣಕ್ಕೆ ಪರಮೂ ಈಗ ಕೆಲಸಕ್ಕಿಂತ ಹೆಚ್ಚಾಗಿ ಮಗಳಿಗೊಂದು ಗಂಡು ಹುಡುಕುವ ಬಗ್ಗೆ ಉತ್ಸುಕನಾಗಿದ್ದು, ಈ ಹೊರೆ ಇಳಿದರೆ ಮಗನ ಭವಿಷ್ಯ ಸುಗಮವೆಂದು ಅವನ ಒಳ ಮನಕ್ಕೆ ಖಾತ್ರಿಯಾಗಿತ್ತು. ಪರಮೂನ ಮಗಳು ಮನೆಯಲ್ಲಿ ಅಕ್ಕನ ಮದುವೆಯ ನಂತರ ಹೆಚ್ಚುಕಮ್ಮಿ ತನ್ನ ಅಮ್ಮನ ಪಾತ್ರವನ್ನೆ ಮಾಡುತ್ತಿದ್ದಳು. ಅಪ್ಪನಿಗೆ ಬೇಕಾದ ಔಷಧಿ, ಮಾತ್ರೆಗಳ ಸಮಯಕ್ಕೆ ಸರಿಯಾಗಿ ಊಟ, ತಿಂಡಿ ಮಾಡಿಸಿ ಕೊಡುವುದು, ತಮ್ಮನ ಬೇಕು, ಬೇಡಗಳ ಹಾದಿಯಾಗಿ ಅಮ್ಮನೊಬ್ಬಳು ಮನೆಯಲ್ಲಿದ್ದರೆ ಮಾಡುತ್ತಿದ್ದ ಅಷ್ಟು ಕರ್ತವ್ಯವನ್ನು ಈ ಹೆಣ್ಣುಮಗಳು ನಿರ್ವಹಿಸುತ್ತಿದ್ದಳು. ಇದಕ್ಕೆ ಪರಮೂ ಅವಳನ್ನು "ನನ್ನ ಎರಡನೇ ಅವ್ವ ಕಣ್ವ್ವಾ ನೀನು. ಇಲ್ಲವಾದ್ರೆ ಈ ಮನೆ ಸುಡ ಗಾಡು" ಎಂದು ಪರವಶನಾಗಲು ಅವಳು "ಯಾಕ್ ಅಪ್ಪಾಜಿ ಹಂಗೆಲ್ಲಾ ಮಾತಾಡ್ತೀಂಯಾ ಸಮ್ಮನಿರು" ಪರಮೂ "ನಿನ್ನ ಒಳ್ಳೆ ಕಡೆ ಸೇರಿಸಿ ಬುಟ್ರೆ ಸಾಕು. ನಾನು ನೆಮ್ಮದಿಯಾಗಿ ಕಣ್ಮುಚ್ತೀನಿ" ಮಗಳು "ಯಾಕೆ ಮಗ್ನ್ ಮದುವೆ ನೋಡಲ್ವಾ? ಸೊಸೆ ತಂದು ಮಾಡಿಸಿಕೊಂಡು ಉಣ್ಣೋಲ್ವಾ?" ಪರಮೂ "ಅದ್ಕೆ ನೀವು ಇದ್ದೀರಲ್ಲಾವ್ವ. ಪಾಪ ನಾನು ಸತ್ರೆ ಅಷ್ಟೇ ಅವನಿಗೆ ಬದ್ಕು" ಎನ್ನುವಾಗ ಅವನ ಕಣ್ಣಾಲಿಗಳು ನೀರಾಡುತ್ತಿದ್ದವು. ಮಗಳಿಗೆ ಇದೇಕೋ ಅತಿರೇಕವೆನಿಸಿದರು ತನ್ನ ಅಪ್ಪನ ಅಂತರಂಗದೊಳಗಿನ ಸತ್ಯ ಬಟಾಬಯಲಾಗಿತ್ತು.

ಪರಮೂಗೆ ಮೊನ್ನೆ ಮಗಳಿಗೆ ಬಂದ ಸಂಬಂಧ ಕುದುರುವುದರಲ್ಲಿತ್ತು. ಆದರೆ ಹುಡುಗಿಗೆ ಸ್ವಲ್ಪ ವಯಸ್ಸಾಗಿದೆ ಎಂಬ ಕಾರಣ ನೀಡುತ್ತ ಹಿಂಜರಿಯುವಾಗ ತುಂಬಾ ತಳಮಳಿಸಿದ್ದ. ತಕ್ಷಣ "ಹಾಗೇ ಇಲ್ರಾ, ವಸಿ ಎಣ್ಣೆ, ತುಪ್ಪ ಹೆಚ್ಚಿಗೆ ತಿಂದು ದಪ್ಪವಾಗಿ ರೋದಿಕ್ಕೆ ಹಂಗೇ ಕಾಣಸ್ತಾಳೆ. ಜತೆಗೆ ನಿಲ್ಲಿಸಿದ್ರೆ ಒಳ್ಳೆ ಜೋಡಿನೇ. ಎಲ್ಲಾ ಕೂಡಿಬಂದಿರೋವಾಗ ಹಿಂದೇಳಿಬೇಡಿ" ಎಂದು ಬೇಡುವ ದನಿಯಲ್ಲಿ ಕೇಳಿಕೊಂಡ. ಹುಡುಗನ ಕಡೆಯವರು "ಗಂಡು, ಹೆಣ್ಣಿನ ವಯಸ್ಸೇನು ಈಗ ಮೊದ್ಲಂಗೆ ಇಲ್ಲ. ಸಮ ವಯಸ್ಸಾದ್ರು ನಡೀತುದೆ. ಆದ್ರು ಹುಡುಗಿ ವಜ್ನ್ ತಕ್ಕಾಂಗೆ ಕೊಡೋದು, ಹಾಕೋದು ಆಗ್ಲೀ ಅಂತಾ ನಮ್ಮ ಆಸೆ" ಎನ್ನುತ್ತಲೆ ಪರಮೂಗೆ ಅನುಭವ ಜನ್ಯದಿಂದ ಈ ರಗಳೆ ಯಾಕೆಂದು ಅರ್ಥವಾಯಿತು. ತಾನಾಗಿ ಕೇಳಿದರೆ ಅವರ ಬೇಡಿಕೆ ಅತಿಯಾಗಬಹುದೆಂದು ಅವರಾಗೆ ಕೇಳಲೆಂದು ಮೌನವಾದ. ಆದರೆ ಈ ಮೌನ ಗಂಡಿನವರಿಗೆ ಬೇರೆಯದೆ ಸಂದೇಶ ರವಾನಿಸಿದಂತೆ ಬಹಳ ಹೊತ್ತು ಇಬ್ಬರ ನಡುವೆ ಕುಳಿತು ಕೊನೆಗೆ ಅವರು "ಸರಿ, ನಮ್ಮ ನಿರ್ಧಾರ ಮನೆಗೆ ಹೋಗಿ ತಿಳಿಸ್ತೀವಿ" ಎಂದು ಹೇಳುವಲ್ಲಿಗೆ ಮುಗಿದಿತ್ತು. ಪರಮೂ ಇದನ್ನು ನಿರೀಕ್ಷಿಸಿರಲಿಲ್ಲ. ಇದೇ ಚಿಂತೆ ಅವನನ್ನು ಇಡೀ ರಾತ್ರಿ ನಿದ್ದೆ ಕೊಡದೆ ತಲೆ ಏರಿ ಕುಳಿತು ಕುಟ್ಟುತ್ತಿದ್ದವು.

> ಯಾವುದು ಅವನ ಬಳಿ ಇರಲಿಲ್ಲ. ಆದರೆ ಅವನ ಸಾಕು ನಾಯಿ ಮಾತ್ರ ಎಲ್ಲದಕ್ಕೂ ಸಿದ್ಧವಾದಂತೆ ಅವನ ಜತೆಗಿತ್ತು. ಪೇಟೆ ಬೀದಿಗಳ ತಿರುಗುತ್ತಲೆ ಅಲ್ಲೊಂದು ಕಡೆ ಜನಗಳ 'ಹೋ..' ಎನ್ನುವ ಸದ್ದು ಜೋರಾಯಿತು. ಪರಮೂ ಅತ್ತ ನೋಡಿದ ಆನೆ ಗಾಬರಿ ಬಿದ್ದಂತೆ ತನ್ನ ಹಿಂದೆ ಬಂದವರ ಮೇಲೆ ಘೀಳಿಡುತ್ತ ಬೆನ್ನತ್ತಿ ಬರುತ್ತಿತ್ತು. ಜನ ಜೀವ ಬಾಯಿಗೆ ಬಂದಂತೆ ಓಡುತ್ತಿದ್ದರು. ಜನಗಳ ಕೂಗು, ಅಬ್ಬರ ಆನೆಯಲ್ಲಿ ದಿಗಿಲು ಹುಟ್ಟಿಸಿ ಅದು ಸಿಕ್ಕ ಸಿಕ್ಕಲ್ಲಿ ನುಗ್ಗ ತೊಡಗಿತು.


ಬೆಳ್ಳಗಿನ ವಾಕಿಂಗ್ ಹೊರಟವರಿಗೆಲ್ಲಾ ಈ ದಿನ ಗುಡ್‌ಮಾರ್ನಿಂಗ್ ಹೇಳಲು ಕಾಡಾನೆಯೊಂದು ಆಗಲೇ ಬೀದಿಗಿಳಿದಿತ್ತು. ಹೆಚ್ಚೆಂದರೆ ಅವರಿವರ ತೋಟ, ಗದ್ದೆ, ಮನೆಗಳ ಬಳಿ ಇವು ದಾಳಿಯಿಟ್ಟ ಸುದ್ದಿ ಕೇಳಿದ್ದವರು ಇಂದು ಅದು ಪೇಟೆಗೆ ಆಗಮಿಸಿದ್ದನ್ನು ಕುತೂಹಲ ಮತ್ತು ಅಚ್ಚರಿಯಿಂದ ನೋಡುತ್ತಿದ್ದರು. ಪೇಟೆ ಬೀದಿಯ ರಸ್ತೆಗಳನ್ನೆ ಅದಕ್ಕೆ ಖಾಲಿ ಬಿಟ್ಟು ತಾವು ತಮ್ಮ ದಿನನಿತ್ಯದ ಮಾರ್ಗಗಳನ್ನು ಬದಲಿಸಿದ್ದರು. ಕೆಲವರು ಇದರ ಮುಂದಿನ ನಡೆಯ ಗಮನಿಸುತ್ತ, ಅದರ ಕಣ್ಣಿಗೆ ಬೀಳದಂತೆ ಹಿಂಬಾಲಿಸುತ್ತಿದ್ದರು. ಈ ಸುದ್ದಿ ಅಲ್ಲಿನ ಸ್ಥಳೀಯರಿಂದ ನೇರ ರೇಂಜರ್ ಸಾಹೇಬನಿಗೆ ಹೋಗಿದ್ದೆ, ಸುಖ ನಿದ್ದೆಯಲ್ಲಿದ್ದವನ ಸ್ವತಃ ಆನೆಯೇ ತುಳಿದಂತೆ ಭಾಸನಾದ. ಹಾಸಿಗೆ ಬಿಟ್ಟು ಏಳುವ ಯಾವ ಇರಾದೆಗಳು ಅವನಿಗೆ ಸದ್ಯಕ್ಕೆ ಇಲ್ಲದ ಕಾರಣ ಮಲಗಿದ್ದಲ್ಲೆ ಪರಮೂನಿಗೆ ಕರೆ ಮಾಡಿ ಆಜ್ಞೆ ಮಾಡಿದ. ಆನೆ ಪೇಟೆ ಬೀದಿಯಲ್ಲಿ ಯಾವ ಅಂಗಡಿ, ಮುಂಗಟ್ಟುಗಳು ತೆರೆಯದೆ, ಜನಜಂಗುಳಿಯಿರದ ಕಾರಣ ಹಾನಿರಹಿತ ತನ್ನ ಪಯಣವನ್ನು ವಿರಾಜಮಾನವಾಗಿ ನಡೆಸಿತ್ತು. ಸುದ್ದಿ ತಲುಪಿದ ಪರಮೂನಿಗೆ ಏನು ಮಾಡಲು ತೋಚಲಿಲ್ಲವಾದ್ರು, ಏನಾದರು ಮಾಡಲೇಬೇಕಾದ ಅನಿವಾರ್ಯತೆಯಿತ್ತು. ಆ ಕಾಡಿನಿಂದ ಆನೆ ಈ ಪೇಟೆಗೆ ಬಂದಿದ್ದಾರು ಹೇಗೆಂದು ತನ್ನನ್ನೆ ಕೇಳಿಕೊಳ್ಳುತ್ತ, ಕಣ್ಣಗಳಲ್ಲಿದ್ದ ನಿದ್ರೆಯನ್ನು ಬಿಡಿಸಲು ಮುಖಕ್ಕೆ ರಪರಪನೆ ಐದಾರು ಬಾರಿ ನೀರು ಎರಚಿಕೊಂಡ. ಮರಳಿ ಬಂದು ತೂಗು ಹಾಕಿದ್ದ ಖಾಕಿ ಪ್ಯಾಂಟ್‌ನ್ನು ಕ್ಷಣದಲ್ಲಿ ಹಾಕಿಕೊಂಡವನು ಮನೆಯಲ್ಲಿ ಮಗಳಿಗೂ ಹೇಳದೆ ತನ್ನ ಶೂ ಬದಲು ಹಳೇ ಹವಾಯಿ ಚಪ್ಪಲಿ ಧರಿಸಿ ಹೊರಟ. ಪರಮೂನ ಹಿಂದೆ ಅವನು ಸಾಕಿದ್ದ ನಾಯಿ ಕೂಡ ಶಿಸ್ತಿನ ಸಿಪಾಯಿಯಂತೆ ಹಿಂಬಾಲಿಸಿತು. ಪರಮೂ "ಥೂ ಹಚಾ.. ಇದು ಬೇರೆ" ಎಂದು ಗದರಿದರು ಅದು ಹಿಂದೆ ಉಳಿಯಲಿಲ್ಲ.

ಪೇಟೆ ಬೀದಿಗೆ ಬರುವ ವೇಳೆಗೆ ಬೆಳಕು ಸ್ಪಷ್ಟವಾಗಿತ್ತು. ಇಲ್ಲಿಂದ ಆನೆಯನ್ನು ಎಲ್ಲಿ ಹುಡುಕುವುದು ಎಂಬುದೇ ಪರಮೂಗೆ ಚಿಂತೆಯಾಯಿತು. ರಸ್ತೆಯಲ್ಲಿ ಸಿಕ್ಕವರ ಬಳಿ ಶಾಲೆಯಿಂದ ಇನ್ನೂ ಬಾರದ ಮಕ್ಕಳನ್ನು ಪೋಷಕರು 'ನಮ್ಮ ಮಗು ನೋಡಿದ್ರಾ?' ಎನ್ನುವಂತೆ ಪರಮೂ "ಇಲ್ಲಿ ಎಲ್ಲಾದ್ರು ನಮ್ಮ ಆನೆ ನೋಡಿದ್ರಾ?" ಎಂದು ಕೇಳುತ್ತ ಹೋದ. ಆ ಆನೆಯೋ ಅತ್ತ ದೊಡ್ಡದು ಅಲ್ಲದ, ಇತ್ತ ಸಣ್ಣದು ಅಲ್ಲದ ಪ್ರಾಯದಾಗಿದ್ದು, ಕಾಡಂಚಿನಲ್ಲಿ ಆಹಾರ ಅರಸಿ ಬಂದು ಎಲ್ಲೋ ದಾರಿ ತಪ್ಪಿಸಿಕೊಂಡಂತೆ ಪೇಟೆ ಬೀದಿಯ ಅವತಾರವನ್ನು ವಿಚಿತ್ರವಾಗಿ ನೋಡುತ್ತ ಇಲ್ಲಿಂದ ಮೊದಲು ಕಾಲು ಕೀಳಲು ದಾರಿ ಹುಡು ಕುತ್ತಿತ್ತು. ಬೆಳಕಾದಂತೆ ಜನ ಆನೆಯನ್ನು ಕಂಡವರು, ಇದನ್ನು ತಮ್ಮವರಿಗೂ, ಅಕ್ಕ– ಪಕ್ಕದ ಮಕ್ಕಳಿಗೂ ಉತ್ಸಾಹಕತೆಯಿಂದ ತೋರಿಸಲು 'ಆನೆ ಬಂದಿದೆ ನೋಡ ಬನ್ನಿ' ಎಂದು ಕರೆಯುತ್ತಿದ್ದರು. ಪರಮೂಗೆ ಮಾತ್ರ ಆನೆಯನ್ನು ಎದುರಿಸುವುದಿರಲಿ ಈ ಜನಗಳನ್ನು ಸಂಭಾಳಿಸುವುದೇಗೆಂದು ಚಿಂತೆಯಾಯಿತು. ಇತರೆ ಸಿಬ್ಬಂದಿ, ಆನೆ ಓಡಿಸಲು ಬೇಕಾದ ಉಪಕರಣಗಳು ಯಾವುದು ಅವನ ಬಳಿಯಿರಲಿಲ್ಲ. ಆದರೆ ಅವನ ಸಾಕು ನಾಯಿ ಮಾತ್ರ ಎಲ್ಲದಕ್ಕೂ ಸಿದ್ಧವಾದಂತೆ ಅವನ ಜತೆಗಿತ್ತು. ಪೇಟೆ ಬೀದಿಗಳ ತಿರುಗುತ್ತಲೆ ಅಲ್ಲೊಂದು ಕಡೆ ಜನಗಳ 'ಹೋ..' ಎನ್ನುವ ಸದ್ದು ಜೋರಾಯಿತು. ಪರಮೂ ಅತ್ತ ನೋಡಿದ ಆನೆ ಗಾಬರಿ ಬಿದ್ದಂತೆ ತನ್ನ ಹಿಂದೆ ಬಂದವರ ಮೇಲೆ ಘೀಳಿಡುತ್ತ ಬೆನ್ನತ್ತಿ ಬರುತ್ತಿತ್ತು. ಜನ ಜೀವ ಬಾಯಿಗೆ ಬಂದಂತೆ ಓಡುತ್ತಿದ್ದರು. ಜನಗಳ ಕೂಗು, ಅಬ್ಬರ ಆನೆಗೆ ದಿಗಿಲು ಹುಟ್ಟಿಸಿ ಅದು ಸಿಕ್ಕ ಸಿಕ್ಕಲ್ಲಿ ನುಗ್ಗ ತೊಡಗಿತು.

ಪರಿಸ್ಥಿತಿಯ ಅರಿತುಕೊಂಡ ಪರಮೂ ತನ್ನ ಸಾಹೇಬರಿಗೆ ಕರೆ ಮಾಡಿ "ಸಾರ್ ಇದ್ಯಾವುದೋ ಕಾಡಾನೆ ದಾರಿ ತಪ್ಪಿ ಬಂದಿದೆ. ಜನ ಗಾಬ್ರಿ ಬಿದ್ದಿದ್ದಾರೆ. ನೀವು ಸ್ವಲ್ಪ ಬೇಗ ಬಂದ್ರೆ ಅದ್ನ್ ಕಾಡಿಗಟ್ಟಬೌದು" ಎಂದು ವರದಿ ಒಪ್ಪಿಸಿದ. ಆದರೆ ಇಲ್ಲಿ ನಿಜವಾಗಲೂ ಗಾಬರಿ ಬಿದ್ದಿದ್ದು ಆನೆಯಾಗಿದ್ದು ಅದನ್ನು ಎದುರಿಸುವ ರಣೋತ್ಸವವನ್ನು ಈ ಜನ ತೋರಿಸುತ್ತಿದ್ದರು. ಪರಮೂ "ಹ್ಹೇ ಅದ್ರೂ ಪಾಡಿಗೆ ಹೋಗುತ್ತೆ ಬಿಡ್ರೀ. ಯಾಕೆ ಅದ್ರ ಹಿಂದೆ ಬಿದ್ದು ಕೂಗಿ, ಅರುಚಿ ಭಯಪಡುಸ್ತೀರಾ" ಎಂದು ಎಷ್ಟು ಕೇಳಿಕೊಂಡರು ಜನ ಕೇಳುತ್ತಿರಲಿಲ್ಲ. ಅದು ಮುಂದೆ ನಡೆದಂತೆಲ್ಲಾ ಇವರು ಹಿಂದೆ ಹೋಗುತ್ತಿದ್ದರು. ಪೇಟೆ ಬೀದಿಯ ನಾಯಿಗಳಂತೂ ಹಿಂಡಿನಲ್ಲಿ ಬಂದು ಆನೆಯ ಕಂಡು ಬೊಗಳುತ್ತಿದ್ದವಾದರೂ, ಮುಂದೆ ಹೋಗುವ ಧೈರ್ಯ ಮಾಡುತ್ತಿರಲಿಲ್ಲ. ಇದರಲ್ಲಿ ಪರಮೂನ ನಾಯಿ ಕೂಡ ಇನ್ನೇನೂ ಆ ಆನೆಯನ್ನು ಮಣಿಸಿ ಬಿಡುವಂತೆ ಆರ್ಭಟಿಸುತ್ತಿತ್ತು. ಆನೆ ಇದಕ್ಕೆ ಕೇರ್ ಮಾಡಿದಂತಿರಲಿಲ್ಲ. ಅದರ ಒಂದು ತಿರುಗು ನೋಟಕ್ಕೂ, ಸೊಂಡಿಲಾಡಿಸುವ ರಭಸಕ್ಕೂ ಇವೆಲ್ಲಾ ಧೂಳೀಪಟವಾಗಿ ಬಿಡುತ್ತಿದ್ದವು. ಹೊತ್ತು ಏರಿದಂತೆಲ್ಲಾ ಖಾಲಿ ಹೊಟ್ಟೆಯಲ್ಲಿ ತೆಗೆದುಕೊಳ್ಳಬೇಕಾದ ಮಾತ್ರೆ ಇಲ್ಲದ ಕಾರಣ ಪರಮೂನ ದೇಹದ ಬಳಲಿಕೆ ಹೆಚ್ಚಾಯಿತು. ಜನ ಆನೆ ನೋಡುವ ಸಲುವಾಗಿ ಎಲ್ಲಿ, ಎಲ್ಲಿಂದಲೋ ಸುದ್ದಿ ತಿಳಿದು ಬಂದು ಸೇರತೊಡಗಿದರು. ಪರಮೂ ಅಸಹಾಯಕನಾಗಿ ನಿಂತಿದ್ದ. ಇಲ್ಲಿಯ ತನಕ ಆತಂಕದಿಂದ ಇದ್ದ ಆನೆಯ ವರ್ತನೆಯಲ್ಲಿ ಬದಲಾವಣೆಗಳು ಕಾಣಿಸುತ್ತ ಅಪಾಯ ಗುರುತಿಸಿದಂತೆ ಅದು ಆಕ್ರೋಶಕ್ಕೆ ತಿರುಗಿತ್ತು. ತನ್ನ ದಾರಿಯಲ್ಲಿ ಸರಾಗವಾಗಿ ಸಾಗದೆ ಸಿಕ್ಕವರ ಮೇಲೆ ದಾಳಿ ಮಾಡಲಾರಂಭಿಸಿತು. ಅದು ಜನರ ಗುಂಪಿನತ್ತ ಧಾವಿಸಿ ಬರುತ್ತ ಭಯದ ವಾತಾವರಣವನ್ನು ಉಲ್ಬಣಗೊಳಿಸಿತು. ಪರಮೂಗೆ ಇನ್ನೂ ಈ ಆನೆಯನ್ನು ಸಮಾಧಾನಗೊಳಿಸುವುದೆಲ್ಲಾ ದೂರದ ಮಾತೆಂದು ಮನವರಿಕೆಯಾಯಿತು. ಅವನ ನಾಯಿ ತನ್ನ ದೇಹದ ಬಲವನ್ನೆಲ್ಲಾ ಬಿಟ್ಟು ಆನೆಯತ್ತ ಬೊಗಳುವಾಗ ಪರಮೂಗೆ ಸಿಟ್ಟು ಬಂದು "ಥೂ ನಾಯೀ, ಅದರ ಮೂಂದೋದ್ರೇ ನಿನ್ನ ಗುರುತು ಸಿಗೋದಿಲ್ಲ" ಎಂದು ಗದರಿದ. ನಾಯಿಗೆ ಈ ಮಾತು ಅರ್ಥವಾಯಿತೇನೋ? ಅವಮಾನವಾದಂತಾಗಿ ಸುಮ್ಮನಾಯಿತು.

ಆನೆಯಿಂದ ದಾಳಿಗಳು ನಡೆಯುತ್ತ ಎಲ್ಲಾ ನಾಶವಾಗುತ್ತಿದ್ದ ಕಾರಣ ಜನ ಗುಂಪಾಗಿ ದೊಣ್ಣೆ, ಬಡಿಗೆಗಳ ಹಿಡಿದು ಆನೆಯನ್ನು ಹಿಮ್ಮೆಟ್ಟಿಸಲು ಅರಣ್ಯ ಇಲಾಖೆಯವರಿಗೆ ಕಾಯದೇ ತಾವೇ ಮುಂದಾಗಲು ನಿರ್ಧಾರ ಮಾಡಿದರು. ಪರಮೂಗೆ ಈ ನಿರ್ಧಾರ ಮೂರ್ಖತನದ್ದ ಎನಿಸಿತು. ಜನ ಅಂದುಕೊಂಡಷ್ಟು ಸುಲಭವಾಗಿ ಆನೆಯನ್ನು ಬಡಿಯಲಾಗಲಿಲ್ಲ. ಅದರ ಆಕಾರವೇ ಹತ್ತಿರ ಬರುತ್ತಿದ್ದಂತೆ ಅವರ ಉಸಿರು ಕಟ್ಟಿಸಿ ಬಿಡುತ್ತಿತ್ತು ಎಲ್ಲೆಲ್ಲೋ ಪಟಾಕಿಗಳು ಸಿಡಿಯುತ್ತಿದ್ದವು. ಇದೆಲ್ಲಾ ಆನೆಯನ್ನು ಮತ್ತಷ್ಟು ಕೆರಳಿಸಿದಂತೆ ಅದು ಓಡುವಾಗ ಸಿಕ್ಕಿದ್ದೆಲ್ಲಾ ಪುಡಿಪುಡಿಯಾಗುತ್ತಿತ್ತು. ಪರಮೂ ತನ್ನ ಕಣ್ಮುಂದೆ ನಡೆಯುತ್ತಿದ್ದ ಈ ಆನೆ ಮತ್ತು ಮನುಷ್ಯರ ನಡುವಿನ ಕಾಳಗವನ್ನು ವಿಷಾದದಿಂದ ನೋಡುತ್ತಿದ್ದ. ಬದುಕಲು ಹೋರಾಟ ನಡೆಸುವ ಈ ಕ್ರಿಯೆ ತೀರ ಅಸನೀಯವೆನಿಸಿತು. ಪರಮೂ ಕುಳಿತಲ್ಲಿಂದ ಕದಲದೆ ಆನೆಯ ಸ್ಥಿತಿಯ ಬಗ್ಗೆ ಮರುಕವನ್ನು, ಮನುಷ್ಯರ ವರ್ತನೆ ಬಗ್ಗೆ ಬೇಸರವನ್ನು ವ್ಯಕ್ತಪಡಿಸಿದ. ಇದರಲ್ಲೇ ಅವನ ಬದುಕಿನ ನಿರಾಶೆಗಳು ಸೇರಿಕೊಂಡು ಕೈ, ಕಾಲು ಬಿಗಿದವು. ಅವನ ಸಾಕು ನಾಯಿ ಆನೆ ಇತ್ತ ಕಡೆ ಓಡಿ ಬರುವುದನ್ನು ಮೊದಲಿಗೆ ಗುರುತಿಸಿ ಅಪಾಯವೆನಿಸಿ ಜೋರಾಗಿ ಬೊಗಳಲು ಆರಂಭಿಸಿತು. ಪರಮೂನ ಅಪಾಯದಿಂದ ರಕ್ಷಿಸಲು ತನ್ನಿಂದಾದಷ್ಟು ಎಳೆದಾಡುವಾಗ ಅವನು ಬಳಲಿಕೆಯ ಜತೆಗೆ ಹೆಚ್ಚು ಭಾವುಕನಾದ. ಆನೆ ಅವನ ಹತ್ತಿರಕ್ಕೆ ಸಮೀಪಿಸಿಯಾಗಿತ್ತು. ಮಗಳ ಮದುವೆ, ಮಗನ ಕೆಲಸದ ಆಸೆ ಒಂದೆಡೆ ಮಿಳಿತವಾದಂತೆ ಇವೆಲ್ಲಾ ತನ್ನ ಸಾವಿನ ಮೂಲಕ ಸುಖಾಂತ್ಯ ಕಾಣಬಹುದೆಂಬ ಭರವಸೆ ಬಂತು. ಇದರಿಂದ ತುಟಸ್ಥವಾಗಿ ನೆಲದ ಮೇಲೆ ಬಳಲಿಕೆಯಿಂದ ಕುಳಿತ ಪರಮೂ ಆನೆಯನ್ನು ನಿರಾಯುಧನಾಗಿ ಎದುರಿಸಲಾರದೆ ತೇವವಾದ ಕಣ್ಣುಗಳಿಂದ ಒಮ್ಮೆ ತುಂಬಿಕೊಂಡನಷ್ಟೇ. ಅವನನ್ನು ಕಾಡಾನೆ ಇಡುಗಾಯಿಯಂತೆ ಒಂದೇ ಸಾರಿಗೆ ಮೇಲಕ್ಕೆತ್ತಿ ಕೆಳಗೆ ಕುಕ್ಕಿ ಬಿಟ್ಟಿತು. ಈ ದೃಶ್ಯ ದೂರದಿಂದ ನಿಂತು ನೋಡುವವರ ಜೀವ ನಡುಗಿಸಿತು. ಅವನ ನಾಯಿ ಆಕ್ರೋಶಭರಿತವಾಗಿ ಧೈರ್ಯ ಮಾಡಿ ಮುನ್ನುಗ್ಗಿ ಆನೆಯ ಹಿಂದಿನ ಕಾಲು ಕಚ್ಚಿತಾದರು, ಆ ವೇಳೆಗೆ ಪರಮೂ ನಿರ್ಜೀವವಾಗಿದ್ದ. ನಿರಂತರವಾದ ಈ ಪ್ರಾಣಿ–ಮಾನವ ಸಂಘರ್ಷದ ಸಾವಿನ ಸಂಖ್ಯೆಗೆ ಮತ್ತೊಂದು ಸೇರ್ಪಡೆಯಾಗಿತ್ತು.

> "ಬರೀ ಸರ್ಕಾರಿ ಕೆಲ್ಸದಲ್ಲಿದ್ರಷ್ಟೇ ಅನ್ನ ಉಣ್ಣೋದ ಜನ. ಮಿಕ್ಕವರೆಲ್ಲಾ ಏನ್ ಮಣ್ಣು ತಿನ್ನಂತಾರ?" ಎಂದು ರಾಂಗ್ ಆಗಲು ಪರಮೂಗೆ ಮಗನ ಎದುರಿಸುವ ಶಕ್ತಿ ಉದುಗಿ ಹೋಗುತ್ತಿತ್ತು. ಈ ಸರ್ಕಾರಿ ವ್ಯವಸ್ಥೆ ಮೊದಲಿನಂತಿಲ್ಲವೆಂಬುದು ಪರಮೂಗೆ ತಿಳಿಯದ ವಿಚಾರ ವೇನಲ್ಲ. ಆದರೂ ಅವನೊಳಗೆ ಏನೋ ಒಂದು ಬಲವಾದ ನಂಬಿಕೆ. ಯಾವುದೇ ರೀತಿಯ ಲಂಚ ನೀಡದೆ, ಶಿಫಾರಸ್ಸುಗಳಿರದೆ ಮಗ ಸರ್ಕಾರಿ ನೌಕರಿ ಪಡೆಯಬಹುದೆಂದು. ಮಗ ಇದಕ್ಕೆ ತದ್ವಿರುದ್ಧ ಇವರೆಡು ಇರದೆ ಯಾವುದೇ ಕಾರಣಕ್ಕೂ ಸರ್ಕಾರಿ ನೌಕರಿ ದಕ್ಕುವುದಿಲ್ಲವೆಂದು. ಅಪ್ಪ, ಮಗನ ಈ ಹಗ್ಗ ಜಗ್ಗಾಟದಲ್ಲಿ ಮನೆ ಮುಂದಿನ ಹಲಸಿನ ಮರದಲ್ಲಿ ಎಷ್ಟೋ ಎಲೆಗಳು ಚಿಗುರಿ–ಉದುರಿಯಾಗಿತ್ತು.



ವಾರಭವಿಷ್ಯ

28.4.2024 ರಿಂದ 4.5.2024

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ: ರವಿ–ಮೇಷ, ಚಂದ್ರ–ಧನುಸ್ಸು, ಮಕರ, ಕುಂಭ, ಕುಜ–ಮೀನ, ಬುಧ–ಮೀನ, ಗುರು–ಮೇಷ, ವೃಷಭ, ಶುಕ್ರ– ಮೇಷ, ಶನಿ–ಕುಂಭ, ರಾಹು–ಮೀನ ಮತ್ತು ಕೇತು–ಕನ್ಯಾ

ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ,
೧ ಹಂತ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ.9740973224, 9739548720



ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)

ಸಪ್ತಾಹದ ಆದಿಗೆ ಮನಸ್ಸಿಗೆ ಮುಜುಗರ ಆಗುವಂತಹ ಪ್ರಸಂಗಗಳು ಘಟಿಸಬಹುದು. ಯಾವುದೇ ವಿಚಾರದಲ್ಲಿ ಸತ್ಯವನ್ನು ಅರಿತು ವ್ಯವಹರಿಸಿರಿ. ಅನ್ಯಥಾ ಮೋಸ ಹೋಗುವ ಸಾಧ್ಯತೆ ಇರುತ್ತದೆ. ಹಿರಿಯರ, ಗುರುಜನರ ಮಾರ್ಗದರ್ಶನ ಪಡೆಯುವುದು ಒಳ್ಳೆಯದು. ವಾರಾಂತ್ಯಕ್ಕೆ ನಿರೀಕ್ಷಿಸಿದ್ದ ಹಣ ಕೈ ಸೇರುವುದು. ಮನೆ ಮಂದಿಯ ಜೊತೆಗೂಡಿ ಲಘು ಪ್ರವಾಸಗಳು.

ಶ್ರೀ ಸುಬ್ರಹ್ಮಣ್ಯ ಸ್ತುತಿ. ಶುಭ ಸಂಖ್ಯೆ–2.

ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)

'ಚಿತ್ರದಲ್ಲಿರುವ ಕುಂಬಳಕಾಯಿ ಪಲ್ಯಕ್ಕೆ ಬರದು. ಭಯ, ಹೆದರಿಕೆ ಮತ್ತು ಆಕಸ್ಮಿಕ ಘಟನೆಗಳು ಸಂಭವಿಸುವುದು. ಬಂಧು ಜನರ ವಿರೋಧ. ಪರಸ್ಥಳಕ್ಕೆ ಪ್ರಯಾಣ, ಶರೀರಾಲಸ್ಯಗಳು. ವಾರ ಮಧ್ಯಾನಂತರ ಇಷ್ಟ ಕಾರ್ಯ ಸಿದ್ಧಿ, ಧನಪ್ರಾಪ್ತಿ, ಸ್ನೇಹಿತರೊಂದಿಗೆ ಬೆರೆತು ಹರ್ಷ ಚಿತ್ತರಾಗಿರುವಿರಿ. ಇವೆಂಟ್ ಮ್ಯಾನೇಜ್‌ಮೆಂಟ್‌ನವರಿಗೆ ಕೈ ತುಂಬಾ ಸಂಪಾದನೆಯಾಗುವುದು.ಶುಕ್ರ ಬಲದಿಂದ ಮನಸ್ಸಿಗೆ ಮುದ ನೀಡುವ ಪ್ರಸಂಗಗಳು ನಡೆಯುವುದು. ಶ್ರೀ ಮಹಾಲಕ್ಷ್ಮೀ ಅಷ್ಟಕ ಪಠಿಸಿ. ಶುಭ ಸಂಖ್ಯೆ–8

ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)

'ಮಿತವಾಗಿದ್ದರೆ ಹಿತವಾದದ್ದು ಫಲಿಸುತ್ತೆ' ಎಂಬಂತೆ ವ್ಯಯ ಸ್ಥಾನಕ್ಕೆ ಚಲಿಸಿರುವ ಗುರುದೇವ ಅತಿ ಲಾಭದ ಆಸೆಯಿಂದ ವ್ಯಸನಕ್ಕೆ ಕಾರಣನಾಗುವನು. ಫೈನಾನ್ಸ್ ವ್ಯವಹಾರ ಮಾಡುವವರು ಎಚ್ಚರವಾಗಿರಬೇಕು. ನ್ಯಾಯಾಲಯ, ಕಚೇರಿ ಕೆಲಸಗಳು ಕುಂಟುತ್ತಾ ಸಾಗುತ್ತವೆ. ವಾರದ ಕಡೆಗೆ ಮನಸ್ಸಿಗೆ ಮುದ ನೀಡುವ ಪ್ರಸಂಗಗಳು ನಡೆಯುವುದು. ಏಜೆನ್ಸಿ ವ್ಯವಹಾರಗಳು ಲಾಭಪ್ರದವಾಗಿ ನಡೆಯುವುದು.

ಶ್ರೀ ಶ್ರೀನಿವಾಸ–ಪದ್ಮಾವತಿ ದರ್ಶನ. ಶುಭ ಸಂಖ್ಯೆ–8.

ಕಟಕ (ಹೀ.ಹು.ಹೆ.ಹೊ.ಡ.ಡಿ.ಡು)

ಏಕಾದಶ ಲಾಭ ಸ್ಥಾನಕ್ಕೆ ಆಗಮಿಸಿರುವ ಗುರುದೇವನಿಂದ ಹಣಕಾಸಿನ ಪರಿಸ್ಥಿತಿ ಸಮಾಧಾನಕರವಾಗಿರುವುದು. ನಿಮ್ಮ ಮನೋಕಾಮನೆಗಳು ಈಡೇರಲು ಕಾಲ ಪಕ್ವವಾಗಿದೆ. ನಿಮ್ಮ ಸ್ಥಾನಮಾನಗಳಲ್ಲಿ ವೃದ್ಧಿಯನ್ನು ಕಾಣುವಿರಿ. ಮನೆಯಲ್ಲಿ ಪೂಜೆ, ಪುನಸ್ಕಾರಗಳು ಜರುಗುವುದು. ರಾಜಕಾರಣಿಗಳಿಗೆ ಶುಭ ಸಮಯ. ವಾರಾಂತ್ಯಕ್ಕೆ ವೈದ್ಯರ ಭೇಟಿ ಅನಿವಾರ್ಯವೆನಿಸುವುದು.

ಶ್ರೀ ಶಿವಪಂಚಾಕ್ಷರಿ ಮಂತ್ರ ಜಪಿಸಿ. ಶುಭ ಸಂಖ್ಯೆ–8

ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)

ನಿಮ್ಮ ವೈಯಕ್ತಿಕ ಪ್ರಭಾವದಿಂದ ಕೆಲಸ ಕಾರ್ಯಗಳು ಮುಂದುವರೆಯುವುದು. ಬಿಲ್ಡಿಂಗ್ ಕಂಟ್ರಾಕ್ಟರುಗಳಿಗೆ ಹೊಸ ಯೋಜನೆಗಳು ದೊರಕುತ್ತದೆ. ವಿದ್ಯಾರ್ಥಿಗಳಿಗೆ ಉತ್ತಮ ಫಲಿತಾಂಶ ಬಂದು ಪ್ರಶಂಸೆಗೆ ಗುರಿಯಾಗುವರು. ವಿವಾಹಯೋಗ್ಯರಿಗೆ ಸೂಕ್ತ ವಧು–ವರರು ದೊರಕುವ ಸಾಧ್ಯತೆ ಇದೆ. ದೀರ್ಘ ಪ್ರವಾಸಗಳನ್ನು ತೀವ್ರ ಬಿಸಿಲಿನ ಕಾರಣ ಮುಂದೂಡಿ. ಸಂಧಿವಾತ, ಮಂಡಿನೋವು ತೀವ್ರವಾಗಬಹುದು.

ಶ್ರೀ ಸೂರ್ಯನಾರಾಯಣ ಸ್ತುತಿ. ಶುಭ ಸಂಖ್ಯೆ–5

ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)

ಶುಭ ಸಮಾಚಾರ ಬರುವುದರಿಂದ ವಾರಕ್ಕೆ ಸ್ವಾಗತ. ಗುರುಕೃಪೆಯಿಂದ ನಿರೀಕ್ಷಿತ ಹಣ ಕೈಗೆ ಬರುವುದು. ತುಂಬಾ ದಿನಗಳಿಂದ ಸತಾಯಿಸಿದ್ದ ಕೆಲಸ ಕಾರ್ಯಗಳು ಮುನ್ನಡೆಯುತ್ತವೆ. ಹಳೇ ವಾಹನ ಮಾರಲು ಹಾಗೂ ಹೊಸ ವಾಹನ ಮನೆಗೆ ತರಲು ಗ್ರಹಾನುಕೂಲವಿದೆ. ಆಪ್ತ ಬಂಧು ವರ್ಗದವರ ಆದರ, ಸ್ತ್ರೀ ಸುಖಾದಿಗಳು ಪ್ರಾಪ್ತಿ. ಸರ್ಕಾರಿ ನೌಕರರಿಗೆ ಲೋಕಾಯುಕ್ತದಿಂದ ತೊಂದರೆ ಸಂಭವ.

ಶ್ರೀ ಶ್ರೀನಿವಾಸಸ್ವಾಮಿ ಅರ್ಚನೆ. ಶುಭ ಸಂಖ್ಯೆ–5

ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)

ಗುರು–ಶನಿ ಗ್ರಹಗಳು ನಿಮ್ಮ ಯೋಚನೆ ಹಾಗೂ ಯೋಜನೆಗಳಿಗೆ ಪೂರಕ ಶಕ್ತಿಯನ್ನು ನೀಡುತ್ತಿಲ್ಲ. 'ರೀತಿಗೆಟ್ಟರೂ ನೀತಿಗೆಡಬೇಡಿ' ಸತಿ–ಪತಿಯರು ಉತ್ತರ–ದಕ್ಷಿಣ ಆಗದಂತೆ ವರ್ತಿಸಿ. ಮನೆ ಸಮಸ್ಯೆ ಮನೆಯೊಳಗೇ ಪರಿಹಾರವಾಗಲಿ. ವಾರದ ಉತ್ತರಾರ್ಧಕ್ಕೆ ಧನ–ಧಾನ್ಯ ಲಾಭ. ಕೃಷಿ ಉತ್ಪನ್ನಗಳಿಗೆ ಉತ್ತಮ ಬೆಲೆ ದೊರೆಯುವುದು. ಮನೆಗೆ ಆಪ್ತೇಷ್ಟರ ಆಗಮನದಿಂದ ಮನಸ್ಸಂತೋಷ.

ಶ್ರೀ ರಾಜರಾಜೇಶ್ವರಿ ಅಷ್ಟಕ ಪಠಿಸಿ. ಶುಭ ಸಂಖ್ಯೆ–6

ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯ.ಯಿ.ಯು

ವಾರದಾರಂಭಕ್ಕೆ ಧನ ಸಂಪಾದನೆಯಿಂದಲೂ, ಶುಭ ವಾರ್ತೆ ಬರುವುದರಿಂದಲೂ ಹರ್ಷಚಿತ್ತರಾಗಿರುವಿರಿ. ದೈನಂದಿನ ಕೆಲಸಗಳನ್ನು ಆಸಕ್ತಿಯಿಂದ ನಿರ್ವಹಿಸಿ ಉತ್ತಮ ಫಲ ದೊರೆಯುವುದು. ವಿದ್ಯಾರ್ಥಿಗಳು ತಮ್ಮ ಪ್ರಾಜೆಕ್ಟ್ ವರ್ಕ್ ಅನ್ನು ಹೆಚ್ಚಿನ ಶ್ರಮವಿಲ್ಲದೇ ಮುಗಿಸುವರು. ನಿಮ್ಮ ಆಸ್ತಿ–ಪಾಸ್ತಿಗಳನ್ನು ವೃದ್ಧಿಗೊಳಿಸಲು ಗುರುಕೃಪೆ ಆರಂಭವಾಗಿದೆ. ವಾರದಲ್ಲಿ ಸ್ನಾಯು ಸೆಳೆತ ಕಾಡಬಹುದು.

ಶ್ರೀ ನೃಸಿಂಹಸ್ವಾಮಿ ದರ್ಶನ. ಶುಭ ಸಂಖ್ಯೆ–9

ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)

ವಾರದ ಆದಿಗೆ ನೂತನ ದುಬಾರಿ ಗೃಹಬಳಕೆ ವಸ್ತುಗಳನ್ನು ಖರೀದಿಸುವಿರಿ. ನಿಮ್ಮ ರಾಶಿಗೆ ಪ್ರವೇಶ ಮಾಡುವ ಚಂದ್ರ ಮನಸ್ಸಿಗೆ ಹರ್ಷ, ಉಲ್ಲಾಸಗಳನ್ನು ತರಲಿದ್ದಾನೆ. ನಿತ್ಯದ ಕೆಲಸ ಕಾರ್ಯಗಳು ತ್ವರಿತ ಗತಿಯಲ್ಲಿ ಮುಂದೆ ಸಾಗುವುದು. ಮಾತೃಶ್ರೀಯವರ ಸಹಕಾರದಿಂದ ಆಸ್ತಿ ಹೊಂದುವ ಯೋಗವಿದೆ. ಯುವಕರು ಹೆಂಗಳೆಯರ ಮನಸ್ಸನ್ನು ಗೆಲ್ಲುವರು. ಆನ್‌ಲೈನ್ ಮೋಸಗಾರರಿಂದ ಎಚ್ಚರವಾಗಿರಿ.

ಶ್ರೀ ಮನ್ನಾರಾಯಣ ನಾಮ ಸ್ತುತಿ. ಶುಭ ಸಂಖ್ಯೆ–1

ಮಕರ (ಬೋ.ಜ.ಜೆ.ಖಿ.ಖು.ಖೆ.ಖೊ.ಗ.ಗಿ.)

ವಾರದಾರಂಭಕ್ಕೆ ಶುಭ ಸುದ್ದಿಯೊಂದು ಬರಲಿದೆ. ನಿಮ್ಮ ಬಹುಕಾಲದ ಇಷ್ಟವು ಸಿದ್ಧಿಸಲು ಗುರುಬಲ ಬಂದಿದೆ. ನೂತನ ವಸ್ತ್ರ, ವಾಹನ ಖರೀದಿ ಯೋಗವಿದೆ. ಬಂಧು–ಬಾಂಧವರ ಮಿಲನ ನಿಮ್ಮನ್ನು ಪುಳಕಿತಗೊಳಿಸುವುದು. ವಾರ ಮಧ್ಯೆ ಪುಣ್ಯ ಕೆಲಸಗಳಲ್ಲಿ ಭಾಗಿಯಾಗುವಿರಿ. ಸರ್ಕಾರಿ ಕಚೇರಿಗಳಿಗೆ ಸುಮ್ಮನೆ ಎಡತಾಕುವಿರಿ. ಅನಾರೋಗ್ಯ ಶಿರೋಬಾಧೆ ಕಾಡಿಸುತ್ತದೆ.

ಶ್ರೀ ಶನಿ ಮೂಲಮಂತ್ರ ಜಪಿಸಿ. ಶುಭ ಸಂಖ್ಯೆ–3

ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)

'ಹಂಗಿನ ಅರಮನೆಗಿಂತ ರಾಗಿ ಅಂಬಲಿ ಲೇಸು' ಎಂಬ ಗಾದೆ ನಿಮ್ಮ ಅನುಭವಕ್ಕೆ ಬರಲು ಗ್ರಹಗತಿಗಳೇ ಕಾರಣ. ಸಪ್ತಾಹದ ಆದಿಗೆ ಕೊಂಚ ಉದ್ವೇಗಕ್ಕೆ ಒಳಗಾದರೂ ದಿನ ಸರಿದಂತೆ ಮನಸ್ಸಿಗೆ ನೆಮ್ಮದಿ ತರುವ ವಿಷಯಗಳು ಘಟಿಸುತ್ತವೆ. ಮಿತ್ರರ ಮಿಲನದಿಂದ ಆನಂದ, 'ಪಾರ್ಟಿ'ಗಳು ಲಕ್ಷ್ಮಣಗೆರೆ ದಾಟದಿರಲಿ. ರಾತ್ರಿ ಪ್ರಯಾಣ ಹಾಗೂ ಖಯ್ಯಾಲಿ ರೈಡ್‌ಗಳನ್ನು ಮಾಡದಿರಿ.

ಶ್ರೀ ಅಷ್ಟಾಕ್ಷರಿ ಮಂತ್ರ ಜಪ. ಶುಭ ಸಂಖ್ಯೆ–5

ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)

ವಾರದ ಆದಿಗೆ ಪ್ರತಿಷ್ಠಿತ ವ್ಯಕ್ತಿಗಳ ಸಂಪರ್ಕದಿಂದ ಪ್ರಮುಖ ಕಾರ್ಯವೊಂದು ಸಾಕಾರವಾಗುವುದು. ರೈತಾಪಿ ಜನರಿಗೆ ಸರಿಯಾದ ಫಸಲು ಬಾರದೆ ಸಂಕಷ್ಟ, ವಿದ್ಯಾರ್ಥಿಗಳು ಸಂಶಯ ನಿವಾರಣೆಗೆ ಗುರು–ಹಿರಿಯರ ಮಾರ್ಗದರ್ಶನ ಪಡೆದುಕೊಳ್ಳುವುದು ಒಳ್ಳೆಯದು. ಮಾತಿಗೆ ಮಾತು ಬೆಳೆದು ಕಸಿವಿಸಿಯಾಗುವಂತಹ ಪ್ರಸಂಗಗಳು ಎದುರಾಗಲಿದೆ. 'ಮೌನಂ ಕಲಹಂ ನಾಸ್ತಿ'.

'ಮೌನಂ ಕಲಹಂ ನಾಸ್ತಿ'.

ಓಂ ನಮೋ ಭಗವತೇ ವಾಸುದೇವಾಯ ಶುಭ ಸಂಖ್ಯೆ–8.

ನವಭಾರತದ ನಿರ್ಮಾತೃ ಡಾ.ಬಿ.ಆರ್.ಅಂಬೇಡ್ಕರ್

ವಿಚಾರವಾದಿ ಕೆ.ಎನ್.ಪ್ರಭುಸ್ವಾಮಿ ಅಭಿಪ್ರಾಯ



ಅಂಬೇಡ್ಕರ್ ಜಯಂತಿಯನ್ನು ವಿಚಾರವಾದಿ ಕೆ.ಎನ್.ಪ್ರಭುಸ್ವಾಮಿ ಉದ್ಘಾಟಿಸಿದರು.

ತಿ.ನರಸೀಪುರ, ಏ.27– ಜಗತ್ತಿನಾದ್ಯಂತ ಡಾ.ಬಿ.ಆರ್.ಅಂಬೇಡ್ಕರ್ ಅವರಿಗೆ ಗೌರವ ನೀಡುತ್ತಿದ್ದರೇ, ಭಾರತದಲ್ಲಿ ಅವರನ್ನು ಒಂದು ಜಾತಿಗೆ ಸೀಮಿತಗೊಳಿಸುತ್ತಿರುವುದು ವಿಷಾದನೀಯ ಎಂದು ವಿಚಾರವಾದಿ ಕೆ.ಎನ್.ಪ್ರಭುಸ್ವಾಮಿ ತಿಳಿಸಿದರು.

ಪಟ್ಟಣದ ಅಂಬೇಡ್ಕರ್ ಭವನದಲ್ಲಿ ಸ್ವಾಭಿಮಾನಿ ಬಿ.ಕೃಷ್ಣಪ್ಪ ಬಣದ ಕರ್ನಾಟಕ ದಲಿತ ಸಂಘರ್ಷ ಸಮಿತಿ ವತಿಯಿಂದ ಆಯೋಜಿಸಿದ್ದ ಡಾ.ಬಿ.ಆರ್.ಅಂಬೇಡ್ಕರ್ ಅವರ 133ನೇ ಜಯಂತ್ಯೋತ್ಸವದಲ್ಲಿ ಅವರ ಭಾವ ಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಅವರು ಮಾತನಾಡಿದರು.

ಡಾ.ಬಿ.ಆರ್.ಅಂಬೇಡ್ಕರ್ ಅವರು ಸರ್ವರಿಗೂ ಸಮಬಾಳು ಸರ್ವರಿಗೂ ಸಮಪಾಲು ತತ್ವದಡಿ ಪ್ರತಿಯೊಂದು ಸಮಾಜವನ್ನು ಸಾಮಾಜಿಕ, ಶೈಕ್ಷಣಿಕ, ಆರ್ಥಿಕವಾಗಿ ಸದೃಢಗೊಳಿಸಲು ಸಂವಿಧಾನ ನೀಡಿದ್ದಾರೆ. ಪ್ರತಿಯೊಬ್ಬ ಭಾರತೀಯನಿಗೂ ಹಕ್ಕು ಮತ್ತು ಸಮಾನತೆ ಅವಕಾಶಗಳನ್ನು ಕಲ್ಪಿಸಿದ್ದಾರೆ. ಆದರೆ ಅವರನ್ನು ಕೇವಲ ಒಂದು ಜಾತಿಗೆ ಸೀಮಿತಗೊಳಿಸುತ್ತಿರುವುದು ನಿಜಕ್ಕೂ ದುರ್ದೈವ ಎಂದರು.

ನಾನು ಕೊಟ್ಟ ಸಂವಿಧಾನವನ್ನು ಯಥಾವತ್ತಾಗಿ ಜಾರಿಗೊಳಿಸಿದರೆ ಇನ್ನು 20 ವರ್ಷಗಳಲ್ಲಿ ಈ ದೇಶ ಪ್ರಬುದ್ಧವಾಗುತ್ತದೆ. ಜನರು ಕೂಡ ಪ್ರಬುದ್ಧರಾಗುತ್ತಾರೆ ಎಂದು ಅಂಬೇಡ್ಕರ್ ಹೇಳಿದ್ದರು. ಆದರೆ ದೇಶಕ್ಕೆ ಸ್ವಾತಂತ್ರ್ಯ ಬಂದು 75 ವರ್ಷಗಳಾದರೂ ಪ್ರಬುದ್ಧ ಭಾರತ ಇನ್ನೂ ನಿರ್ಮಾಣವಾಗಿಲ್ಲ. ಹೀಗಾಗಿ ಅಂಬೇಡ್ಕರ್ ಅವರನ್ನು ಅರ್ಥೈಸಿಕೊಳ್ಳುವಲ್ಲಿ, ಅವರ ಆಶಯಗಳನ್ನು ಸಂಪೂರ್ಣ ಅಳವಡಿಸಿಕೊಳ್ಳುವಲ್ಲಿ ನಾವು ವಿಫಲರಾಗಿದ್ದೇವೆ ಎಂದು ವಿಷಾದಿಸಿದರು.

ಶೋಷಿತ, ಹಿಂದುಳಿದ ಸಮಾಜಗಳಿಗೆ ಸಮಾನತೆಯ ಬದುಕು, ಮಹಿಳೆಯರಿಗೆ ಶಿಕ್ಷಣ, ಹಕ್ಕುಗಳನ್ನು ಕೊಡಿಸಲು ಅಂಬೇಡ್ಕರ್ ಹೋರಾಟ ಕಾರಣ. ಅವರು ನವಭಾರತದ ನಿರ್ಮಾತೃ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ರಾಜ್ಯ ವಾಲ್ಮೀಕಿ ಸಂಘಟನೆಗಳ ಒಕ್ಕೂಟದ ಜಿಲ್ಲಾಧ್ಯಕ್ಷ ತಾಯೂರು ಪ್ರಕಾಶ್ ಮಾತನಾಡಿ, ಅಂಬೇಡ್ಕರ್ ಅವರನ್ನು ಅವರ ಹುಟ್ಟುಹಬ್ಬದಂದು ಮಾತ್ರ ನೆನಪಿಸಿಕೊಂಡರೆ ಸಾಲದು. ಅವರ ಆಶಯ, ಚಿಂತನೆಗಳನ್ನು ಬದುಕಿನಲ್ಲಿ ಅಳವಡಿಸಿಕೊಂಡಾಗ ಮಾತ್ರ ಅವರ ಜಯಂತಿ ಸಾರ್ಥಕತೆ ಕಾಣುತ್ತದೆ. ಸಂವಿಧಾನದ ಕಲ್ಪನೆ ಸಂಪೂರ್ಣವಾಗಿ ಈ ದೇಶದಲ್ಲಿ ಜಾರಿಯಾಗಿಲ್ಲ. ಅಂಬೇಡ್ಕರ್ ಕಂಡ ಕನಸು ನನಸಾಗಬೇಕಾದರೆ ಸಂವಿಧಾನದ ಚಿಂತನೆಗಳು ಸಂಪೂರ್ಣವಾಗಿ ಅನುಷ್ಠಾನ ಗೊಳ್ಳಬೇಕು ಹಾಗೂ ಅವರ ಆಶಯಗಳಂತೆ ಜನತೆ ನಡೆದುಕೊಳ್ಳಬೇಕು ಎಂದರು.

ಕದಸಂಸ ಜಿಲ್ಲಾ ಸಂಚಾಲಕ ಸೋಸಲೆ ರಾಜಶೇಖರ್ ಮೂರ್ತಿ ಮಾತನಾಡಿ, ಅಂಬೇಡ್ಕರ್ ಹೋರಾಟ ನಮಗೆ ಬದುಕು ಕೊಟ್ಟಿದೆ. ಅವರ ಸಂವಿಧಾನ ನಮಗೆ ಹಕ್ಕು ನೀಡಿದೆ. ಹೀಗಾಗಿ ಅಂಬೇಡ್ಕರ್ ಅವರನ್ನು ಸದಾ ಸ್ಮರಿಸಿ ಅವರ ಮಾರ್ಗದರ್ಶನದಲ್ಲಿ ನಾವೆಲ್ಲರೂ ಮುನ್ನಡೆಯಬೇಕು ಎಂದರು.

ಚಾಮರಾಜನಗರ ಜಿಲ್ಲಾ ಸಂಚಾಲಕ ಬೆಳ್ಳಿಯಪ್ಪ, ಮುಖಂಡ ರಂಗೂನಾಯಕ್, ಕಬ್ಬು ಬೆಳೆಗಾರರ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕಿರಗಸೂರು ಶಂಕರ್ ಅಂಬೇಡ್ಕರ್ ಕುರಿತು ಮಾತನಾಡಿದರು. ಕಾರ್ಯಕ್ರಮದಲ್ಲಿ ಕಬ್ಬು ಬೆಳೆಗಾರರ ಸಂಘದ ತಾಲೂಕು ಪ್ರಧಾನ ಕಾರ್ಯದರ್ಶಿ ಪ್ರಸಾದ ನಾಯಕ್, ಶಿವಕುಮಾರ್, ಸಂತೋಷ್, ರವಿ, ಅತ್ತಹಳ್ಳಿ ರವಿ ಮತ್ತಿತರರು ಹಾಜರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ರತ್ನಂ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ರತ್ನಂ (ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ರುಸ್ಲಾನ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ರತ್ನಂ (ತ)	4 ಪ್ರದರ್ಶನಗಳು
ಗಾಯಿತ್ರಿ	
ಯುವ (ಕ)	4 ಪ್ರದರ್ಶನಗಳು
ರಾಜಕಮಲ್	
ರೂಬನ್ (ತ)	4 ಪ್ರದರ್ಶನಗಳು
ಸಂಗಂ	
ಅವತಾರ ಪುರುಷ 2 (ಕ)	4 ಪ್ರದರ್ಶನಗಳು
ಲಿಡೋ	
ಮ್ಯಾಟ್ನಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ರತ್ನಂ (ತ)	4 ಪ್ರದರ್ಶನಗಳು
ಪ್ರಭಾ	
ಇತ್ಯಾದಿ (ಕ)	2 ಪ್ರದರ್ಶನಗಳು
ಆತ್ಮ (ಕ)	2 ಪ್ರದರ್ಶನಗಳು

DRC CINEMAS ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಕುಂಗ್ ಫೂ ಪಾಂಡ 4 (3ಡಿ) (ಇಂ): ಬೆ.11.30ಕ್ಕೆ, ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (3ಡಿ) (ಇಂ): ಮ.1.30ಕ್ಕೆ, ಗಿಲ್ಲಿ (ತ): ಮ.3.50ಕ್ಕೆ, ಆವೇಶಂ (ಮ): ರಾ.7ಕ್ಕೆ, ರಾ.10.05ಕ್ಕೆ.
ಸ್ಕ್ರೀನ್ 2	ಇತ್ಯಾದಿ (ಕ): ಬೆ.11.30ಕ್ಕೆ, O2 (ಕ): ಮ.1.55ಕ್ಕೆ, ದಾಸವರೇಣ್ಯ ಶ್ರೀ ವಿಜಯದಾಸರು (ಕ): ಸಂ.4.15ಕ್ಕೆ, ವರ್ಷನ್‌ಗಲ್ಕು ಶೇಷಂ (ಮ): ರಾ.7ಕ್ಕೆ, ಪವಿ ಕೇರ್‌ಟೇಕರ್ (ಮ): ರಾ.10.10ಕ್ಕೆ.
ಸ್ಕ್ರೀನ್ 3	ರತ್ನಂ (ತ): ಮ.1.10ಕ್ಕೆ, ಸಂ.4.10ಕ್ಕೆ, ಯುವ (ಕ): ರಾ.7.10ಕ್ಕೆ, ರುಸ್ಲಾನ್ (ಹಿಂ): ರಾ.10.10ಕ್ಕೆ.
ಸ್ಕ್ರೀನ್ 4	ಮಂಜುಮ್ಮೆಲ್ ಬಾಯ್ಸ್ (ಮ): ಮ.1.45ಕ್ಕೆ, ಘೋಸ್ಟ್‌ಬಸ್ಟರ್ಸ್ ಫ್ರೋಝನ್ ಎಂಪೈರ್ (ಇಂ): ಸಂ.4.50ಕ್ಕೆ, ರಾ.7.20ಕ್ಕೆ, ರಾ.9.50ಕ್ಕೆ.

INOX LIVE THE MOVIE ಐನಾಕ್ಸ್ ಮೂವೀಸ್

ದೂ : 2533444 / 2433456

ಸ್ಕ್ರೀನ್ 1	ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (3ಡಿ) (ಇಂ): ಬೆ.10.25ಕ್ಕೆ, ರಾ.10ಕ್ಕೆ, ಯುವ (ಕ): ಮ.1ಕ್ಕೆ, ಸಂ.4.15ಕ್ಕೆ, O2 (ಕ): ರಾ.7.30ಕ್ಕೆ.
ಸ್ಕ್ರೀನ್ 2	ಬಡೇ ಮಿಯಾನ್ ಚೋಟೆ ಮಿಯಾನ್ (ಹಿಂ): ಬೆ.10.45ಕ್ಕೆ, ಸಂ.5.55ಕ್ಕೆ, ಮೈದಾನ್ (ಹಿಂ): ಮ.2.10ಕ್ಕೆ, ಮಂಜುಮ್ಮೆಲ್ ಬಾಯ್ಸ್ (ಮ): ರಾ.9.20ಕ್ಕೆ.
ಸ್ಕ್ರೀನ್ 3	ಯುವ (ಕ): ಬೆ.10.10ಕ್ಕೆ, O2 (ಕ): ಮ.1.25ಕ್ಕೆ, ಪಾರಿಜಾತ ಪರ್ವಂ (ತೆ): ಮ.3.55ಕ್ಕೆ, ಆವೇಶಂ (ಮ): ಸಂ.6.50ಕ್ಕೆ, ಬಡೇ ಮಿಯಾನ್ ಚೋಟೆ ಮಿಯಾನ್ (ಹಿಂ): ರಾ.10.10ಕ್ಕೆ.
ಸ್ಕ್ರೀನ್ 4	ಮೈದಾನ್ (ಹಿಂ): ಬೆ.11.25ಕ್ಕೆ, ರಾ.9.50ಕ್ಕೆ, ವರ್ಷನ್‌ಗಲ್ಕು ಶೇಷಂ (ಮ): ಮ.3.10ಕ್ಕೆ, ಯುವ (ಕ): ಸಂ.6.35ಕ್ಕೆ.

MVC ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಪಾರ್ಕಿಂಗ್ (ಕ): ಬೆ.10.35ಕ್ಕೆ, ಸಪ್ತಸಾಗರದಾಚೆ ಎಲ್ಲೋ 2 (ಕ): ಮ.1.10ಕ್ಕೆ, ಬ್ಯಾಡ್ ಮ್ಯಾನರ್ಸ್ (ಕ): ಸಂ.4ಕ್ಕೆ, ಅರ್ಧಂಬರ್ಧ ಪ್ರೇಮಕಥೆ (ತ): ಸಂ.6.35ಕ್ಕೆ, ಅನ್ನಪೂರ್ಣಿ (ತ): ರಾ.9.15ಕ್ಕೆ.
ಸ್ಕ್ರೀನ್ 2	ಅನಿಮಲ್ (ಹಿಂ): ಬೆ.10ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಮ.1.45ಕ್ಕೆ.
ಸ್ಕ್ರೀನ್ 3	ಸ್ಯಾಮ್ ಬಹದ್ದೂರ್ (ಹಿಂ): ಬೆ.10.10ಕ್ಕೆ, ಸಂ.4.50ಕ್ಕೆ, ಅನಿಲಲ್ (ಹಿಂ): ಮ.1.05ಕ್ಕೆ, ರಾ.7.45ಕ್ಕೆ
ಸ್ಕ್ರೀನ್ 4	ಸಪ್ತ ಸಾಗರದಾಚೆ ಎಲ್ಲೋ 2 (ತೆ): ಬೆ.10.45ಕ್ಕೆ, ಅನಿಮಲ್ (ಹಿಂ): ಮ.2.40ಕ್ಕೆ, ನೆಪೋಲಿಯನ್ (ಇಂ): ಸಂ.6.25ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ರಾ.9.35ಕ್ಕೆ.

ಪಿವಿಆರ್ ಸಿನಿಮಾಸ್

ನೆಕ್ಸಸ್ ಸೆಂಟರ್‌ಸಿಟಿ ಮಾಲ್,
2ನೇ ಮಹಡಿ, ಮೊ.ನಂ: 8951357139

ದಿ ಫ್ಯಾಮಿಲಿ ಸ್ಟಾರ್ (ತೆ): ಬೆ.9.10ಕ್ಕೆ, ಮ.12.30ಕ್ಕೆ, ಮ.3.50ಕ್ಕೆ, ರಾ.7.10ಕ್ಕೆ, ರಾ.10.30ಕ್ಕೆ, ಯುವ (ಕ): ಬೆ.10.20ಕ್ಕೆ, ಬೆ.11.35ಕ್ಕೆ, ಮ.12.45ಕ್ಕೆ, ಮ.3.20ಕ್ಕೆ, ಸಂ.5.45ಕ್ಕೆ, ಸಂ.6.45ಕ್ಕೆ, ರಾ.10ಕ್ಕೆ, ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (3ಡಿ) (ಇಂ): ಬೆ.10.45ಕ್ಕೆ, ಮ.1.25ಕ್ಕೆ, ಸಂ.6.50ಕ್ಕೆ, ರಾ.9.30ಕ್ಕೆ, ಅವತಾರ ಪುರುಷ 2 (ಕ): ಮ.12.40ಕ್ಕೆ, ಸಂ.6.35ಕ್ಕೆ, ಮ್ಯಾಟ್ನಿ (ಕ): ಮ.1.35ಕ್ಕೆ, ಭರ್ಜರಿ ಗಂಡು (ಕ): ಮ.2.50ಕ್ಕೆ, ದಿ ಫಸ್ಟ್ ಓಮನ್ (ಇಂ): ಸಂ.4ಕ್ಕೆ, ರಾ.9ಕ್ಕೆ, ಕ್ರೂವ್ (ಹಿಂ): ಸಂ.4.05ಕ್ಕೆ, ರಾ.9.15ಕ್ಕೆ, ಮಂಜುಮ್ಮೆಲ್ ಬಾಯ್ಸ್ (ಮ): ಸಂ.4.30ಕ್ಕೆ, ಮಾರಿಗೋಲ್ಡ್ (ಕ): ರಾ.7.25ಕ್ಕೆ, ಆಡುಜೀವಿತಂ (ಮ): ರಾ.10.15ಕ್ಕೆ.

ಗರುಡ ಮಾಲ್,

1ನೇ ಮಹಡಿ, ಮೊ.ನಂ: 9901373210

ಯುವ (ಕ): ಬೆ.9.30ಕ್ಕೆ, ಮ.12.25ಕ್ಕೆ, ಮ.3.40ಕ್ಕೆ, ಸಂ.6.30ಕ್ಕೆ, ರಾ.10.30ಕ್ಕೆ, ದಿ ಫ್ಯಾಮಿಲಿ ಸ್ಟಾರ್ (ತೆ): ಬೆ.9.50ಕ್ಕೆ, ಮ.12ಕ್ಕೆ, ಮ.3.20ಕ್ಕೆ, ಸಂ.6.40ಕ್ಕೆ, ರಾ.10ಕ್ಕೆ, ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (3ಡಿ) (ಇಂ): ಮ.1.10ಕ್ಕೆ, ಮ.3.50ಕ್ಕೆ, ರಾ.9.45ಕ್ಕೆ, ಅವತಾರ ಪುರುಷ 2 (ಕ): ಮ.2ಕ್ಕೆ, ರಾ.7.35ಕ್ಕೆ, ಮ್ಯಾಟ್ನಿ (ಕ): ಸಂ.4.40ಕ್ಕೆ, ಆಡುಜೀವಿತಂ (ಮ): ಸಂ.6.55ಕ್ಕೆ, ರಾ.10.15ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ದ್ವಿತೀಯ ಪಿಯುಸಿಯಲ್ಲಿ ಪ್ರಥಮ: ವಿದ್ಯಾರ್ಥಿನಿಗೆ ಸನ್ಮಾನ



ಹೆಚ್.ಡಿ.ಕೋಟೆ, ಏ.27– ದ್ವಿತೀಯ ಪಿಯುಸಿ ವಿಜ್ಞಾನ ವಿಭಾಗದಲ್ಲಿ ತಾಲೂಕಿಗೆ ಪ್ರಥಮ ಸ್ಥಾನ ಪಡೆದ ವಿದ್ಯಾರ್ಥಿನಿ ಎನ್.ನಂದಿನಿ ಅವರನ್ನು ಮಾಜಿ ಶಾಸಕ ಬೀಚನಹಳ್ಳಿ ಚಿಕ್ಕಣ್ಣ ಸನ್ಮಾನಿಸಿದರು.

ಪಟ್ಟಣದ ಹೆಬ್ಬಾಳದಲ್ಲಿರುವ ವಿದ್ಯಾಸಿಂಚನ ಕಾಲೇಜಿನ ವಿದ್ಯಾರ್ಥಿನಿ ಹಾಗೂ ತಾಲೂಕಿನ ಬೀಚನಹಳ್ಳಿ ಗ್ರಾಮದ ನಿವಾಸಿ ನರಸಿಂಹೇಗೌಡ ಮತ್ತು ವಸಂತ ದಂಪತಿ ಪುತ್ರಿ ಎನ್.ನಂದಿನಿ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಕನ್ನಡ 98, ಇಂಗ್ಲಿಷ್ 90, ಭೌತಶಾಸ್ತ್ರ 92, ರಾಸಾಯನಶಾಸ್ತ್ರ 97, ಗಣಿತ 100, ಜೀವಶಾಸ್ತ್ರ 100 ಸೇರಿದಂತೆ 600ಕ್ಕೆ 577 ಅಂಕಗಳನ್ನು ಪಡೆಯುವ ಮೂಲಕ ಹೆಚ್.ಡಿ.ಕೋಟೆ ಮತ್ತು ಸರಗೂರು ತಾಲೂಕಿಗೆ ಕೀರ್ತಿ ತಂದಿದ್ದಾರೆ.

ಈ ವೇಳೆ ವಿದ್ಯಾರ್ಥಿನಿ ನಂದಿನಿ ತಂದೆ ನರಸಿಂಹೇಗೌಡ, ತಾಯಿ ವಸಂತ, ಗ್ರಾಮದ ಮುಖಂಡ ನಿಂಗರಾಜು, ಟೈಲರ್ ರಾಮು, ನಾರಯಣ್ ಇದ್ದರು.

ಚುನಾವಣೆಯಲ್ಲಿ ಲಕ್ಷ್ಮಣಗೆ ಗೆಲುವು: ಹೆಚ್‌ಪಿಎಂ ವಿಶ್ವಾಸ



ಸಭೆಯಲ್ಲಿ ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಮಾತನಾಡಿದರು.

ಹುಣಸೂರು, ಏ.27– ತಾಲೂಕಿನ ಮತದಾರರು ಕಾಂಗ್ರೆಸ್ ಪರ ಅತಿ ಹೆಚ್ಚು ಮತ ಚಲಾಯಿಸಿರುವುದರಿಂದ ಲೋಕಸಭಾ ಚುನಾವಣೆಯಲ್ಲಿ ಮೈಸೂರು–ಕೊಡಗು ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಲಕ್ಷ್ಮಣ ಗೆಲುವು ಸಾಧಿಸಲಿದ್ದಾರೆ ಎಂದು ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ವಿಶ್ವಾಸ ವ್ಯಕ್ತಪಡಿಸಿದರು.

ನಗರದ ಕಾಂಗ್ರೆಸ್ ಕಚೇರಿಯಲ್ಲಿ ಶನಿವಾರ ಆಯೋಜಿಸಿದ್ದ ಕಾರ್ಯಕರ್ತರ ಅಭಿನಂದನಾ ಸಭೆಯಲ್ಲಿ ಮಾತನಾಡಿದ ಅವರು, ಪಕ್ಷದ ಕಾರ್ಯಕರ್ತರು ಕಳೆದ ಒಂದು ತಿಂಗಳಿಂದ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಲಕ್ಷ್ಮಣ ಪರ ಹಗಲಿರುಳು ಶ್ರಮಿಸಿದ್ದಾರೆ. ಮನೆ ಮನೆಗೆ ತೆರಳಿ ಪಕ್ಷದ ಗ್ಯಾರಂಟಿ ಕಾರ್ಡ್‌ಗಳನ್ನು ವಿತರಿಸಿದ್ದಾರೆ. ಚುನಾವಣೆ ದಿನ ಪ್ರತಿಯೊಂದು ಬೂತ್ ಬಳಿ ಜಮಾಯಿಸಿ ಪಕ್ಷದ ಅಭ್ಯರ್ಥಿ ಪರ ಮತಯಾಚಿಸಿದ್ದಾರೆ. ಚುನಾವಣೆಯಲ್ಲಿ ಕಾಂಗ್ರೆಸ್ ಕಾರ್ಯರ್ತರ ಶ್ರಮ ಅಪಾರ. ಈ ನಿಮ್ಮ ಶ್ರಮದ ಫಲವಾಗಿ ತಾಲೂಕಿನಲ್ಲಿ ಮೈತ್ರಿ ಅಭ್ಯರ್ಥಿಗಿಂತ ಕಾಂಗ್ರೆಸ್ ಅಭ್ಯರ್ಥಿ ಹೆಚ್ಚು ಮತ ಪಡೆಯಲಿದ್ದಾರೆ ಎಂದರು.

ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆ ಹಾಗೂ ಕೇಂದ್ರದ ಕಾಂಗ್ರೆಸ್ ಗ್ಯಾರಂಟಿ ಯೋಜನೆಗಳ ಕಾರ್ಡ್ ವಿತರಣೆಯಿಂದ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಮತದಾರರು ಕಾಂಗ್ರೆಸ್ ಅಭ್ಯರ್ಥಿ ಕೈ ಹಿಡಿಯಲಿದ್ದಾರೆ. ಆದರೆ ಫಲಿತಾಂಶ ಜೂ.4ರಂದು ಪ್ರಕಟವಾಗುವುದರಿಂದ ವಿಪಕ್ಷದವರು ಬೆಟ್ಟಿಂಗ್ ಕಟ್ಟುವಂತೆ ಪ್ರಚೋದನೆಗೊಳಪಡಿಸುತ್ತಾರೆ. ಆದ್ದರಿಂದ ಯಾರೊಬ್ಬರೂ ಬೆಟ್ಟಿಂಗ್ ಕಟ್ಟಿ ಮನೆ ಹಾಳು ಮಾಡಿಕೊಳ್ಳಬೇಡಿ ಎಂದು ಕಾರ್ಯಕರ್ತರಿಗೆ ಕೈ ಮುಗಿದು ಮನವಿ ಮಾಡಿದರು.

ರಾಜ್ಯದಲ್ಲಿ ನಡೆಯುವ 2ನೇ ಹಂತದ ಲೋಕಸಭಾ ಚುನಾವಣೆಯಲ್ಲಿ ಬಳ್ಳಾರಿ ಹಾಗೂ ಚಿಕ್ಕೋಡಿ ಕ್ಷೇತ್ರಕ್ಕೆ ಪ್ರಚಾರಕ್ಕಾಗಿ ನಾನು ಮತ್ತು ಶಾಸಕ ಅನಿಲ್ ತೆರಳುತ್ತಿರುವುದರಿಂದ 2 ವಾರಗಳ ಕಾಲ ಹುಣಸೂರು ಕ್ಷೇತ್ರದಲ್ಲಿ ಲಭ್ಯವಿರುವುದಿಲ್ಲ ಎಂದರು.

ಈ ವೇಳೆ ತಾಲೂಕು ಕಾಂಗ್ರೆಸ್ ಅಧ್ಯಕ್ಷರಾದ ರಮೇಶ್, ನಾರಾಯಣ್, ಕಾರ್ಯಾಧ್ಯಕ್ಷ ಪುಟ್ಟರಾಜ್, ಬಸವರಾಜಪ್ಪ, ಜಿಪಂ ಮಾಜಿ ಸದಸ್ಯ ಡಿ.ಕೆ.ಕುನ್ನೇಗೌಡ, ಎಪಿಎಂಸಿ ಮಾಜಿ ಅಧ್ಯಕ್ಷ ರವಿಗೌಡ, ಮುಖಂಡರಾದ ಬಸವರಾಜ್, ಪ್ರೇಮ್ ಕುಮಾರ್, ಚಿಕ್ಕಸ್ವಾಮಿ, ಉದ್ಯಮಿಗಳಾದ ರಾಜು ಶಿವರಾಜೇಗೌಡ, ಕೋಡಿಕೃಷ್ಣ, ಯುವ ಕಾಂಗ್ರೆಸ್ ಮಾಜಿ ಅಧ್ಯಕ್ಷರಾದ ಕುಮಾರ್, ರಾಘು, ಶಾಂತ, ಕಲ್ಪನ ಸೇರಿದಂತೆ ಸಾವಿರಾರು ಕಾರ್ಯಕರ್ತರು ಹಾಜರಿದ್ದರು.

ಪೈಪ್ ಒಡೆದು ನೀರು ಪೋಲು: ಪುರಸಭೆ ವಿರುದ್ಧ ಆಕ್ರೋಶ



ತಿ.ನರಸೀಪುರ, ಏ.27– ಪಟ್ಟಣದ ವಿದ್ಯೋದಯ ಕಾಲೇಜು ರಸ್ತೆಯಲ್ಲಿ ಕುಡಿಯುವ ನೀರಿನ ಪೈಪ್ ಒಡೆದು ನೀರು ಪೋಲಾಗುತ್ತಿದ್ದು, ಈ ಬಗ್ಗೆ ನಿರ್ಲಕ್ಷ್ಯ ವಹಿಸಿರುವ ಪುರಸಭೆ ವಿರುದ್ಧ ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಪಟ್ಟಣದ ವಿದ್ಯೋದಯ ಕಾಲೇಜು ರಸ್ತೆಯ ವಿದ್ಯಾಗಣಪತಿ ದೇವಸ್ಥಾನದ ಎದುರು ಮೊದಲೇ ಒಡೆದಿದ್ದ ಪೈಪನ್ನು ಸರಿಪಡಿಸದೇ ಡಾಂಬರೀಕರಣ ಮಾಡಿದ ಹಿನ್ನೆಲೆಯಲ್ಲಿ ನೀರು ರಸ್ತೆ ತುಂಬೆಲ್ಲಾ ಹರಿದು ಸಾರ್ವಜನಿಕರಿಗೆ ಕಿರಿಕಿರಿ ಉಂಟು ಮಾಡುವ ಜೊತೆಗೆ ಸಾವಿರಾರು ಲೀಟರ್ ನೀರು ಪೋಲಾಗುತ್ತಿದೆ.

ಡಾಂಬರೀಕರಣ ಮಾಡುವ ವೇಳೆ ಸಾರ್ವಜನಿಕರು ಪೈಪ್ ಒಡೆದಿರುವ ಬಗ್ಗೆ ಗಮನ ಸೆಳೆದರೂ, ಸಂಬಂಧಿಸಿದ ಗುತ್ತಿಗೆದಾರ ಅವರ ಮಾತಿಗೆ ಮನ್ನಣೆ ನೀಡದೇ ಪೈಪ್ ದುರಸ್ತಿ ಮಾಡದೇ ಡಾಂಬರೀಕರಣ ಮಾಡಿದ್ದೇ ಸಮಸ್ಯೆಗೆ ಕಾರಣವಾಗಿದೆ.

ಕಳೆದ 3 ತಿಂಗಳಿಂದ ಒಡೆದ ಪೈಪನ್ನು ದುರಸ್ತಿ ಪಡಿಸದ ಹಿನ್ನೆಲೆಯಲ್ಲಿ ರಸ್ತೆ ತುಂಬೆಲ್ಲಾ ನೀರು ಹರಿದು ರಸ್ತೆ ರಾಡಿಯಾಗುತ್ತಿದೆ. ವಿದ್ಯಾಗಣಪತಿ ದೇವಸ್ಥಾನದಿಂದ ಖಾಸಗಿ ಬಸ್ ನಿಲ್ದಾಣದವರೆಗೂ ನೀರು ಹರಿದು ಹೋಗುತ್ತಿದ್ದು, ಇದುವರೆಗೂ ಪುರಸಭೆಯಾಗಲೀ ಕುಡಿಯುವ ನೀರಿನ ಯೋಜನೆ ಅಧಿಕಾರಿಗಳಾಗಲೀ ಇತ್ತ ಗಮನಹರಿಸದಿರುವುದು ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ.

ಬೇಸಿಗೆ ಹಿನ್ನೆಲೆಯಲ್ಲಿ ಕುಡಿಯುವ ನೀರಿಲ್ಲದೇ ಪರದಾಡುತ್ತಿರುವ ಸಂದರ್ಭ ತಾಲೂಕು ಆಡಳಿತದ ಬೇಜವಾಬ್ದಾರಿತನದಿಂದ ದಿನಕ್ಕೆ ಸಾವಿರಾರು ಲೀಟರ್ ನೀರು ಪೋಲಾಗುತ್ತಿರುವುದು ವಿಪರ್ಯಾಸ ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಸಮಸ್ಯೆ ಬಗೆಹರಿಸುವತ್ತ ಗಮನ ಹರಿಸಬೇಕಿದೆ.


ಬೇಸಿಗೆ ಶಿಬಿರ: ಕೃಷಿ ಪಾಠ, ದೇಸಿ ಆಟ



ನಂಜನಗೂಡು, ಏ.27– ತಾಲೂಕಿನ ಸುತ್ತೂರು ಕೃಷಿ ವಿಜ್ಞಾನ ಕೇಂದ್ರದ ಆವರಣದಲ್ಲಿ 5 ದಿನಗಳ ಕಾಲ ಮಕ್ಕಳ ಬೇಸಿಗೆ ಶಿಬಿರ ಯಶಸ್ವಿಯಾಗಿ ನಡೆಯಿತು.

ಶಿಬಿರವನ್ನು ಮಕ್ಕಳಲ್ಲಿ ಕೃಷಿ ಬಗ್ಗೆ ತಿಳಿಸುವ ಮತ್ತು ತೆರೆಮರೆಗೆ ಸರಿಯುತ್ತಿರುವ ದೇಸಿ ಆಟಗಳ ಪರಿಚಯ ಮಾಡಿಸುವ ಉದ್ದೇಶದಿಂದ ಆಯೋಜಿಸಲಾಗಿತ್ತು. ಕೃಷಿ ಮತ್ತು ಹೈನುಗಾರಿಕೆಗೆ ಸಂಬಂಧಿಸಿದಂತೆ ಕೃಷಿಯಲ್ಲಿ ಹಸುಗಳ ಮಹತ್ವ, ಎರೆಹುಳು ಗೊಬ್ಬರ ತಯಾರಿಕೆ, ಕೃಷಿಯಲ್ಲಿ ಮಣ್ಣಿನ ಮಹತ್ವ, ಮಣ್ಣು ಪರೀಕ್ಷೆ, ತೋಟಗಾರಿಕಾ ನರ್ಸರಿ ಸಸಿಗಳ ತಯಾರಿಕೆ, ಬಿತ್ತನೆ ಮತ್ತು ಬೀಜದ ಉಂಡೆಗಳನ್ನು ತಯಾರಿಕೆ ಮುಂತಾದ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿತ್ತು. ದೇಸಿ ಆಟಕ್ಕೆ ಸಂಬಂಧಿಸಿದಂತೆ ಅಳಿಗುಳಿ ಮನೆ ಆಟ, ಲಗೋರಿ, ಗೋಲಿ ಆಟ, ಗಾಳಿಪಟ, ಹಾವು ಏಣಿ ಆಟ ಇತರೆ ದೇಸಿ ಆಟಗಳನ್ನು ಆಡಿಸಲಾಯಿತು. ಈ ಶಿಬಿರದಲ್ಲಿ 7 ರಿಂದ 13 ವಯಸ್ಸಿನ 24 ಮಕ್ಕಳು ಪಾಲ್ಗೊಂಡು ಶಿಬಿರದ ಉಪಯೋಗವನ್ನು ಪಡೆದುಕೊಂಡರು.

ಬಡ್ತಿ ಹೊಂದಿ ವರ್ಗಾವಣೆಯಾದ ನ್ಯಾಯಾಧೀಶೆಗೆ ಬೀಳ್ಕೊಡುಗೆ



ನಂಜನಗೂಡು, ಏ.27– ಕಳೆದ ಎರಡೂವರೆ ವರ್ಷಗಳಿಂದ ಇಲ್ಲಿನ ನ್ಯಾಯಾಲಯದಲ್ಲಿ ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರಾಗಿ ಸೇವೆ ಸಲ್ಲಿಸಿ ಬಡ್ತಿ ಮೇಲೆ ವರ್ಗಾವಣೆಗೊಂಡ ಅನುಪಮಲಕ್ಷ್ಮಿ ಅವರನ್ನು ವಕೀಲರ ಸಂಘದಿಂದ ಸನ್ಮಾನಿಸಿ ಬೀಳ್ಕೊಡಲಾಯಿತು.

ಈ ವೇಳೆ ನ್ಯಾಯಾಧೀಶರಾದ ಕಿಶೋರ್ ಕುಮಾರ್, ರಘುರಾಂ, ಶಶಿಕಲಾ ಇತರರು ವರ್ಗಾವಣೆಗೊಂಡ ನ್ಯಾಯಾಧೀಶೆ ಅನುಪಮಲಕ್ಷ್ಮಿ ಅವರ ಕಾರ್ಯ ವೈಖರಿ ಬಗ್ಗೆ ಮಾತನಾಡಿದರು. ಹಿರಿಯ ವಕೀಲರಾದ ಈ.ಮಹದೇವಕುಮಾರ್, ಎನ್.ಉಮೇಶ್, ಕಾರ್ಯದರ್ಶಿ ರೇಣುಕಾಪ್ರಸಾದ್ ಸೇರಿದಂತೆ ಇತರರು ನ್ಯಾಯಾಧೀಶೆ ಅನುಪಮಲಕ್ಷ್ಮಿ ಅವರ ನ್ಯಾಯ ವಿತರಣೆ ಬಗ್ಗೆ ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ನ್ಯಾಯಾಧೀಶೆ ಅನುಪಮಲಕ್ಷ್ಮಿ, ತಮ್ಮ ಎರಡೂವರೆ ವರ್ಷಗಳ ಸೇವಾವಧಿಯನ್ನು ಸ್ಮರಿಸಿಕೊಂಡರು. ನಂಜನಗೂಡು ನ್ಯಾಯಾಲಯದಲ್ಲಿ ಸೇವೆ ಸಲ್ಲಿಸುವುದೇ ಒಂದು ಸೌಭಾಗ್ಯ. ಇಲ್ಲಿನ ವಕಿಲರ ಸಂಘ ಅತ್ಯುತ್ತಮವಾಗಿದ್ದು, ಎಲ್ಲರೂ ನ್ಯಾಯಾಧೀಶರಿಗೆ ಸಹಕಾರ ನೀಡುತ್ತಿರುವುದರಿಂದ ಉತ್ತಮ ನ್ಯಾಯದಾನ ಮಾಡಬಹುದು. ಕಿರಿಯ ವಕೀಲರು ಹಿರಿಯ ವಕೀಲರಿಗೆ ಗೌರವ ಕೊಡಬೇಕು. ಅವರ ಮಾರ್ಗದರ್ಶನ ಪಡೆದು ಹೆಚ್ಚು ಅಧ್ಯಯನ ಮಾಡಬೇಕು ಎಂದು ಕಿರಿಯ ವಕೀಲರಿಗೆ ಕಿವಿಮಾತು ಹೇಳಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ವಕೀಲರ ಸಂಘದ ಅಧ್ಯಕ್ಷ ಸುರೇಶ್ ಮಾತನಾಡಿ, ಇಲ್ಲಿ ಸೇವೆ ಸಲ್ಲಿಸಿರುವ ನ್ಯಾಯಾಧೀಶರು ಬಡ್ತಿ ಮೇಲೆ ವರ್ಗಾವಣೆಗೊಂಡಿರುವುದು ಈ ಕ್ಷೇತ್ರದ ಸ್ಥಳ ಮಹಿಮೆ ಎಂದರು.

ಸಮಾರಂಭದಲ್ಲಿ ಹಿರಿಯ ವಕೀಲೆ ವಸಂತಲಕ್ಷ್ಮಿ, ಅಶ್ವಿನಿ ಬಸವರಾಜು, ಕಾರ್ಯದರ್ಶಿ ರೇಣುಕಾಪ್ರಸಾದ್, ಉಪಾಧ್ಯಕ್ಷ ಸೋಹನ್ ಕುಮಾರ್ ಹಾಗೂ ಪದಾಧಿಕಾರಿಗಳು ಸೇರಿದಂತೆ ಹಿರಿಯ ಮತ್ತು ಕಿರಿಯ ವಕೀಲರು ಇದ್ದರು.

ನೇಮಕ



ತಿ.ನರಸೀಪುರ ಏ.27– ಕೆಪಿಸಿಸಿ ರಾಜ್ಯ ಅಲ್ಪಸಂಖ್ಯಾತರ ಘಟಕದ ಕಾರ್ಯದರ್ಶಿಯಾಗಿ ಬಿ.ಮನ್ಸೂರ್ ಅಲಿ ಅವರನ್ನು ಅಲ್ಪಸಂಖ್ಯಾತರ ರಾಜ್ಯ ಘಟಕದ ಅಧ್ಯಕ್ಷ ಜಬ್ಬಾರ್ ನೇಮಕ ಮಾಡಿ ಆದೇಶ ಹೊರಡಿಸಿದ್ದಾರೆ.

ವಿದ್ಯುತ್ ತಂತಿ ತುಳಿದು ರೈತ ಸಾವು



ಹುಣಸೂರು, ಏ.27– ತುಂಡಾಗಿ ಬಿದ್ದಿದ್ದ ವಿದ್ಯುತ್ ತಂತಿ ತುಳಿದು ರೈತನೋರ್ವ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ರಾಮಪಟ್ಟಣ ಗ್ರಾಮದಲ್ಲಿ ಶನಿವಾರ ನಡೆದಿದೆ. ಗ್ರಾಮದ ನಿವಾಸಿ ಸೋಮಶೇಖರ್ ಅವರ ಪುತ್ರ ಮಂಜು(35) ಸಾವನ್ನಪ್ಪಿದವರು. ಈತ ತನ್ನ ತಂದೆ ಹೆಸರಿನಲ್ಲಿದ್ದ 2.10 ಎಕರೆ ಹಾಗೂ ತಾಯಿ ಹೆಸರಿನಲ್ಲಿದ್ದ 3 ಎಕರೆ ಜಮೀನಿನಲ್ಲಿ ವ್ಯವಸಾಯ ಮಾಡುತ್ತಿದ್ದರು. ಎಂದಿನಂತೆ ಮಂಜು ಬೆಳಗ್ಗೆ 8.30ಕ್ಕೆ ಮೆಣಸು ಸೇರಿದಂತೆ ಇನ್ನಿತರ ಬೆಳೆಗಳಿಗೆ ನೀರು ಹಾಯಿಸಲು ಜಮೀನಿಗೆ ತೆರಳಿದ್ದರು. ಈ ವೇಳೆ ಜಮೀನಿನಲ್ಲಿ ತುಂಡಾಗಿ ಬಿದ್ದಿದ್ದ ವಿದ್ಯುತ್ ತಂತಿ ತುಳಿದು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಈ ಸಂಬಂಧ ಮೃತನ ಸಹೋದರ ಮನು ಬಿಳಿಕೆರೆ ಠಾಣೆಗೆ ದೂರು ನೀಡಿದ್ದು, ಪ್ರಕರಣ ದಾಖಲಿಸಿಕೊಂಡ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ ಮುಂದಿನ ಕ್ರಮ ಕೈಗೊಂಡಿದ್ದಾರೆ.



ಬನ್ನೂರಿನಲ್ಲಿ ಶ್ರೀಕೋದಂಡರಾಮಸ್ವಾಮಿ ಉತ್ಸವ ಮೂರ್ತಿ ಮೆರವಣಿಗೆ ವಿಜೃಂಭಣೆಯಿಂದ ನಡೆಯಿತು. ಈ ವೇಳೆ ಪ್ರಧಾನ ಅರ್ಚಕ ಕೃಷ್ಣಸ್ವಾಮಿ ಇದ್ದರು.

ಕೋಟೆಯಲ್ಲಿ ವಕೀಲರ ಸಂಘದಿಂದ ಅಂಬೇಡ್ಕರ್ ಜಯಂತಿ



ಹೆಚ್.ಡಿ.ಕೋಟೆಯಲ್ಲಿ ವಕೀಲರ ಸಂಘದಿಂದ ಅಂಬೇಡ್ಕರ್ ಜಯಂತಿ ಆಚರಿಸಲಾಯಿತು.

ಹೆಚ್.ಡಿ.ಕೋಟೆ, ಏ.27– ಪಟ್ಟಣದ ನ್ಯಾಯಾಲಯದ ಆವರಣದಲ್ಲಿ ವಕೀಲರ ಸಂಘದಿಂದ ಶನಿವಾರ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿಯನ್ನು ಆಚರಿಸಲಾಯಿತು.

ಪಟ್ಟಣದ ಹಿರಿಯ ಸಿವಿಲ್ ನ್ಯಾಯಾಧೀಶ ಬಿ.ಸಂದೇಶ್ ಪ್ರಭು ಮಾತನಾಡಿ, ಸಮಾಜದಲ್ಲಿದ್ದ ಜಾತಿಯ ಸಂಕೋಲೆ ಬಿಡಿಸಲು ಅಂಬೇಡ್ಕರ್ ಅವರು ಪ್ರಪಂಚದ ಬೇರೆ ಬೇರೆ ದೇಶಗಳ ಕಾನೂನನ್ನು ಅಧ್ಯಯನ ಮಾಡಿ ಭಾರತದಂತಹ ದೊಡ್ಡ ದೇಶಕ್ಕೆ ಯಾವ ರೀತಿಯ ಸಂವಿಧಾನ ಬೇಕು ಎಂಬುದಾಗಿ ಸುಧೀರ್ಘ ಅಧ್ಯಯನ ನಡೆಸಿ ಸಂವಿಧಾನ ರಚಿಸಿಕೊಟ್ಟರು ಎಂದರು.

ಭೂಮಿಯಲ್ಲಿರುವುದು ಒಂದೇ ಜಾತಿ ಅದು ಮನುಷ್ಯ ಜಾತಿ. ಆಸ್ಪತ್ರೆಯಲ್ಲಿ ಓರ್ವ ರೋಗಿಗೆ ರಕ್ತ ಬೇಕಾದಾಗ ವೈದ್ಯರು ಯಾವ ಜಾತಿ ರಕ್ತ ಬೇಕು ಎಂದು ಕೇಳುವ ಬದಲು ಇಂತಹ ಗ್ರೂಪ್ ರಕ್ತ ಬೇಕು ಎಂದು ಕೇಳುತ್ತಾರೆ. ಹಾಗಾಗಿ ನಾವೆಲ್ಲರೂ ಮನುಷ್ಯ ಜಾತಿ ಸೇರಿದವರು ಎಂಬ ಭಾವನೆ ಮೂಡಿಸಿಕೊಳ್ಳಬೇಕು ಎಂದರು.

ಕಾನೂನಿನಡಿ ನಾವು ಕೆಲಸ ಮಾಡಬೇಕು. ಸಮಾಜದಲ್ಲಿರುವ ಅಸಹಾಯಕರಿಗೆ ಸಹಾಯ ಮಾಡಬೇಕು ಎಂದ ಅವರು ಅಂಬೇಡ್ಕರ್ ಅವರ ಆದರ್ಶಗಳನ್ನು ಮೈಗೂಡಿಸಿಕೊಂಡಾಗ ಮಾತ್ರ ಅವರ ಜಯಂತಿಗೆ ಅರ್ಥ ಬರುತ್ತದೆ ಎಂದರು.

ಪ್ರಧಾನ ಸಿವಿಲ್ ನ್ಯಾಯಾಧೀಶ ಕೆ.ಜಿ.ಸತೀಶ್ ಮಾತನಾಡಿ, ನ್ಯಾಯಾಧೀಶರಾಗಿ, ವಕೀಲರಾಗಿ ನಾವು ಮಾತನಾಡಲು ಅಂಬೇಡ್ಕರ್ ಸಂವಿಧಾನ ಕಾರಣ. ಪುಸ್ತಕಗಳು ಜ್ಞಾನ ಸಂಪಾದಿಸುವ ಜ್ಞಾನ ಬಂಡಾರ. ಪುಸ್ತಕಗಳನ್ನು ಓದಿದರೇ ಏನನ್ನಾದರೂ ಎದುರಿಸಬಹುದು ಎಂಬುದನ್ನು ಅಂಬೇಡ್ಕರ್ ಸಾಧಿಸಿ ತೋರಿಸಿದ್ದಾರೆ ಎಂದರು.

ಇತಿಹಾಸ ಮರೆತವರು ಇತಿಹಾಸ ಸೃಷ್ಟಿಸಲರು. ಸಂವಿಧಾನ ದುರ್ಬಳಕೆಯಾದರೆ ಅದನ್ನು ಮೊದಲು ಸುಡುವ ವ್ಯಕ್ತಿ ನಾನಾಗುತ್ತೇನೆ ಎಂದು ಅಂಬೇಡ್ಕರ್ ಅಂದು ಹೇಳಿದ್ದಾರೆ. ಹಾಗಾಗಿ ಸಂವಿಧಾನವನ್ನು ಸದ್ಬಳಕೆ ಮಾಡಿಕೊಳ್ಳೋಣ ಎಂದರು.

ಮುಖ್ಯ ಭಾಷಣಕಾರ ಲಾ ಫಾರ್ ಆಲ್ ಮಾಸಪತ್ರಿಕೆ ಸಂಪಾದಕ ಸುರೇಶ್ ಕರ್ತಾಳ್ ಮಾತನಾಡಿ, ಮತದಾನ ನಮ್ಮ ಮನೆ ಮಗಳಿದ್ದಂತೆ. ಅದನ್ನು ಯಾವುದೇ ಕಾರಣಕ್ಕೂ ಮಾರಿಕೊಳ್ಳಬೇಡಿ ಎಂದು ಅಂಬೇಡ್ಕರ್ ಹೇಳಿದರು. ಆದರೆ ಇಂದು ಅವರ ಅನುಯಾಯಿಗಳಾದ ನಾವು ಅದಕ್ಕೆ ವಿರುದ್ಧವಾಗಿ ನಡೆದುಕೊಂಡು ಅಂಬೇಡ್ಕರ್ ಆಶಯಗಳಿಗೆ ಅನ್ಯಾಯ ಮಾಡುತ್ತಿದ್ದೇವೆ. ನೊಂದವರಿಗೆ ನ್ಯಾಯ ಕೊಡಿಸಬೇಕಾದ ಜವಾಬ್ದಾರಿ ನ್ಯಾಯಾಂಗಕ್ಕೆ ಮಾತ್ರ ಇದ್ದು ಅದನ್ನು ನ್ಯಾಯವಾದಿಗಳಾದ ನಾವು ಪಾಲನೆ ಮಾಡಬೇಕು ಎಂದರು.

ಕಾರ್ಯಕ್ರಮದಲ್ಲಿ ಸರ್ಕಾರಿ ಅಭಿಯೋಜಕ ಮಹೇಂದ್ರ, ವಕೀಲರ ಸಂಘದ ಅಧ್ಯಕ್ಷ ಗಂಗರಾಜು, ಉಪಾಧ್ಯಕ್ಷ ಚಿಕ್ಕನಾಯಕ, ಪ್ರಧಾನ ಕಾರ್ಯದರ್ಶಿ ಸಿದ್ದಪ್ಪಾಜಿ, ಕಾರ್ಯದರ್ಶಿ ಮಣಿರಾಜ್, ವಕೀಲರಾದ ಮಹೇಶ್, ಸೋಮಶೇಖರ್, ರಮೇಶ್, ಜೆ.ಸಿ.ಕುಮಾರ್, ನಿಂಗರಾಜು, ನಾಗೇಶ್ ಇದ್ದರು.

45
ಮೈಸೂರು ಮಿತ್ರ

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸ ಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತು ದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು